# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಸಮನ್ವಯ ಶಿಕ್ಷಣ

## ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೆಂಬಲ



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಇಲಕಲ್ಲ, ಬಾಗಲಕೋಟೆ

# ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್‌ಶಿಪ್ ಅಕಾಡಮಿ (SLA_SISLEP)**
**ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL_NIEPA), ನವದೆಹಲಿ**
**ಇವರ ಸಹಯೋಗದಲ್ಲಿ**

## ತರಬೇತಿ ಸಾಹಿತ್ಯ ಕೈಪಿಡಿ

# "ಸಮನ್ವಯ ಶಿಕ್ಷಣ–ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೆಂಬಲ"

**ಸಹಕಾರ:**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಳಕಲ್ಲ, ಜಿ: ಬಾಗಲಕೋಟೆ**

# 2023–24

# ಪರಿಕಲ್ಪನೆ

**ಡಾ.ಬಿ.ಕೆ.ಎಸ್.ವರ್ಧನ್**

**ಮಾನ್ಯ ನಿರ್ದೇಶಕರು**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ**

**ಮಾರ್ಗದರ್ಶನ:**

ಶ್ರೀ ಬಿ. ಕೆ. ನಂದನೂರು

**ಪಾಂಶುಪಾಲರು, ಡಯಟ್, ಇಳಕಲ್ಲ, ಜಿ: ಬಾಗಲಕೋಟೆ**

## -: ಸಾಹಿತ್ಯ ರಚನಾ ತಂಡ :-

**ಡಾ. ಮಲ್ಲಿಕಾರ್ಜುನ ಎಂ ಬೆಳಗಲ್ಲ**

ಉಪನ್ಯಾಸಕರು ಡಯಟ್ ಇಲಕಲ್ಲ ಜಿ: ಬಾಗಲಕೋಟ

**ಶ್ರೀ ಎಸ್ ಎಸ್ ಹಡಗಲಿ**

ಉಪನ್ಯಾಸಕರು ಡಯಟ್ ಇಲಕಲ್ಲ ಜಿ: ಬಾಗಲಕೋಟೆ

**ಶ್ರೀ.ಎ.ಎಂ.ಕಲ್ಯಾಣಿ**

ಕನ್ನಡ ಭಾಷಾ ಶಿಕ್ಷಕರು ಸರಕಾರಿ ಪ್ರೌಢಶಾಲೆ

ಹಿರೇಸಿಂಗನಗುತ್ತಿ ತಾ: ಹುನಗುಂದ ಜಿ: ಬಾಗಲಕೋಟೆ

**ಶ್ರೀ.ಆನಂದ.ಎಂ.ಹಲಕುರ್ಕಿ**

ಕನ್ನಡ ಭಾಷಾ ಶಿಕ್ಷಕರು ಸರಕಾರಿ ಪ್ರೌಢಶಾಲೆ

ನವನಗರ -೪೩ ಬಾಗಲಕೋಟೆ

**ಶ್ರೀ ಸುಭಾಸಚಂದ್ರ ಅ. ಭಜಂತ್ರಿ**

ಆಂಗ್ಲ ಭಾಷಾ ಶಿಕ್ಷಕರು

ಸರಕಾರಿ ಪ್ರೌಢಶಾಲೆ ಬಾದಾಮಿ ಜಿ: ಬಾಗಲಕೋಟೆ

### ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿ



ಡಾ. ಬಿ.ಕೆ.ಎಸ್. ವರ್ಧನ್
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ  ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ

ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**ದಿನಾಂಕ: 25, ಮಾರ್ಚ್, 2025** **(ಡಾ. ಬಿ.ಕೆ.ಎಸ್. ವರ್ಧನ್)**

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action - POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



### ಸಂಸ್ಥೆಯ ದೂರದರ್ಶಿತ್ವ:

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್: sislepdirector.dwd@gmail.com**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ

ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

## ❖ ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.
- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ

ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.
- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ

ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

- **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ

ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು

ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು

ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**
**-- ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಅಧ್ಯಾಯ | ವಿಷಯಾನುಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 01 | ಸಮನ್ವಯ ಶಿಕ್ಷಣ | 1-8 |
| 02 | ವಿಶೇಷ ಅಗತ್ಯವುಳ್ಳ ಮಕ್ಕಳು | 9-30 |
| 03 | ಶಾಲೆಗಳು ಮಾಡಬಹುದಾದ ಕಾರ್ಯಗಳು | 31 - 43 |
| 04 | ಕಲಿಕೆಯ ಹೊಂದಾಣಿಕೆ ಮತ್ತು ಸಂಪನ್ಮೂಲ ಬೆಂಬಲ | 44– 56 |
| 05 | ವಿಶೇಷ ಅಗತ್ಯವುಳ್ಳ ಮಕ್ಕಳ ಕಾಯ್ದೆಗಳು ಹಾಗೂ ಉಪಕ್ರಮಗಳು | 57-63 |
| 06 | ಪರಾಮರ್ಶನ ಗ್ರಂಥಗಳು (ಗ್ರಂಥ ಋಣ) | 64 |
| 07 | ಹೆಚ್ಚುವರಿ ಸಂಪನ್ಮೂಲಗಳ ಜಾಲಕೊಂಡಿಗಳು (ಯಶೋಗಾಥೆಗಳು / ಅಧ್ಯಯನದ ವರದಿಗಳು) | 65 |
| 08 | ಅನುಬಂಧಗಳು | 66-70 |
| 09 | ನನ್ನ ಕಲಿಕೆ - ನನ್ನ ಯೋಜನೆ | 71-72 |

# ಅಧ್ಯಾಯ – 01

## ಸಮನ್ವಯ ಶಿಕ್ಷಣ

### ಹಿನ್ನೆಲೆ

ತರಗತಿ ಶಿಕ್ಷಕರು ಕಲಿಸುವ ಪ್ರಕ್ರಿಯೆಯಲ್ಲಿ ತೊಡಗಿರುವಾಗ ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನ ವಾತಾವರಣವನ್ನು ಒದಗಿಸುತ್ತಾರೆ. ಅದರೂ ವಿದ್ಯಾರ್ಥಿಗಳ ಗ್ರಹಿಕೆ ಒಂದೇ ರೀತಿಯಲ್ಲಿ ಇರುವುದಿಲ್ಲ. ಬೇರೆ ಬೇರೆ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಮ್ಮ ನಿರೀಕ್ಷೆಯ ಮಟ್ಟವನ್ನು ತಲುಪದಿರಬಹುದು. ಇಂತಹ ಸಂದರ್ಭದಲ್ಲಿ ಬೇರೆ ಬೇರೆ ಕಲಿಕೆ-ಬೋಧನೆಯ ತಂತ್ರಗಳನ್ನು, ವಿವಿಧ ಬೋಧನಾ ಮಾರ್ಗೋಪಾಯಗಳನ್ನು, ಕಲಿಕಾ ಪರಿಕರಗಳನ್ನು ಬಳಸಿ, ಎಲ್ಲಾ ವಿದ್ಯಾರ್ಥಿಗಳು ನಿರೀಕ್ಷಿತ ಮಟ್ಟದ ಕಲಿಕೆಯನ್ನು ತಲುಪುವಂತೆ ಮಾಡಬೇಕಾಗಿದೆ. ಇಂತಹ ಪ್ರಯತ್ನ; ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಸಮನ್ವಯಗೊಳಿಸುವ ಪ್ರಕ್ರಿಯೆಯಾಗಿದೆ.

ಮಗುವಿಗೆ ಗ್ರಹಿಸಲು ನ್ಯೂನತೆಗಳು ಇದ್ದಾಗ ನಮ್ಮ ಕಲಿಕೆಯ ನಿರೀಕ್ಷೆಗಳ ಮಟ್ಟ ಬದಲಾಗಬೇಕಾಗುತ್ತದೆ. ಉದಾಹರಣೆಗೆ : ಸಾಮಾನ್ಯ ಮಗು ಒಂದನೇ ತರಗತಿ ಮುಗಿಸುವ ಸಮಯಕ್ಕೆ ಸರಾಸರಿ ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳನ್ನು ಕಲಿತಿರಬೇಕು ಎನ್ನುವುದು ಒಂದು ನಿರೀಕ್ಷೆ. ಆದರೆ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅದರಲ್ಲೂ ಬುದ್ಧಿಮಾಂದ್ಯ ಮಕ್ಕಳಿಗೆ ಈ ದಿಶೆಯಲ್ಲಿ ಗುಣಾತ್ಮಕ ಶಿಕ್ಷಣ ನೀಡಬೇಕಾಗಿದೆ. ಇಂತಹ ವೈವಿಧ್ಯಮಯ ಕಲಿಕೆಯ ಇತಿ-ಮಿತಿಗಳು ತರಗತಿಯ ಸನ್ನಿವೇಶದಲ್ಲಿ ಸಾಮಾನ್ಯ. ಈ ಅಂಶಗಳನ್ನು ಆಧರಿಸಿ ಇಂತಹ ಮಕ್ಕಳನ್ನು ಪ್ರತ್ಯೇಕಿಸಿ ಶಿಕ್ಷಣ ನೀಡುವುದರಿಂದ ಮಗುವಿನ ಸಮಗ್ರ ಬೆಳವಣಿಗೆಗೆ ಬಾಧಕವಾಗುತ್ತದೆ. ಬದಲಾಗಿ ವಿವಿಧ ಸಾಮರ್ಥ್ಯವುಳ್ಳ ಮಕ್ಕಳನ್ನು ಒಂದೇ ತರಗತಿಯಲ್ಲಿಟ್ಟು ನವೀನ ಕಲಿಕೆ-ಬೋಧನಾ ವಿಧಾನಗಳನ್ನು ವೈಯಕ್ತಿಕ ಭಿನ್ನತೆ, ಅಗತ್ಯತೆಗಳನ್ನು ಅನುಸರಿಸಿ, ಸರಿಹೊಂದಿಸಿ ಬೋಧಿಸುವುದರಿಂದ ಎಲ್ಲ ಮಕ್ಕಳು ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಕಾಸ ಹೊಂದಲು ಸಾಧ್ಯವಾಗುತ್ತದೆ. ಇದು ಸಮನ್ವಯ ಶಿಕ್ಷಣದ ಮೂಲ ಆಶಯವಾಗಿದೆ.

### ಸಮನ್ವಯ/ ಅಂತರ್ಗತ / ಸಂಪೂರ್ಣ ಸೇರ್ಪಡೆಗೊಂಡ ಶಿಕ್ಷಣ ಎಂದರೇನು?

ಪ್ರತಿ ಮಗುವಿಗೆ ಶಿಕ್ಷಣ ಪಡೆಯುವ ಹಕ್ಕಿದೆ. ಅದು ವಿಶೇಷ ಅಗತ್ಯವುಳ್ಳ ಮಕ್ಕಳನ್ನೂ ಒಳಗೊಂಡಿದೆ. ಸಮನ್ವಯ/ಅಂತರ್ಗತ/ ಸಂಪೂರ್ಣ ಸೇರ್ಪಡೆಗೊಂಡ ಶಿಕ್ಷಣ ವಿಶೇಷ ಅಗತ್ಯವುಳ್ಳ **ಮಗುವಿನ ಮೂಲಭೂತ ಮಾನವ ಹಕ್ಕು** ಎಂದು ಯುಎನ್‌ಸಿಆರ್‌ಪಿಡಿ (UNCRPD) ಒತ್ತಿ ಹೇಳುತ್ತದೆ. ಸಮನ್ವಯ/ ಅಂತರ್ಗತ / ಸಂಪೂರ್ಣ ಸೇರ್ಪಡೆಗೊಂಡ ಶಿಕ್ಷಣ ವ್ಯವಸ್ಥೆಯು ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ ಅಥವಾ ಅವಶ್ಯಕತೆಗೆ ತಕ್ಕಂತೆ, ಮತ್ತು ಎಲ್ಲಾ ಹಂತಗಳಲ್ಲಿ-ಪ್ರಿ ಸ್ಕೂಲ್/ಅಂಗನವಾಡಿ, ಬಾಲವಾಡಿ, ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ವೃತ್ತಿಪರ ಮತ್ತು ಜೀವನಪರ್ಯಂತ ಕಲಿಕೆಗೆ ಅವಕಾಶ ನೀಡುತ್ತದೆ.

**UNCRPD ಹೇಳಿಕೆ**

**"ಸಮನ್ವಯ (Inclusion) :** ವಿನ್ಯಾಸ ಮತ್ತು ಭೌತಿಕ ರಚನೆಗಳು, ಬೋಧನಾ ವಿಧಾನಗಳು ಮತ್ತು ಪಠ್ಯಕ್ರಮದ ಜೊತೆಗೆ ಸಂಸ್ಕೃತಿ, ನೀತಿ ಮತ್ತು ಅಭ್ಯಾಸವನ್ನು ಅಳವಡಿಸಿಕೊಳ್ಳುವ ಶೈಕ್ಷಣಿಕ ವಾತಾವರಣವು ತಾರತಮ್ಯವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶಿಸಬಹುದಾಗಿದೆ. ಈ ಅಳವಡಿಕೆಗಳಿಲ್ಲದೆ ಮುಖ್ಯವಾಹಿನಿಯ ತರಗತಿಗಳಲ್ಲಿ ವಿಕಲಾಂಗ ವಿದ್ಯಾರ್ಥಿಗಳನ್ನು ಇರಿಸುವುದು ಸೇರ್ಪಡೆಯಾಗುವುದಿಲ್ಲ."

ವಿಶೇಷ ಅಗತ್ಯತೆಯುಳ್ಳ ಮಕ್ಕಳಾದ ತೃತೀಯ ಲಿಂಗಿಗಳು, ಅರಣ್ಯ ವಾಸಿಗಳು, ಬುಡಕಟ್ಟು ಜನಾಂಗ, ಅನ್ಯಭಾಷೀಯರು, ಗಡಿನಾಡ ಪ್ರದೇಶದ ವಾಸಿಗಳು, ವಲಸಿಗರು, ವಿಭಿನ್ನ ಕಲಿಕೆಯ ಮಕ್ಕಳು ಅಲ್ಲದೆ ಪಿ.ಡಬ್ಲ್ಯೂ,ಡಿ, ಕಾಯ್ದೆ-2016ರ ಪ್ರಕಾರ 21 ರೀತಿಯ ನ್ಯೂನತೆಯುಳ್ಳ ಮಕ್ಕಳು ಈ ನ್ಯೂನತೆಗಳನ್ನು ಹೊರತುಪಡಿಸಿದ ತರಗತಿಯ ಎಲ್ಲಾ ಮಕ್ಕಳಿಗೆ ಅನುಕೂಲಕರ ಪರಿಸರ, ಸ್ಫೂರ್ತಿ, ವಿಶೇಷ ತರಬೇತಿ ದೊರೆತಾಗ ವಿಶೇಷ ಅಗತ್ಯವುಳ್ಳ ಮಕ್ಕಳು ಇತರರಂತೆ ಅಥವಾ ಸಾಮಾನ್ಯರಿಗಿಂತ ಹೆಚ್ಚು ಸಾಧನೆ ಮಾಡುತ್ತಾರೆ, ಮಾಡಿದ್ದಾರೆ ಎಂಬುದು ಅನೇಕ ಸಂದರ್ಭಗಳಲ್ಲಿ ಧೃಡಪಟ್ಟಿದೆ.



## ಎನ್.ಇ.ಪಿ.2020 ರ ಆಶಯ

### ಸಮಾನ ಮತ್ತು ಸಮನ್ವಯ ಶಿಕ್ಷಣ: ಎಲ್ಲರಿಗಾಗಿ ಕಲಿಕೆ (ಭಾಗ-1 ಅಧ್ಯಾಯ 6)

6.1 ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಶಿಕ್ಷಣವು ಏಕೈಕ ದೊಡ್ಡ ಸಾಧನವಾಗಿದೆ. ಅಂತರ್ಗತ ಮತ್ತು ನ್ಯಾಯಸಮ್ಮತವಾದ ಶಿಕ್ಷಣ ಪಡೆಯುವಂತೆ ಮಾಡುವುದು ನಿಜಕ್ಕೂ ಒಂದು ಪ್ರಮುಖ ಗುರಿಯಾಗಿದ್ದು, ಅಂತರ್ಗತ ಮತ್ತು ಸಮಾನ ಸಮಾಜವನ್ನು ನಿರ್ಮಿಸಲು ಪ್ರಮುಖ ನಿರ್ಣಾಯಕ ಅಂಶವಾಗಿದೆ. ಇಂತಹ ಸಮಾಜದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಕನಸು ಕಾಣಲು, ಅಭಿವೃದ್ಧಿ ಹೊಂದಲು ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಲು ಅವಕಾಶವಿದೆ. ಶಿಕ್ಷಣ ವ್ಯವಸ್ಥೆಯು ದೇಶದ ಮಕ್ಕಳಿಗೆ ಪ್ರಯೋಜನವನ್ನು ನೀಡುವ ಗುರಿಯನ್ನು ಹೊಂದಿದ್ದು, ಜನನ ಅಥವಾ ಹಿನ್ನೆಲೆಯ ಸಂದರ್ಭಗಳಿಂದಾಗಿ ಯಾವುದೇ ಮಗು ಕಲಿಯಲು ಮತ್ತು ಉತ್ಕೃಷ್ಟ ಸಾಧನೆ ಮಾಡಲು ಇರುವ ಯಾವುದೇ ಅವಕಾಶವನ್ನು ಕಳೆದುಕೊಳ್ಳುವಂತಿರಬಾರದು. ಶಾಲಾ ಶಿಕ್ಷಣದಲ್ಲಿನ ಲಭ್ಯತೆ, ಭಾಗವಹಿಸುವಿಕೆ ಮತ್ತು ಕಲಿಕಾ ಫಲಗಳಲ್ಲಿನ ಸಾಮಾಜಿಕ ವರ್ಗದ ಅಂತರವನ್ನು ತಗ್ಗಿಸುವುದು, ಶಿಕ್ಷಣ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂದು ಈ ನೀತಿಯು ಪುನರುಚ್ಚರಿಸುತ್ತದೆ. ಈ ಅಧ್ಯಾಯವನ್ನು ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಸೇರ್ಪಡೆಯ ಸಾದೃಶ್ಯ ಸಮಸ್ಯೆಗಳನ್ನು ಚರ್ಚಿಸುವ ಅಧ್ಯಾಯ ೧೪ ರೊಂದಿಗೆ ಓದಬಹುದು.

6.2 ಭಾರತೀಯ ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರದ ನೀತಿಗಳು ಎಲ್ಲಾ ಹಂತದ ಶಾಲಾ ಶಿಕ್ಷಣದಲ್ಲಿ ಲಿಂಗ ಮತ್ತು ಸಾಮಾಜಿಕ ವರ್ಗದ ಅಂತರವನ್ನು ನಿವಾರಿಸುವಲ್ಲಿ ಸ್ಥಿರವಾದ ಪ್ರಗತಿಯನ್ನು ಸಾಧಿಸಿದ್ದರೂ, ವಿಶೇಷವಾಗಿ ಪ್ರೌಢ ಹಂತದ ಶಿಕ್ಷಣ ಕ್ಷೇತ್ರದಲ್ಲಿ ಐತಿಹಾಸಿಕವಾಗಿ ಕಡಿಮೆ ಪ್ರತಿನಿಧಿಸಲ್ಪಟ್ಟಿರುವ ಮತ್ತು ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ಅಸಮಾನತೆಗಳು ಇನ್ನೂ ಉಳಿದಿವೆ. ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು (ಎಸ್‌ಇಡಿಜಿಗಳನ್ನು), ಲಿಂಗ (ವಿಶೇಷವಾಗಿ ಸ್ತ್ರೀ ಮತ್ತು ತೃತೀಯ ಲಿಂಗಿ), ಸಾಮಾಜಿಕ-ಸಾಂಸ್ಕೃತಿಕ ಗುರುತುಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮತ್ತು ಅಲ್ಪಸಂಖ್ಯಾತರಂತಹ), ಭೌಗೋಳಿಕ ಗುರುತುಗಳು (ಉದಾಹರಣೆಗೆ ಹಳ್ಳಿಗಳು, ಸಣ್ಣ ಪಟ್ಟಣಗಳು ಮತ್ತು ಮಹತ್ವಾಕಾಂಕ್ಷೆಯ ಜಿಲ್ಲೆಗಳ ವಿದ್ಯಾರ್ಥಿಗಳು), ವಿಕಲಾಂಗತೆಗಳು (ಕಲಿಕಾ ನ್ಯೂನತೆಗಳು ಸೇರಿದಂತೆ), ಮತ್ತು ಸಾಮಾಜಿಕ- ಆರ್ಥಿಕ ಪರಿಸ್ಥಿತಿಗಳು (ವಲಸೆ ಸಮುದಾಯಗಳು, ಕಡಿಮೆ ಆದಾಯದ ಕುಟುಂಬಗಳು, ದುರ್ಬಲ ಪರಿಸ್ಥಿತಿಯಲ್ಲಿರುವ ಮಕ್ಕಳು, ಕಳ್ಳಸಾಗಣೆಗೆ ಬಲಿಯಾದವರು ಅಥವಾ ಅವರ ಮಕ್ಕಳು, ನಗರ ಪ್ರದೇಶಗಳಲ್ಲಿ ಭಿಕ್ಷುಕರು ಸೇರಿದಂತೆ ಅನಾಥರು, ಮತ್ತು ನಗರಗಳಲ್ಲಿನ ಬಡವರು) ಎಂದು ವಿಶಾಲವಾಗಿ ವರ್ಗೀಕರಿಸಬಹುದು. ಶಾಲೆಗಳಲ್ಲಿ ೧ನೇ ತರಗತಿಯಿಂದ ೧೨ನೇ ತರಗತಿಯವರೆಗೆ ಒಟ್ಟಾರೆ ದಾಖಲಾತಿ ದರಗಳು ಸ್ಥಿರವಾಗಿ ಕುಸಿಯುತ್ತಿವೆಯಾದರೂ, ದಾಖಲಾತಿಗಳಲ್ಲಿನ ಈ ಕುಸಿತವು ಅನೇಕ ಎಸ್‌ಇಡಿಜಿಗಳಲ್ಲಿ ಹೆಚ್ಚು ಸ್ಪಷ್ಟವಾಗಿದೆ, ಅಲ್ಲದೇ ಈ ಪ್ರತಿಯೊಂದು ಎಸ್‌ಇಡಿಜಿಗಳಲ್ಲಿನ ವಿದ್ಯಾರ್ಥಿನಿಯರ ದಾಖಲಾತಿ ದರದಲ್ಲಿ ಇನ್ನೂ ಹೆಚ್ಚಿನ ಕುಸಿತ ಮತ್ತು ಉನ್ನತ ಶಿಕ್ಷಣದಲ್ಲಿ ಅದಕ್ಕಿಂತಲೂ ಹೆಚ್ಚಿನ ಕುಸಿತ ಕಂಡುಬರುತ್ತದೆ. ಸಾಮಾಜಿಕ-ಸಾಂಸ್ಕೃತಿಕ ವಿಭಾಗದಲ್ಲಿ ಬರುವ ಎಸ್‌ಇಡಿಜಿಗಳ ಸಂಕ್ಷಿಪ್ತ ಅವಲೋಕನವನ್ನು ಈ ಕೆಳಗಿನ ಉಪ-ವಿಭಾಗಗಳಲ್ಲಿ ನೀಡಲಾಗಿದೆ.

**ಯಶೋಗಾಥೆಗಳು :**

**1. ಡೇವಿಡ್ ಹಾರ್ಟ ಮನ್ :** https://youtu.be/3KYrsvcuOQA?si=htHLAT7GZ6qqTMuN

**2. ಸುಧಾಚಂದ್ರನ್ :** https://youtu.be/dva1oIWL9To?si=FqfqwW13vfvgh7UQ

**3. ಶೀತಲ್ ದೇವಿ :** https://youtu.be/d_SheEV43XU?si=NPVnSreovbWRpYvF

## ಪರಿಕಲ್ಪನಾತ್ಮಕ ಟಿಪ್ಪಣಿ

ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಹಾಗೂ ಕಲಿಕೆಯಲ್ಲಿ ಭಿನ್ನತೆಯುಳ್ಳ ಮಕ್ಕಳಿಗೆ ಅವಕಾಶ ಒದಗಿಸುವುದು ಒಂದು ನಾಗರೀಕ ವ್ಯವಸ್ಥೆಯ ಜವಾಬ್ದಾರಿ. ಸಾಮಾನ್ಯ ಶಾಲೆ ಮತ್ತು ತರಗತಿಗಳಲ್ಲಿ ಸಾಮಾನ್ಯ ಮಕ್ಕಳೊಂದಿಗೆ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಮನ್ವಯಗೊಳಿಸುವುದು ಮಾನವ ಹಕ್ಕುಗಳ ಆಶಯಕ್ಕೆ ಪೂರಕವಾಗಿದೆ. ಮಾನವ ಹಕ್ಕುಗಳ ಆಂದೋಲನದ ಜಾಗೃತಿ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ನಡೆಯುತ್ತಿದೆ. ಇದು ಬದುಕಿನ ಎಲ್ಲಾ ವಿಷಯಗಳಲ್ಲೂ, ವಿಶೇಷ ಅಗತ್ಯತೆಯುಳ್ಳವರನ್ನು ಒಳಗೊಂಡಂತೆ ಎಲ್ಲ ಜನರ ಸಂಪೂರ್ಣ ಸಮನ್ವಯತೆಗೆ ಕರೆ ನೀಡುತ್ತದೆ ಹಾಗೂ ವಿವಿಧ ಅಂತರಾಷ್ಟ್ರೀಯ ಕಾರ್ಯನೀತಿಗಳೂ ಸಹ ಸಮನ್ವಯ ಶಿಕ್ಷಣಕ್ಕೆ ಒತ್ತು ನೀಡುತ್ತವೆ.

1) ಸಮನ್ವಯ ಶಿಕ್ಷಣವನ್ನು ಹೇಗೆ ಅರ್ಥೈಸುವಿರಿ.
2) ಭಾಗೀದಾರರಾದ ನೀವು ನಿಮ್ಮ ಇತಿಮಿತಿಯಲ್ಲಿ ಸಮನ್ವಯ ಶಿಕ್ಷಣಕ್ಕೆ ಮಾಡಿದ ಪ್ರಯತ್ನಗಳನ್ನು ಪಟ್ಟಿ ಮಾಡಿರಿ.

### ಸಮನ್ವಯ ಶಿಕ್ಷಣವನ್ನು ಬಲಗೊಳಿಸುವ ಅವಶ್ಯಕತೆಯನ್ನು ಈ ಕೆಳಕಂಡ ನೀತಿಗಳು ಒತ್ತಿ ಹೇಳುತ್ತಿವೆ.

- ❖ ಮಾನವ ಹಕ್ಕುಗಳ ಜಾಗತಿಕ ಘೋಷಣೆ (UDHR 1948) ಪ್ರಕಾರ, ವಿಶ್ವದಲ್ಲಿ ಜನಿಸಿದ ಪ್ರತಿಯೊಂದು ಮಗುವೂ ಶಿಕ್ಷಣ ಪಡೆಯುವ ಮೂಲಕ ಅದರ ವೈಯಕ್ತಿಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವ, ಬೆಳವಣಿಗೆಯನ್ನು ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಹಕ್ಕನ್ನು ಪಡೆದಿವೆ.
- ❖ ವಿಶ್ವ ಸಂಸ್ಥೆಯು ಮಗುವಿನ ಹಕ್ಕುಗಳ ಬಗ್ಗೆ ಮಾಡಿದ ಒಪ್ಪಂದದ (UNCRC 1989) ಪ್ರಕಾರ "ಯಾವುದೇ ಸ್ವರೂಪದ ನ್ಯೂನತೆ ಇರುವ ಮಗು ಅದೇ ವಯಸ್ಸಿನ ಸಾಮಾನ್ಯ ಮಕ್ಕಳಂತೆ ಗೌರವಾನ್ವಿತ ಬಾಳ್ವೆ ನಡೆಸಲು ಬೇಕಾಗಿರುವ ಎಲ್ಲಾ ಹಕ್ಕುಗಳನ್ನು ಹೊಂದಿರುತ್ತದೆ" ಎಂದು ಘೋಷಿಸಿದೆ.
- ❖ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ಹಕ್ಕುಗಳನ್ನು ಖಚಿತಪಡಿಸಲು/ಜಾರಿಗೊಳಿಸಲು ವಿಶ್ವಸಂಸ್ಥೆ 1983-92 ರ ಅವಧಿಯನ್ನು **"ವಿಶ್ವ ಅಂಗವಿಕಲ ವ್ಯಕ್ತಿಗಳ ದಶಕ"** (UN Decade of Disabled Persons) ಎಂದೂ 1993-2002ರ ಅವಧಿಯನ್ನು **"ಏಷಿಯಾ ಮತ್ತು ಫೆಸಿಫಿಕ್ ಅಂಗವಿಕಲ ವ್ಯಕ್ತಿಗಳ ದಶಕ"**ವನ್ನಾಗಿ ಘೋಷಿಸಿತು.
- ❖ 'ಸರ್ವರಿಗೂ ಶಿಕ್ಷಣ'ದ (Education for All) ಗುರಿಯನ್ನು 2000ದ ಹೊತ್ತಿಗೆ ತಲುಪಬೇಕೆಂದು 1990ರಲ್ಲಿ ನಡೆದ ವಿಶ್ವಸಭೆಯಲ್ಲಿ ನಿಶ್ಚಯಿಸಲಾಯಿತು.


ಯುನೆಸ್ಕೋರವರ 1994ರ **'ಸಲಮಾಂಕ'** ಹೇಳಿಕೆಯು ಭಿನ್ನತೆ ಅಥವಾ ಯಾವುದೇ ರೀತಿಯ ಸಮಸ್ಯೆಗಳನ್ನು ಲೆಕ್ಕಿಸದೆ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಒದಗಿಸಲು ಅನುವಾಗುವಂತೆ ಶೈಕ್ಷಣಿಕ ಸೇವೆಗಳನ್ನು ಉತ್ತಮಪಡಿಸಲು ಸೂಚಿಸಿದೆ. ಅದರಂತೆ ಎಲ್ಲರಿಗೂ ಭೇದವಿಲ್ಲದೆ ಶಿಕ್ಷಣ ನೀಡಲು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾಮುಖ್ಯತೆ ಹಾಗೂ ಆಯವ್ಯಯದಲ್ಲಿ ಆದ್ಯತೆಯನ್ನು ನೀಡುವಂತೆ ಎಲ್ಲಾ ದೇಶದ ಸರ್ಕಾರಗಳಿಗೂ ಕರೆನೀಡಿದೆ. ಸಮನ್ವಯ ಶಿಕ್ಷಣಕ್ಕೆ

ಅಗ್ರಸ್ಥಾನ/ಪ್ರಾಮುಖ್ಯತೆಯನ್ನು ನೀಡಲು **'ಸಲಮಾಂಕ'** ಹೇಳಿಕೆಯನ್ನು ಒಂದು ನೀತಿ ಅಥವಾ ಕಾನೂನಿನಂತೆ ಅಳವಡಿಸಿಕೊಳ್ಳಲು ಮತ್ತು ನ್ಯೂನತೆಯುಳ್ಳ ಮಕ್ಕಳನ್ನೂ ಒಳಗೊಂಡಂತೆ ಎಲ್ಲಾ ಮಕ್ಕಳನ್ನು ಸಮೀಪದ ಸಾಮಾನ್ಯ ಶಾಲೆಗಳಲ್ಲಿ ದಾಖಲಿಸಿ ಕಲಿಸುವಂತೆ ಕರೆನೀಡಿದೆ.

**ಯುನೆಸ್ಕೋದ 1994ರ 'ಸಲಮಾಂಕ' ಘೋಷಣೆ**

ಜೂನ್ 1994ರಲ್ಲಿ 92 ಸರ್ಕಾರಗಳು ಮತ್ತು 25 ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು ಸ್ಪೇನ್ ದೇಶದ ಸಲಮಾಂಕದಲ್ಲಿ ನಡೆದ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಕುರಿತು ವಿಶ್ವ ಸಮ್ಮೇಳನವನ್ನು ರಚಿಸಿದರು. ಅವರು ಎಲ್ಲ ವಿಶೇಷ ಚೇತನ ಮಕ್ಕಳ ಶಿಕ್ಷಣದ ಬಗ್ಗೆ ಕ್ರಿಯಾತ್ಮಕ ಹೊಸ ಹೇಳಿಕೆಯನ್ನು ಒಪ್ಪಿಕೊಂಡರು, ಇದು ರೂಢಿಯಾಗಬೇಕೆಂದು ಕರೆ ನೀಡಿದರು. ಹೆಚ್ಚುವರಿಯಾಗಿ ಸಮ್ಮೇಳನವು ಈ ಪ್ರಕ್ರಿಯೆಗಾಗಿ ಹೊಸ ಚೌಕಟ್ಟನ್ನು ಅಳವಡಿಸಿಕೊಂಡಿದೆ, ಇದರ ಮಾರ್ಗದರ್ಶಿ ತತ್ವವೆಂದರೆ ಸಾಮಾನ್ಯ ಶಾಲೆಗಳು ಅವರ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ, ಭಾಷಾ ಇತರ ಪರಿಸ್ಥಿತಿಗಳನ್ನು ಲೆಕ್ಕಿಸದೆ ಎಲ್ಲಾ ಮಕ್ಕಳಿಗೆ ಅವಕಾಶ ಕಲ್ಪಿಸಬೇಕೆಂಬ ಶೈಕ್ಷಣಿಕ ನೀತಿ ಹಾಗೂ ಚೌಕಟ್ಟನ್ನು ಹೇಳಿರುತ್ತದೆ. ವಿಶೇಷ ಚೇತನ ಮಕ್ಕಳು ನೆರೆಹೊರೆಯ ಶಾಲೆಗೆ; 'ಮಗುವಿಗೆ ಅಂಗವೈಕಲ್ಯವಿಲ್ಲದಿದ್ದರೆ ಹಾಜರಾಗುತ್ತಾರೆ' ಎಂದು ಷರತ್ತು ವಿಧಿಸಬೇಕು.

ಫಲಿತಾಂಶ ನಿರಾಶಾದಾಯಕವಾಗಿದ್ದರಿಂದ ಸರ್ವರಿಗೂ ಶಿಕ್ಷಣದ ಗುರಿಯನ್ನು 2015ರ ಹೊತ್ತಿಗೆ ತಲುಪಲೇಬೇಕೆಂದು ನಿರ್ಧರಿಸಲಾಗಿದೆ. ನಾವೂ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿರುವುದರಿಂದ ವಿಶ್ವ ಜಾಗತಿಕ ಘೋಷಣೆಗೆ ಬದ್ಧರಾಗಿದ್ದೇವೆ.




**ಸಮನ್ವಯ ಶಿಕ್ಷಣದ ಔಚಿತ್ಯ :**

ಡೆವಿಡ್ ಹಾರ್ಟಮನ್, ಅರುಣಿಮಾ ಸಿನ್ಹಾ, ಸುಧಾಚಂದ್ರನಂತಹ ಪ್ರತಿಭಾನ್ವಿತರ ಸಾಲಿಗೆ ನಾವು ಸೇರುತ್ತೇವೆಯೆ? ಎಂಬ ಪ್ರಶ್ನೆಗೆ ಬಹುತೇಕ ಉತ್ತರದಲ್ಲಿ ಲಭ್ಯವಾಗುತ್ತದೆ. ಇದು ವೈಯಕ್ತಿಕ ಭಿನ್ನತೆಯ ಮೂಲಮಂತ್ರ. ಇನ್ನೂ ಗಾಢವಾಗಿ ಆಲೋಚಿಸಿದರೆ ಈ ಭಿನ್ನತೆಯೇ ನೈಸರ್ಗಿಕ ವ್ಯವಸ್ಥೆಯಲ್ಲಿ ಕಂಡುಬರುವ ದೃಢತೆಗೆ; ಪರಿಪಕ್ವತೆಗೆ ಆಧಾರವಾಗಿದೆ. ಇಂತಹ ಚಿಂತನೆಯ ದಾಟಿ, ಭಿನ್ನತೆ ಅಥವಾ ವೈವಿಧ್ಯತೆಯನ್ನು ಗೌರವಿಸಲು; ಅದನ್ನು ಒಪ್ಪಿಕೊಳ್ಳಲು ನೆರವಾಗುತ್ತದೆ.

ವಿಶೇಷ ಅಗತ್ಯತೆಯುಳ್ಳ ಮಕ್ಕಳಲ್ಲಿ ಕಾಣುವ ಸವಾಲೆನಿಸುವ ಸಾಮರ್ಥ್ಯಗಳನ್ನು ಇಂತಹ ನೆಲೆಯಿಂದ ಕಾಣುವ ಮನೋಭೂಮಿಕೆ ಪ್ರತಿಯೊಬ್ಬರಲ್ಲಿಯೂ ಜಾಗೃತವಾಗಬೇಕು. ನನ್ನಲ್ಲಿನ ಕೊರತೆಯಾಗಿರುವ ಯಾವುದೋ ಸಾಮರ್ಥ್ಯ ಇನ್ನೊಬ್ಬರಲ್ಲಿ ಅದು ಬೇರೆ ರೂಪದಲ್ಲಿ ವ್ಯಕ್ತವಾಗಿದೆ ಎಂಬ ತಿಳಿವಳಿಕೆ ಎಲ್ಲರಿಗೂ ಅಗತ್ಯ. ಪ್ರತಿಯೊಂದು ಸಮುದಾಯ ಕೆಲವು ಸಾಮಾನ್ಯ ನಿರೀಕ್ಷೆಗಳನ್ನು ವ್ಯಕ್ತಿಯೋರ್ವ ಮೈಗೂಡಿಸಿಕೊಳ್ಳಬೇಕೆಂದು ಬಯಸುತ್ತದೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯ, ಸಾಮಾಜೀಕರಣ, ಶಿಕ್ಷಣ, ಉದ್ಯೋಗ ಮುಂತಾದ ಸಂಗತಿಗಳು ಸೇರಿವೆ. ಇವೆಲ್ಲವೂ ಸುಲಲಿತವಾಗಿ ವ್ಯಕ್ತಿಯಲ್ಲಿ ರೂಪುಗೊಳ್ಳಲು ಸಾಮಾನ್ಯ ಶಿಕ್ಷಣಕ್ರಮ ಸಹಾಯ ಮಾಡುತ್ತದೆ. ಹಾಗಾಗಿ ಸಮನ್ವಯ ಶಿಕ್ಷಣ ಹೊರೆಯಲ್ಲ ಬದಲಾಗಿ ಅದು ವ್ಯಕ್ತಿಗಳ ನಡುವೆ ಪ್ರೀತಿ, ಸಾಮರಸ್ಯ ಸಮಾನತೆ, ಸ್ವಾವಲಂಬನೆ, ಸಹಬಾಳ್ವೆ ಮತ್ತು ಹೊಂದಾಣಿಕೆಯನ್ನು ಬೆಳೆಸುವ; ಸಾಮಾಜಿಕ ಹಂದರವನ್ನು ಬಂಧಗೊಳಿಸುವ ಸಾಧನ.

## ವ್ಯಾಪ್ತಿ

- ಸಮನ್ವಯ ಶಿಕ್ಷಣವು ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಿರುತ್ತದೆ. ಆದರೆ ಅತೀ ತೀವ್ರ ಬುದ್ಧಿಮಾಂದ್ಯ, ಮೆದುಳಿನ-ಪಾರ್ಶ್ವವಾಯು, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿದವರನ್ನು ಸಮನ್ವಯ ಶಿಕ್ಷಣದ ಅಡಿಯಲ್ಲಿ ತರಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇಂತಹ ಮಕ್ಕಳ ಕಲಿಕೆ ಮತ್ತು ಗ್ರಹಿಕೆಯ ಸಾಮರ್ಥ್ಯ ಅತ್ಯಂತ ತಳಮಟ್ಟದಲ್ಲಿ ಇರುತ್ತದೆ. ಇವರನ್ನು ಇತರ ಮಕ್ಕಳೊಂದಿಗೆ ಸಮನ್ವಯಗೊಳಿಸಿ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡಬಹುದು. ಇದು ಮಗುವಿಗೆ ಜೀವನದ ಕೆಲವು ಪ್ರಾಥಮಿಕ ಕೌಶಲಗಳನ್ನು ನೀಡಲು ವ್ಯವಸ್ಥೆಗೊಂಡಿದೆ ಹಾಗೂ ಪೋಷಕರಿಗೆ ಅರಿವನ್ನು ಮೂಡಿಸಲಾಗುತ್ತಿದೆ.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯವಾದ ಎಲ್ಲಾ ರೀತಿಯ ಕಲಿಕೋಪಕರಣ ಹಾಗೂ ಸಾಧನ ಸಾಮಗ್ರಿಗಳನ್ನು ಒದಗಿಸಲು ಸಾಧ್ಯವಾಗದಿರಬಹುದು. ಆದಾಗ್ಯೂ ಸ್ಥಳೀಯ, ಲಭ್ಯ ಸಂಪನ್ಮೂಲಗಳನ್ನು ಬಳಸಿ ಎಲ್ಲಾ ಮಕ್ಕಳಿಗೆ ಕಲಿಕೆ ಉಂಟು ಮಾಡಬಹುದು.
- ಎಲ್ಲ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಾಮಾನ್ಯ ಶಾಲೆ, ಸಾಮಾನ್ಯ ಶಿಕ್ಷಕರು ರೂಪುಗೊಂಡಿರುತ್ತಾರೆ. ಸ್ಥೂಲವಾಗಿ ಎಲ್ಲಾ ಚಟುವಟಿಕೆಗಳನ್ನು ಎಲ್ಲಾ ಮಕ್ಕಳಿಗೆ ಒದಗಿಸಿ ಮಗುವನ್ನು ಒಂದು ನಿರೀಕ್ಷಿತ ಮಟ್ಟಕ್ಕೆ ತಲುಪುವಂತೆ ವ್ಯವಸ್ಥೆಗೊಳಿಸುವುದು ಸಮನ್ವಯ ಶಿಕ್ಷಣದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಮಗುವೂ ಭಾಗವಹಿಸುವಂತಹ ಚಟುವಟಿಕೆಗಳನ್ನು ರೂಪಿಸುವುದು ಸವಾಲಾದರೂ-ಕಾರ್ಯರೂಪಕ್ಕೆ ತರುವುದು ಭಾಗೀದಾರರ ಅಥವಾ ಅನುಪಾಲನ ಅಧಿಕಾರಿಗಳ ಜವಾಬ್ದಾರಿಯಾಗಿದೆ.

## ಸಮನ್ವಯ ಶಿಕ್ಷಣದ ತರಬೇತಿಯ ಉದ್ದೇಶಗಳು :

1) ವಿಶೇಷ ಅಗತ್ಯವುಳ್ಳ ಮಕ್ಕಳ ನೈಜ ಪರಿಸ್ಥಿತಿ, ಸಮಸ್ಯೆ ಅಥವಾ ಸವಾಲುಗಳನ್ನು ಅರ್ಥೈಸಿಕೊಳ್ಳುವುದು. ಹಾಗೂ ಸೂಕ್ತ ಪರಿಹಾರ ಕಂಡುಕೊಳ್ಳುವುದು.
2) 'ಸುಸ್ಥಿರ ಅಭಿವೃದ್ಧಿಗಾಗಿ ವಿಶೇಷ ಅಗತ್ಯವುಳ್ಳ ಮಕ್ಕಳ ಒಳಗೊಳ್ಳುವಿಕೆ'ಯ ಮಹತ್ವ ಹಾಗೂ ಅಗತ್ಯತೆಯನ್ನು ಎಲ್ಲಾ ಭಾಗೀದಾರರಿಗೆ ಮನವರಿಕೆ ಮಾಡಿಕೊಡುವುದು.

3) ವಿಶೇಷ ಅಗತ್ಯವುಳ್ಳ ಮಕ್ಕಳ ಕಾಯ್ದೆಗಳನ್ನು ಹಾಗೂ ಇಲಾಖೆಯ ಉಪಕ್ರಮಗಳ ಧ್ಯೇಯ, ಉದ್ದೇಶಗಳ ಕುರಿತು ಆಳವಾದ ಜ್ಞಾನ ಹಾಗೂ ಅನುಷ್ಠಾನಕ್ಕೆ ಅಗತ್ಯವಿರುವ ಕೌಶಲಗಳು, ಅನುಭೂತಿ ಹಾಗೂ ಮನೋಭೂಮಿಕೆಗಳನ್ನು ಬೆಳೆಸುವುದು.

4) ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಇರಬಹುದಾದ ಸವಾಲುಗಳು ಹಾಗೂ ಲಭ್ಯವಿರುವ ಅವಕಾಶಗಳನ್ನು ಅನ್ವೇಷಿಸುವುದು.

5) ಪ್ರತಿ ಶಾಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪೂರಕ ವಾತಾವರಣವನ್ನು ಸೃಜಿಸುವಲ್ಲಿ ಎಲ್ಲ ಹಂತದ ಅಧಿಕಾರಿಗಳ ಪಾತ್ರ, ಅಗತ್ಯವಿರುವ ಸಂಪನ್ಮೂಲ ಕ್ರೂಢೀಕರಣ, ನಿರ್ವಹಣಾ ಕ್ಷಮತೆ ಇತ್ಯಾದಿಗಳ ಕುರಿತು ಕ್ರಿಯಾಯೋಜನೆಗಳನ್ನು ರೂಪಿಸುವುದು.

**ನಿರೀಕ್ಷಿತ ಕಲಿಕಾಫಲಗಳು:**

1. ಸಮನ್ವಯ ಶಿಕ್ಷಣದ ಮಹತ್ವ, ಪ್ರಭಾವ ಮತ್ತು ಸಂಘರ್ಷ ನಿವಾರಣೆಯ ವಿಧಾನಗಳನ್ನು ಅರ್ಥೈಸಿಕೊಳ್ಳುವರು.
2. ಸಮನ್ವಯ ಶಿಕ್ಷಣವನ್ನು ವಿವಿಧ ಆಯಾಮಗಳಲ್ಲಿ ನೋಡುವ, ಸಮಗ್ರವಾಗಿ ಅರ್ಥೈಸುವ ಮತ್ತು ನೈಜ ಪರಿಸ್ಥಿತಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯತಂತ್ರಗಳನ್ನು ರೂಪಿಸುವರು.
3. ಸಮನ್ವಯ ಶಿಕ್ಷಣವನ್ನು ಶಾಲೆಯ ಆಯ್ದ ಪ್ರಕ್ರಿಯೆಗಳಲ್ಲಿ ಸಮ್ಮಿಳಿತಗೊಳಿಸುವ ಮೂಲಕ ಶಾಲೆಯ ಸರ್ವಾಂಗೀಣ ಬೆಳವಣಿಗೆಯಲ್ಲಿ ಶಾಲಾ ನಾಯಕನಾಗಿ ತಮ್ಮ ಪಾತ್ರದ ಕುರಿತು ಮನವರಿಕೆ ಮಾಡಿಕೊಳ್ಳುವರು.
4. ನೀತಿ ನಿಯಮಗಳ ಆಶಯಗಳನ್ನು ಕಾರ್ಯರೂಪಕ್ಕಿಳಿಸಲು ಅಗತ್ಯವಿರುವ ದೃಷ್ಟಿಕೋನಗಳು, ಮನೋಭೂಮಿಕೆ, ಕೌಶಲಗಳನ್ನು ಬೆಳೆಸಿಕೊಳ್ಳುವರು.

**: ದೃಷ್ಟಿಕೋನ :**

**"ವಿಶೇಷ ಅಗತ್ಯತೆವುಳ್ಳ ಮಕ್ಕಳನ್ನು ಸಮರ್ಥ ನಾಯಕರು ಹಾಗೂ ಜವಾಬ್ದಾರಿಯುತ ಪ್ರಜೆಯನ್ನಾಗಿಸಿ ಸಮಗ್ರವಾಗಿ ಬಲವರ್ಧನೆಗೊಳಿಸುವುದು".**

**ಸೂಚಿತ ಪ್ರಕ್ರಿಯಾ ಹಂತಗಳು :**

**ಚಟುವಟಿಕೆ – 1.** ಶಿಬಿರಾರ್ಥಿಗಳನ್ನು ವಿವಿಧ ಗುಂಪುಗಳಾಗಿ ರಚಿಸಿ, ತಮಗೆ ಜೀವನದಲ್ಲಿ ಅನುಭವಕ್ಕೆ ಬಂದ ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಸಾಧನೆಗಳ ಕುರಿತು ಪಟ್ಟಿ ತಯಾರಿಸಲು ಶಿಭಿರಾರ್ಥಿಗಳಿಗೆ ಸೂಚಿಸಿ, ನಂತರ ಗುಂಪಿನಲ್ಲಿ ಒಬ್ಬರು ಓದಿ ಹೇಳಲು ಸೂಚಿಸುವುದು. ಹೀಗೆ ಪ್ರತಿಯೊಂದು ಗುಂಪಿನಿಂದ ತಯಾರಿಸಿದ ಸಾಧಕರ ಸಾಧನೆಗಳನ್ನು ಮಂಡಿಸುವುದು.

**ಚಟುವಟಿಕೆ – 2.** ಸಮನ್ವಯ ಶಿಕ್ಷಣದ ವಿಡಿಯೋ ಕ್ಲಿಪ್ ತೋರಿಸುವುದು. ನಂತರ ಆ ವಿಡಿಯೋ ಕುರಿತಾಗಿ ಚರ್ಚಿಸಿ, ವಿಷಯಕ್ಕೆ ಸಂಬಂಧೀಕರಿಸುವುದು. https://youtu.be/wBCfxhyEDB0?si=1L8ycII-Dp-qWV71

## ಮೌಲ್ಯಮಾಪನ ಪ್ರಶ್ನೆಗಳು

1. **ಮಾನವ ಹಕ್ಕುಗಳ ಜಾಗತಿಕ ಘೋಷಣೆ ಜಾರಿಗೆ ಬಂದ ವರ್ಷ**
   ಎ) 1945 ಬಿ) 1975 ಸಿ) 1948 ಡಿ) 1950
2. **'ಸರ್ವರಿಗೂ ಶಿಕ್ಷಣ' ಎಂಬ ಗುರಿಯನ್ನು ಪರಿಶೀಲಿಸಿದ ವರ್ಷ**
   ಎ) 2000 ಬಿ) 1998 ಸಿ) 1985 ಡಿ) 1986
3. **ಸಮನ್ವಯ ಶಿಕ್ಷಣ ಈ ಮಕ್ಕಳನ್ನು ಒಳಗೊಂಡಿರುತ್ತದೆ**
   ಎ) ಸಾಮಾನ್ಯ ಮಕ್ಕಳು ಬಿ) ವಿಶೇಷ ಅಗತ್ಯವುಳ್ಳ ಮಕ್ಕಳು
   ಸಿ) ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಡಿ) ಮೇಲಿನ ಎಲ್ಲವೂ
4. **ಸಮನ್ವಯ ಶಿಕ್ಷಣದ ಮೂಲ ಆಶಯ**
   ಎ) ಸಾಮನ್ಯ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಿಕಾ ಬಲವರ್ಧನೆ ಮಾಡುವುದು
   ಬಿ) ವಿಶೇಷ ಅಗತ್ಯವುಳ್ಳ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಿಕಾ ಬಲವರ್ಧನೆ ಮಾಡುವುದು
   ಸಿ) ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಿಕಾ ಬಲವರ್ಧನೆ ಮಾಡುವುದು
   ಡಿ) ಎಲ್ಲಾ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಿಕಾ ಬಲವರ್ಧನೆ ಮಾಡುವುದು
5. **PWD Act-2016 ರ ಪ್ರಕಾರ ನ್ಯೂನತೆಗಳ ವಿಧಗಳ ಸಂಖ್ಯೆ**
   ಎ) 20 ಬಿ) 22 ಸಿ) 23 ಡಿ)21
6. ವಿಶ್ವ ಅಂಗವಿಕಲ ವ್ಯಕ್ತಿಗಳ ದಶಕ
   ಎ) 1993- 2002 ಬಿ) 1994 -23 ಸಿ)1983 -1992 ಡಿ) 1985 -1994

# ಅಧ್ಯಾಯ – 2

## ವಿಶೇಷ ಅಗತ್ಯವುಳ್ಳ ಮಕ್ಕಳು

**ವಿಶ್ವ ಸಂಸ್ಥೆಯ ಒಡಂಬಡಿಕೆಯ ಪ್ರಕಾರ** "ವಿಶೇಷ ಅಗತ್ಯತೆಯುಳ್ಳ ಮಕ್ಕಳೆಂದರೆ, ದೀರ್ಘಾವಧಿಯ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಸಂವೇದನಾ ನ್ಯೂನತೆ ಹೊಂದಿರುವವರನ್ನು ವಿಕಲಚೇತನ ವ್ಯಕ್ತಿಗಳು ಎಂದು ಹೇಳಲಾಗುತ್ತದೆ." ಪರಿಸರದಲ್ಲಿರುವ ಅನೇಕ ಅಡೆತಡೆಗಳು ಅವರ ಸಮಾನ ಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಗೆ ಅಡ್ಡಿಯುಂಟುಮಾಡುತ್ತದೆ.

ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಗಳಲ್ಲಿ, ಎಲ್ಲ ಮಕ್ಕಳೊಂದಿಗೆ ಕಲಿಯುತ್ತಿರುವಾಗ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಾರೆ. ಸವಾಲೆನಿಸುವ ಇಂತಹ ಮಕ್ಕಳು ಕೆಲವು ನಿರ್ದಿಷ್ಟ ವೈಲಕ್ಷಣ್ಯಗಳನ್ನು ಹೊಂದಿರುತ್ತಾರೆ ಮತ್ತು ಅವುಗಳನ್ನು ಸುಲಭವಾಗಿ ಗುರುತಿಸಬಹುದು.

### ಲಕ್ಷಣಗಳು

- ದೈಹಿಕ ಲಕ್ಷಣಗಳು – ಕಣ್ಣಿಗೆ ಕಾಣುವಂತಹ ನ್ಯೂನತೆಗಳು.
- ಆರೋಗ್ಯ, ನೋವು ಮತ್ತು ಸುಸ್ತಿನ ಬಗ್ಗೆ ಸಾಮಾನ್ಯವಾಗಿ ದೂರು.
- ನಿರಂತರವಾಗಿ ಕಳಪೆ ಶೈಕ್ಷಣಿಕ ಕಾರ್ಯದಕ್ಷತೆ ತೋರುವುದು.
- ಓದು-ಬರೆಹದಲ್ಲಿ ಸ್ಪಷ್ಟತೆ ಇಲ್ಲದಿರುವುದು.
- ಮಗು ಆಗಾಗ್ಗೆ ಕಣ್ಣು ಉಜ್ಜಿಕೊಳ್ಳುವುದು.
- ಓದುವಾಗ ಮತ್ತು ಬರೆಯುವಾಗ ಪುಸ್ತಕವನ್ನು ತುಂಬಾ ಸಮೀಪದಲ್ಲಿಟ್ಟುಕೊಳ್ಳುವುದು.
- ಪದೇ ಪದೇ ಕಿವಿಯನ್ನು ಕೆರೆದುಕೊಳ್ಳುವುದು.
- ಮಾತನಾಡುವ ಕಡೆಗೆ ಮಗು ತನ್ನ ತಲೆಯನ್ನು ಆಗಾಗ್ಗೆ ತಿರುಗಿಸಿಕೊಳ್ಳುವುದು.
- ನಿರ್ದೇಶನಗಳನ್ನು ಪುನಃ ಹೇಳುವಂತೆ ಮಗು ಶಿಕ್ಷಕರನ್ನು ಕೇಳುವುದು.
- ಉಕ್ತಲೇಖನ ಅಥವಾ ನೋಟ್ಸ್ ಬರೆದುಕೊಳ್ಳುವಲ್ಲಿ ಕಷ್ಟಪಡುವುದು.
- ಶಿಕ್ಷಕರು ಮಾತನಾಡುವಾಗ ಸುಳಿವು ಪಡೆಯಲು ಮಗು ಜಾಗರೂಕವಾಗಿ ಅವರನ್ನು ಗಮನಿಸುವುದು.
- ನೋಟ್ಸ್ ಕೊಟ್ಟಾಗ ಕಾಪಿ ಮಾಡಿಕೊಳ್ಳಲು ತನ್ನ ಪಕ್ಕದಲ್ಲಿರುವವರನ್ನು ಪದೇ ಪದೇ ನೋಡುವುದು.
- ಮಾತನಾಡುವಾಗ ಆಗಾಗ್ಗೆ ತಡೆ ಕಾಣುವುದು ಉಗ್ಗುವಿಕೆ/ತೊದಲುವಿಕೆ.
- ಕಪ್ಪು ಹಲಗೆಯಲ್ಲಿನ ಬರೆಹವನ್ನು ಕಾಪಿ ಮಾಡಲು ಕಷ್ಟಪಡುವುದು.
- ಚಲನ-ವಲನದಲ್ಲಿ ತೊಂದರೆಪಡುವುದು.
- ಕುಳಿತುಕೊಳ್ಳಲು, ನಡೆಯಲು, ನಿಂತುಕೊಳ್ಳಲು ಕಷ್ಟಪಡುವುದು.
- ಕೈಕಾಲುಗಳಲ್ಲಿ ಅನೈಚ್ಛಿಕ ಚಲನೆ ಕಂಡುಬರುವುದು.
- ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ತೊಂದರೆ ಅನುಭವಿಸುವುದು.

- ನಿರ್ದೇಶನಗಳನ್ನು ಅರ್ಥೈಸಿಕೊಳ್ಳಲು ಕಷ್ಟಪಡುವುದು.
- ಬೆಳವಣಿಗೆಯ ಮೈಲುಗಲ್ಲುಗಳಲ್ಲಿ ನಿಧಾನತೆ.
- ಅಮೂರ್ತ ವಸ್ತುಗಳನ್ನು ತಿಳಿಯಲು ಕಷ್ಟಪಡುವುದು ಮತ್ತು ಪುನರಾವರ್ತನೆ ಬಯಸುವುದು.
- ತನ್ನ ವಯಸ್ಸಿನ ಇತರ ಮಕ್ಕಳಂತೆ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸದಿರುವುದು.
- ಕಲಿಕೆಗೆ ಮೂರ್ತ ಉದಾಹರಣೆಗಳ ಮೇಲೆ ಮಗು ಹೆಚ್ಚಾಗಿ ಅವಲಂಬಿಸುವುದು.
- ಚುರುಕಾಗಿದ್ದೂ ಸಹ ಚೆನ್ನಾಗಿ ಓದದಿರುವುದು.
- ಅಕ್ಷರಗಳನ್ನು ಬಿಟ್ಟು ಓದುವುದು/ಸೇರಿಸಿ ಓದುವುದು.
- ಗಣಿತ ಮತ್ತು ಭಾಷೆಯಲ್ಲಿ ಮಾತ್ರ ಸಮಸ್ಯೆ ಇರುವುದು.
- ಹಿಡಿದ ಕೆಲಸವನ್ನು ಪೂರ್ತಿಗೊಳಿಸದಿರುವುದು.
- ಓದುವಾಗ ಪದಗಳನ್ನು ಊಹಿಸಿ ಓದುವುದು.
- ಮಗು ತರಗತಿಯಲ್ಲಿ ಮಂಕಾಗಿರುವುದು.
- ಅತಿಯಾದ ಚಟುವಟಿಕೆ/ಅತಿ ಕಡಿಮೆ ಚಟುವಟಿಕೆಯಿಂದಿರುವುದು.
- ತನ್ನ ಸ್ನೇಹಿತರನ್ನು/ಶಿಕ್ಷಕರನ್ನು ಗುರುತಿಸಲು ಕಷ್ಟಪಡುವುದು.

1. ಶಾಲೆಯಲ್ಲಿರುವ ಮಕ್ಕಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಹೇಗೆ ಗುರ್ತಿಸುವಿರಿ.
2. ಭಾಗೀದಾರರಾದ ನೀವು ಭೇಟಿ ನೀಡಿದ ವಿಶೇಷ ಅಗತ್ಯವುಳ್ಳ ಮಕ್ಕಳ 5 ನೈಜ ಪರಿಸ್ಥಿತಿಗಳ ಕುರಿತು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ.

## ವಿಶೇಷ ಅಗತ್ಯವುಳ್ಳ ಮಕ್ಕಳು ಕಲಿಕೆಯಲ್ಲಿ ಎದುರಿಸುತ್ತಿರುವ ಸವಾಲುಗಳು

- ಶಿಕ್ಷಕರು ಹೇಳಿದ ಸೂಚನೆಯನ್ನು ಅಥವಾ ಪಾಠವನ್ನು ಗ್ರಹಿಸದಿರುವುದು ಮತ್ತುಅರ್ಥೈಸಿಕೊಳ್ಳದಿರುವುದು.
- ಅರ್ಥೈಸಿಕೊಂಡ ವಿಷಯವನ್ನು ಅಭಿವ್ಯಕ್ತಪಡಿಸಲು ಸಾಧ್ಯವಾಗದಿರುವುದು.
- ಕ್ಲಿಷ್ಟಕರವಾದ ಪಠ್ಯವನ್ನು ಅರ್ಥೈಸಿಕೊಳ್ಳಲು ಅಸಹಜವಾಗಿ ಕಷ್ಟ ಎಂದೆನಿಸುವುದು.
- ಓದು-ಬರೆಹದಲ್ಲಿ ಸ್ಪಷ್ಟತೆ ಇಲ್ಲದಿರುವುದು.
- ಕಪ್ಪು ಹಲಗೆಯ ಮೇಲೆ ಬರೆದ ಬರೆವಣಿಗೆಯನ್ನು ಗುರುತಿಸದಿರುವುದು.
- ದೃಷ್ಟಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಹಿಂದೆ ಬೀಳುವುದು. **ಉದಾ :** ಚಿತ್ರ ಬರೆಯುವುದು, ಬಣ್ಣಗಳನ್ನು ಗುರುತಿಸುವುದು.
- ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸದಿರುವುದು.
- ಸಹಪಾಠಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದಿರುವುದು.**ಉದಾ :** ಹೊಸ ಪರಿಸರ, ವ್ಯಕ್ತಿ, ಶಿಕ್ಷಕ ಇತ್ಯಾದಿ
- ಕಲಿಯಲು ಆಸಕ್ತಿ ಇದ್ದರೂ ಸಹ, ವಿಷಯ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದು.

- ➢ ಸುಲಭ ಪರಿಕಲ್ಪನೆಗಳನ್ನು ಬೇರೆ ಕಡೆ ಅಳವಡಿಸಿಕೊಳ್ಳುವಾಗ ಕಷ್ಟಪಡುವುದು.**ಉದಾ :** ಬಣ್ಣ, ಆಕಾರ, ಗಾತ್ರ ಇತ್ಯಾದಿ.
- ➢ ವ್ಯತ್ಯಾಸ ಗುರುತಿಸುವಾಗ ಸರಿಯಾಗಿ ಗುರುತಿಸದಿರುವುದು. **ಉದಾ :** ಚಿಕ್ಕದು-ದೊಡ್ಡದು, ವೃತ್ತ-ತ್ರಿಭುಜ ಇತ್ಯಾದಿ
- ➢ ಚಲನ-ವಲನದಲ್ಲಿ ತೊಂದರೆ, ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸದಿರುವುದು.
- ➢ ಅತಿಯಾದ ಚಟುವಟಿಕೆ ಅಥವಾ ಅತಿ ಕಡಿಮೆ ಚಟುವಟಿಕೆಯಿಂದಿರುವುದು.
- ➢ ಕಲಿತದ್ದನ್ನು ಬಹುಬೇಗ ಮರೆಯುವುದು ಮತ್ತು ಸಾಮಾನ್ಯ ವಸ್ತುಗಳನ್ನು ಗುರುತಿಸಲು ವಿಫಲವಾಗುವುದು.

**ವ್ಯಕ್ತಿ ಭಾಷೆ ಮೊದಲು ಹೀಗಿರಲಿ....**

| ಸಕಾರಾತ್ಮಕ ನುಡಿಗಟ್ಟುಗಳು | ನರಾರಾತ್ಮಕ ನುಡಿಗಟ್ಟುಗಳು |
|---|---|
| ✓ದೃಷ್ಟಿದೋಷವಿರುವ ವ್ಯಕ್ತಿ | x ಅಂಧರು / ಕುರುಡರು |
| ✓ಶ್ರವಣದೋಷವಿರುವ ವ್ಯಕ್ತಿ | x ಕಿವುಡ ಮತ್ತು ಮೂಕ |
| ✓ಮೆದುಳು ವಾತವಿರುವ ವ್ಯಕ್ತಿ | X ಸಿ ಪಿ ರೋಗಿ |
| ✓ಗಾಲಿಕುರ್ಚಿಯನ್ನು ಬಳಸುವ ವ್ಯಕ್ತಿ | X ಗಾಲಿಕುರ್ಚಿಯ ವ್ಯಕ್ತಿ |
| ✓ಬಹು ಅಂಗಾಂಗ ಗಟ್ಟಿಯಾಗಿರುವ ವ್ಯಕ್ತಿ(ಮಸ್ಕ್ಯೂಲರ್ ಡಿಸ್ಟ್ರೋಫಿ) | X ಮಸ್ಕ್ಯೂಲರ್ ಡಿಸ್ಟ್ರೋಫಿ ಇರುವ ರೋಗಿ |
| ✓ದೈಹಿಕ ಅಂಗವೈಕಲ್ಯವಿರುವ ವ್ಯಕ್ತಿ | X ಕುಂಟಿದ, ಕುಂಟ, ವಿರೂಪಗೊಂಡ |
| ✓ಮಾತಿನ ದುರ್ಬಲತೆ ಇರುವ ವ್ಯಕ್ತಿ | X ಮೂಕ |
| ✓ಮನೋವೈದ್ಯಕೀಯ ಅಂಗವೈಕ್ಯವಿರುವ ವ್ಯಕ್ತಿ | X ಹುಚ್ಚ / ತಿಕಲ |

## ವಿಶೇಷ ಅಗತ್ಯವುಳ್ಳ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣಗಳು

- ❖ ಮಕ್ಕಳಿಗೆ ಅವಶ್ಯವಿರುವ ಸಾಧನ - ಸಲಕರಣೆಗಳನ್ನು ಒದಗಿಸುವಲ್ಲಿ ಕೊರತೆ.
- ❖ ಸಾಧನ - ಸಲಕರಣೆಗಳ ಉಪಯುಕ್ತತೆ - ನಿರ್ವಹಣೆಯ ಬಗ್ಗೆ ಮಾಹಿತಿ ಇಲ್ಲದಿರುವುದು.
- ❖ ತರಗತಿಯ ಕಲಿಕೆಯ ವಾತಾವರಣದ ಸೂಕ್ತ ಬದಲಾವಣೆಯಲ್ಲಿನ ಕೊರತೆ.
- ❖ ಪೂರಕ ಬೋಧನಾ ಸಾಮಗ್ರಿಗಳ ಕೊರತೆ. (ಟ್ಯಾಕ್ ಟೈಲ್, ಮ್ಯಾಪ್, ಚಿತ್ರಪಟ ಇತ್ಯಾದಿ.)
- ❖ ವಿಶೇಷ ಶೈಕ್ಷಣಿಕ ಕಲಿಕಾ ಸಾಮಗ್ರಿಗಳ ಕೊರತೆ ಮತ್ತು ನಿರ್ವಹಣೆಯಲ್ಲಿ ತೊಂದರೆ.
- ❖ ಬೋಧನೆಯಲ್ಲಿ ಮಕ್ಕಳ ಅವಶ್ಯಕತೆಗನುಗುಣವಾಗಿ ಬಹು ಮಾಧ್ಯಮಗಳ ಉಪಯೋಗದ ಕೊರತೆ.
  ಉದಾ : ಚಲನವಲನ ತರಬೇತಿ, ಆಂಗಿಕ ತರಬೇತಿ, ಸ್ಪರ್ಶ, ಲಿಪ್ ರೀಡಿಂಗ್ ಇತ್ಯಾದಿ
- ❖ ಪಠ್ಯಕ್ರಮದಲ್ಲಿ ಅವಶ್ಯವಿರುವ ಮಾರ್ಪಾಡಿನ ಕೊರತೆ.
- ❖ ಅವಶ್ಯಕತೆಗನುಗುಣವಾಗಿ ಬೋಧನೆಯಲ್ಲಿರಬೇಕಾದ ವೈವಿಧ್ಯತೆ ಮತ್ತು ನಾವೀನ್ಯತೆ ಇಲ್ಲದಿರುವುದು.
- ❖ ಶಿಕ್ಷಕರು ವೈಯಕ್ತಿಕ ಗಮನ ನೀಡದಿರುವುದು: ಸಮರ್ಪಕವಲ್ಲದ ತರಗತಿ ನಿರ್ವಹಣೆ.
- ❖ ಸಂವಹನ ಮತ್ತು ಬಹುಮಾಧ್ಯಮಗಳ ಬಳಕೆ ಮಾಡುವಲ್ಲಿ ಕೊರತೆ.
- ❖ ದಪ್ಪ ಅಕ್ಷರದಲ್ಲಿ ಮುದ್ರಣವಾಗಿರುವ ಪುಸ್ತಕಗಳ ಕೊರತೆ.
- ❖ ಸೂಕ್ತ ತರಗತಿ ನಿರ್ವಹಣೆ ವ್ಯವಸ್ಥೆಯಲ್ಲಿ ಕೊರತೆ. ಉದಾ : ಗಾಳಿ, ಬೆಳಕು, ಶಾಲಾ ಪರಿಸರ ಇತ್ಯಾದಿ
- ➢ ಮಕ್ಕಳ ಚಲನವಲನಕ್ಕೆ ಸೂಕ್ತ ಮಾರ್ಪಾಟು ಇಲ್ಲದಿರುವುದು.

- ಪೋಷಕರು ತಮ್ಮ ಮಕ್ಕಳಲ್ಲಿರುವ ಸಮಸ್ಯೆಯನ್ನು ಗುರ್ತಿಸಿಯೂ ಒಪ್ಪಿಕೊಳ್ಳದಿರುವುದು.
- ಪೋಷಕರಿಗೆ ಅಥವಾ ಮಕ್ಕಳಿಗೆ ಆಪ್ತ ಸಲಹೆ – ಮಾರ್ಗದರ್ಶನದ ಕೊರತೆ.
- ಏಕಾಗ್ರತೆ ಕೊರತೆ, ಓದುವಾಗ ಸ್ಪಷ್ಟ ಉಚ್ಚಾರಣೆ ಇಲ್ಲದಿರುವುದು.
- ಶಿಕ್ಷಕರು ವಿಶಿಷ್ಟ ಮೌಲ್ಯಮಾಪನ ತಂತ್ರಗಳ ಬಗ್ಗೆ ಅರಿತುಕೊಂಡು ಅವಶ್ಯಕತೆಗೆ ತಕ್ಕಂತೆ ಅವುಗಳನ್ನು ಅಳವಡಿಸಿಕೊಳ್ಳುವಲಿ ಕೊರತೆ.

**ಸೂಚಿತ ಪ್ರಕ್ರಿಯಾ ಹಂತಗಳು :**

01. ವಿಶೇಷ ಅಗತ್ಯವುಳ್ಳ ಮಕ್ಕಳು ಎದುರಿಸುತ್ತಿರುವ ಸವಾಲುಗಳನ್ನು ಪಟ್ಟಿ ಮಾಡಲು ಹೇಳಿ ನಂತರ ದೊಡ್ಡ ಗುಂಪಿನಲ್ಲಿ ಚರ್ಚಿಸುವುದು.

## ವಿವಿಧ ವಿಶೇಷ ಚೇತನ ಮಕ್ಕಳ ಸಾಧ್ಯತೆಗಳು

ಮಗು ತನ್ನಲ್ಲಿರುವ ವಿಶೇಷ ಸಾಮರ್ಥ್ಯವನ್ನು ಗರಿಷ್ಟ ಪ್ರಮಾಣದ ಕಲಿಕೆಗೆ ಬಳಸಿಕೊಳ್ಳಬೇಕಾದರೆ ಮಗುವಿನಲ್ಲಿರುವ ದೋಷಕ್ಕನುಗುಣವಾಗಿ ಅವಶ್ಯವಿರುವ ಶೈಕ್ಷಣಿಕ ಮತ್ತು ಮೂಲಭೂತ ಅಗತ್ಯತೆಗಳನ್ನು ಪೂರೈಸಬೇಕಾಗುತ್ತದೆ.

**ಶ್ರವಣ ದೋಷವುಳ್ಳ ಮಕ್ಕಳ ಸಾಧ್ಯತೆಗಳು.**

| ಶೈಕ್ಷಣಿಕ ಸಾಧ್ಯತೆಗಳು | ಇತರೆ ಮೂಲಭೂತ ಸಾಧ್ಯತೆಗಳು |
|---|---|
| ❖ ತರಗತಿಯಲ್ಲಿ ಕಪ್ಪು ಹಲಗೆ ಹಾಗೂ ಶಿಕ್ಷಕರ ಮುಖಭಾವ ಕಾಣುವಂತಹ ಸ್ಥಳದಲ್ಲಿ ಇವರನ್ನು ಕೂರಿಸಬೇಕು. | ❖ ಶ್ರವಣ ತಜ್ಞರ ಸಲಹೆ ಮೇರೆಗೆ ಶ್ರವಣೋಪಕರಣದ ಬಳಕೆ. |
| ❖ ಹೆಚ್ಚು ದೃಶ್ಯ ಮಾಧ್ಯಮಗಳ ಬಳಕೆ | ❖ ಶ್ರವಣ ತರಬೇತಿ |
| ❖ ಪಠ್ಯಕ್ರಮ ಹೊಂದಾಣಿಕೆ | ❖ ಮಾತು ಅಥವಾ ಭಾಷಾ ಬೆಳವಣಿಗೆ ತರಬೇತಿ. |
| ❖ ಸಂಭಾಷಣೆಗೆ ಹೆಚ್ಚಿನ ಅವಕಾಶ ನೀಡುವುದು. | ❖ ಪೂರ್ಣ ಸಂವಹನ ಕೌಶಲಗಳ ಬಳಕೆ |
| ❖ ಸಂಪನ್ಮೂಲ ಕೊಠಡಿಯ ಸಮರ್ಪಕ ಬಳಕೆ ಮತ್ತು ಬೋಧನೆ. | ❖ ಸಂಜ್ಞಾ ತರಬೇತಿ, ಮಾತಿನ ಓದುವಿಕೆ ಇತ್ಯಾದಿ. |

**ಶ್ರವಣ ದೋಷವುಳ್ಳ ಮಕ್ಕಳು:**

ಕೇಳಿಸಿಕೊಳ್ಳುವ ಕ್ರಿಯೆಯಲ್ಲಿ ಆದ ಹಾನಿಯಿಂದಾಗಿ ಮಾತು ಮತ್ತು ಭಾಷಾ ಬೆಳವಣಿಗೆಯಲ್ಲಿ ತೊಂದರೆಯಿರುವವರಿಗೆ ಶ್ರವಣ ದೋಷವುಳ್ಳವರು ಎನ್ನುತ್ತೇವೆ.

**ಶ್ರವಣದೋಷದ ವಿಧಗಳು**

ಶ್ರವಣದೋಷವನ್ನು ಈ ಕೆಳಗಿನಂತೆ ವರ್ಗೀಕರಿಸಲಾಗುತ್ತದೆ. ಇದು ವ್ಯಕ್ತಿಯ ಕೇಳುವಿಕೆಯ ಮಟ್ಟವನ್ನುಆಧರಿಸಿದೆ. ಇದನ್ನು ಶ್ರವಣತಜ್ಞರು ಶ್ರವಣಮಾಪನ ಯಂತ್ರದ ಸಹಾಯದಿಂದ ಮಾಪನ ಮಾಡಿ ವರದಿ ನೀಡುತ್ತಾರೆ. ಶ್ರವಣದೋಷದ ಪ್ರಮಾಣವನ್ನು ಡೆಸಿಬಲ್ (db) ನಲ್ಲಿ ಅಳೆಯಲಾಗುತ್ತದೆ.

೧. ಸೌಮ್ಯ (Mild) - 20-40 db

೨. ಸಾಧಾರಣ (Moderate) - 40-60 db

೩. ತೀವ್ರ (Severe) - 60-75 db

೪. ಅತೀ ತೀವ್ರ (Profound) - 75 db ಗಿಂತ ಹೆಚ್ಚು.

ಈ ಬಗೆಯ ವರ್ಗೀಕರಣ ಈ ಮಕ್ಕಳಿಗೆ ಶಿಕ್ಷಣ ನೀಡಲು ಉಪಯುಕ್ತವಾಗಿದೆ. ಈ ಆಧಾರದ ಮೇಲೆ ಶೈಕ್ಷಣಿಕ ಅಗತ್ಯಗಳನ್ನು ನಿರ್ಧರಿಸಬಹುದು.

**ಗುರುತಿಸಲು ನೆರವಾಗುವ ಲಕ್ಷಣಗಳು:**

- ಕಿವಿ ನೋವು, ಕಿವಿ ಸೋರುವಿಕೆಯಿಂದ ನರಳುತ್ತಿರುವುದು.
- ಮಾತನಾಡುವಾಗ ಕೆಲವು ಮಾತಿನ ಶಬ್ದಗಳನ್ನು ಬಿಟ್ಟುಬಿಡುವುದು. ಪ್ರಶ್ನೆ ಕೇಳಿದಾಗ ಉತ್ತರಿಸಲು ತಡವರಿಸುವುದು.
- ಮಾತನಾಡುವಾಗ ಮುಖವನ್ನು ಗಮನಿಸುವುದು.
- ಅತಿ ಗಟ್ಟಿಯಾಗಿ ಮಾತನಾಡುವುದು.
- ಮಾತನಾಡುವ ಧ್ವನಿ ಎಲ್ಲಿಂದ ಬಂತು ಎಂದು ತಿಳಿಯದೇ ಸುತ್ತಮುತ್ತ ನೋಡುವುದು.
- ಶಿಕ್ಷಕರು ಕೊಡುವ ಸೂಚನೆಗಳನ್ನು ಅಥವಾಗದೇ ಸಹಪಾಠಿಗಳು ಮಾತನಾಡುವುದನ್ನು ನೋಡಿ ಅನುಸರಿಸುವುದು.

**ಶಿಕ್ಷಕರ ಸಹಾಯ ಮತ್ತು ಮಾರ್ಗದರ್ಶನ**

- ಸೂಕ್ತ ಆಸನದ ವ್ಯವಸ್ಥೆ ಮಾಡಿಸುವುದು.
- ಶ್ರವಣ ಸಾಧನ ಬಳಕೆ ಮತ್ತು ಉಪಯುಕ್ತತೆಯ ಬಗ್ಗೆ ಗಮನಿಸುವುದು.
- ಸೂಕ್ತ ಕಲಿಕೋಪರಣ ಬಳಸಿ ಬೋಧನೆ ಮಾಡುವುದು.
- ಕ್ರಮಾನುಗತ ಜೋಡಣೆಯಲ್ಲಿ ಬೋಧನೆ ಮಾಡುವುದು, ಅಕ್ಷರಗಳು, ಪದಗಳ ಮಿಂಚುಪಟ್ಟಿಗಳು, ಚಿತ್ರಪಟ, ನೈಜವಸ್ತು, ಸೂಕ್ತಮಾದರಿಗಳ ಬಳಕೆ.
- ಪದವನ್ನು ತುಟಿ ಚಲನೆಯ ಮೂಲಕ ಓದಿ ತೋರಿಸಲು, ಹೇಳಲು, ಓದಲು ಮತ್ತು ಬರೆಯಲು ಕಲಿಸುವುದು.
- ಮಗುವಿನ ಪರಿಸರದಲ್ಲಿ ಕಂಡುಬರುವ ವಸ್ತುಗಳು, ಪ್ರಾಣಿ, ಪಕ್ಷಿ, ವಾಹನಗಳನ್ನು ಪರಿಚಯ ಮಾಡಿಸುವುದು.
- ಮಗುವಿಗೆ ಕಲಿಯಲು ಮತ್ತು ಕಲಿಕಾ ಅನುಭವ ಹಂಚಿಕೊಳ್ಳಲು ಪ್ರತಿಕ್ರಿಯಿಸಲು ಸೂಕ್ತ ಅವಕಾಶ ನಿರ್ಮಿಸಿ ಕೊಡುವುದು.
- ಶ್ರವಣ ತರಬೇತಿ, ವಾಕ್ ತರಬೇತಿ, ಶಬ್ದ ತರಬೇತಿ, ಪರಿಕಲ್ಪನೆಗಳ ತರಬೇತಿ ನೀಡುವುದು.

**ಶೈಕ್ಷಣಿಕ ಪರಿಣಾಮಗಳು:**

- ಕೇಳಿಸಿ ಕೊಳ್ಳಲಾಗದ ಮತ್ತು ಮಾತನಾಡಲಾಗದ ಸ್ಥಿತಿಯಿಂದ ಭಾಷಾ ಬೆಳವಣಿಗೆ ಕುಂಠಿತಗೊಳ್ಳುತ್ತದೆ.
- ಮಾನಸಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯುತ್ತಾರೆ.
- ಆಲಿಸುವ, ಮಾತನಾಡುವ ಕೌಶಲಗಳಲ್ಲಿ ಹಿಂದುಳಿದಿರುವುದು.
- ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸದಿರುವುದು.
- ಅಭಿವ್ಯಕ್ತಿಯಲ್ಲಿ ಸಂಜ್ಞೆ ಭಾಷೆ ಬಳಸುತ್ತಾರೆ.

- ❖ ಭಾವನಾತ್ಮ ವಿಷಯಗಳಿಗೆ ಸ್ಪಂದಿಸದಿರುವುದು.

**ದೋಷದ ಮಗುವಿಗೆ ನೀಡುವ ಉಪಕರಣಗಳ ಬಳಕೆ ಮತ್ತು ನಿರ್ವಹಣೆ,**

- ❖ ವಿವಿಧ ಬಗೆಯ ಶ್ರವಣ ಸಾಧನಗಳು
- ❖ ನಿಲುವುಗನ್ನಡಿ, ಕಂಪ್ಯೂಟರ್, ಟಿ.ವಿ
- ❖ ಮಗುವಿನ ದೋಷಕ್ಕೆ ಅನುಗುಣವಾಗಿ ಬಳಸುವ ವಿವಿಧ ಬಗೆಯ ಶ್ರವಣ ಸಾಧನಗಳು.
- ❖ ಮಗುವು ವರ್ಗ ಬೋಧನೆಯಲ್ಲಿ ಶ್ರವಣ ಸಾಧನ ಬಳಸಿ ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವುದು.
- ❖ ಶ್ರವಣ ಸಾಧನದ ಬಳಕೆ ಮತ್ತು ಸುರಕ್ಷತೆ ಬಗ್ಗೆ ಗಮನಿಸುವುದು.

**ತರಗತಿ ನಿರ್ವಹಣೆ**

- ❖ ಬೋಧನೆ ನಿಧಾನವಾಗಿ ಸ್ಪಷ್ಟವಾಗಿರಬೇಕು.
- ❖ ಪ್ರತಿಯೊಂದು ಅಕ್ಷರ ಕಾಗುಣಿತ, ಒತ್ತಕ್ಷರ ಮತ್ತು ಪದಗಳ ಉಚ್ಚಾರಣೆಯನ್ನು ಕಲಿಸುವ ಕಡೆ ಹೆಚ್ಚು ಗಮನ ಕೊಡುವುದು ಅಕ್ಷರ, ಕಾಗುಣಿತ ಒತ್ತಕ್ಷರಗಳನ್ನು ಹೇಳಿಕೊಡುವಾಗ ಧ್ವನಿ ಹುಟ್ಟುವ ಭಾಗ, ಸ್ಪರ್ಶಾನುಭವ, ಕೆನ್ನೆ, ಮೂಗು ಮತ್ತು ಗಂಟಲಿನಲ್ಲಾಗುವ ಕಂಪನ ಮತ್ತು ಬಾಯಿಂದ ಹೊರಬರುವ ಗಾಳಿಯ ಪ್ರಮಾಣವನ್ನು ಮಗುವಿನ ಗಮನಕ್ಕೆ ತಂದು ಉಚ್ಚಾರಣೆಯನ್ನು ಕಲಿಸಲು ನೆರವಾಗಬೇಕು.
- ❖ ಕತೆಯ ಮೂಲಕ ಮಾತು ಮತ್ತು ಭಾಷೆಯನ್ನು ಕಲಿಸುವುದರ ಜೊತೆಗೆ ಪ್ರಶ್ನಿಸಲು ಭಾವನೆ ಮತ್ತು ಉಚ್ಚಾರಣೆಗಳ ಬಗೆಗೆ ಹೆಚ್ಚು ಒತ್ತನ್ನು ಕೊಡಬೇಕು. ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದರ ಮೂಲಕ ಚಿತ್ರಗಳನ್ನು, ನೈಜವಾದವುಗಳನ್ನು ಉಪಯೋಗಿಸಿ ಪಾಠ ಮಾಡಬೇಕು.

**ಶ್ರವಣ ದೋಷವುಳ್ಳ ಮಕ್ಕಳ ಮೌಲ್ಯಮಾಪನ**

- ❖ ಮಗುವಿನ ಕಲಿಕಾ ಪ್ರಗತಿಯನ್ನು ಲಿಖಿತವಾಗಿ ಪ್ರಶ್ನೆಗಳನ್ನು ಕೇಳಿ ಲಿಖಿತ ಉತ್ತರ ಪಡೆಯುವುದು.
- ❖ ಚಿತ್ರ ಪ್ರದರ್ಶನದ ಮೂಲಕ ಗಳಿಸಿರುವ ಸಾಮರ್ಥ್ಯವನ್ನು ಪಡೆಯುವುದು.
- ❖ ಸಂಜ್ಞಾ ಭಾಷಾ ಸಹಾಯದಿಂದ ಉತ್ತರವನ್ನು ಪಡೆಯುವುದು.
- ❖ ತುಟಿ ಚಲನೆಯಿಂದ ಉತ್ತರವನ್ನು ಪಡೆಯುವುದು.
- ❖ ವೈಯಕ್ತಿಕ ಶೈಕ್ಷಣಿಕ ಯೋಜನೆಯಲ್ಲಿ ದಾಖಲೀಕರಿಸುವುದು.
- ❖ ವಿಷಯ ಅಥವಾ ಘಟಕವಾರು ಕಲಿಕಾ ಪ್ರಗತಿಯನ್ನು ದಾಖಲಿಸುವುದು.
- ❖ ಸಹ ಪಠ್ಯ ಚಟುವಟಿಕೆಗಳಲ್ಲಿ ಸಾಧಿಸಿರುವ ವಿಶೇಷತೆಯನ್ನು ದಾಖಲಿಸುವುದು.

**ದೃಷ್ಟಿ ದೋಷವುಳ್ಳ ಮಕ್ಕಳ ಸಾಧ್ಯತೆಗಳು.**

| ಶೈಕ್ಷಣಿಕ ಸಾಧ್ಯತೆಗಳು | ಇತರೆ ಮೂಲಭೂತ ಸಾಧ್ಯತೆಗಳು |
|---|---|
| **ಅ) ಮಿತಿಯುಳ್ಳ ದೃಷ್ಟಿದೋಷ** | |

| | |
|---|---|
| • ತರಗತಿ ಕೊಠಡಿಯಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ. | • ನೇತ್ರ ವೈದ್ಯರಿಂದ ತಪಾಸಣೆ ಹಾಗೂ ಅಗತ್ಯವಿರುವ ಚಿಕಿತ್ಸೆ. |
| • ಕಪ್ಪು ಹಲಗೆಯ ಮೇಲೆ ಹಳದಿ ಬಣ್ಣದ ಸೀಮೆಸುಣ್ಣದ ಬಳಕೆ. | • ನೇತ್ರ ವೈದ್ಯರ ಸಲಹೆ ಮೇರೆಗೆ ಕನ್ನಡಕದ ಉಪಯೋಗ. |
| • ಓದಲು ಭೂತಗಾಜಿನ ಉಪಯೋಗ | |
| • ದಪ್ಪ ಮುದ್ರಣವಿರುವ ಪುಸ್ತಕ | |
| **ಆ) ಪೂರ್ಣ ಅಂಧತ್ವ** | |
| • ದೃಕ್ ಶ್ರವಣ ಮಾಧ್ಯಮಗಳ ಬಳಕೆ | • ನೇತ್ರ ವೈದ್ಯರಿಂದ ತಪಾಸಣೆ ಮತ್ತು ಅಗತ್ಯವಿರುವ ಚಿಕಿತ್ಸೆ |
| • ಉಬ್ಬುಚಿತ್ರ ಮತ್ತು ಚಿತ್ರಪಟಗಳ ಬಳಕೆ. | • ಬ್ರೈಲ್ ಲಿಪಿ-ಓದಲು ಮತ್ತು ಬರೆಯಲು |
| • ಪಾಠಗಳನ್ನು ಮುದ್ರಿಸಿರುವ ಧ್ವನಿ ಸುರುಳಿಯ ಉಪಯೋಗ | • ಅಬಾಕಸ್ ಮತ್ತು ಟೇಲರ್ ಫ್ರೇಮ್ ಬಳಕೆ –ಗಣಿತಕ್ಕಾಗಿ |
| • ಪರೀಕ್ಷೆಗೆ ಬರಹಗಾರರನ್ನು ಒದಗಿಸುವುದು. | • ಚಲನವಲನ ತರಬೇತಿ- ಸ್ವತಂತ್ರ ಓಡಾಟಕ್ಕಾಗಿ ದಿನನಿತ್ಯ ಜೀವನ ನಿರ್ವಹಣಾ ಕೌಶಲಗಳು. |

## ದೃಷ್ಟಿ ದೋಷವುಳ್ಳ ಮಕ್ಕಳ ಶಿಕ್ಷಣ

ಸಾಮಾನ್ಯ ದೃಷ್ಟಿ ಮಟ್ಟಕ್ಕಿಂತ ಕಡಿಮೆ ಇರುವ ಮಕ್ಕಳನ್ನು ದೃಷ್ಟಿದೋಷದ ಮಕ್ಕಳು ಎನ್ನುತ್ತಾರೆ. ಅಂದರೆ 200 ಅಡಿಗಳ ದೂರದಿಂದ ವೀಕ್ಷಿಸಬಹುದಾದ ವಸ್ತುವನ್ನು ಕೇವಲ 20 ಆಡಿ ದೂರದಿಂದ ಮಾತ್ರ ವೀಕ್ಷಿಸಬಲ್ಲರು.

## ದೃಷ್ಟಿದೋಷದ ಬಗೆಗಳು:

1. ಪಾರ್ಶ್ವ ದೃಷ್ಟಿದೋಷ - ಸಾಮಾನ್ಯ ದೃಷ್ಟಿ -ದೃಷ್ಟಿಶಕ್ತಿಯಲ್ಲಿ ಕೊರತೆ.
2. ಪೂರ್ಣ ದೃಷ್ಟಿದೋಷ
3. ದೃಷ್ಟಿ ವಿಕಲತೆ

## ಪಾರ್ಶ್ವ ದೃಷ್ಟಿದೋಷ (ಅಲ್ಪ ದೃಷ್ಟಿದೋಷ)

ಯಾರ ದೃಷ್ಟಿ ಸಾಮಾರ್ಥ್ಯವು ಕಡಮೆ ಇದೆಯೋ ಅವರು ಕೆಲವು ದೃಷ್ಟಿ ಸಾಧನಗಳನ್ನುಬಳಸಿ ಕೆಲವೊಂದು ಸೂಕ್ಷ್ಮ ಕಾರ್ಯಗಳನ್ನು ಮಾಡಲು ಸಾಧ್ಯವೋ ಅಂಥವರನ್ನು ಅಲ್ಪದೃಷ್ಟಿದೋಷವುಳ್ಳವರು ಎನ್ನುತ್ತೇವೆ. ಅಥವಾ ಯಾವ ವ್ಯಕ್ತಿಯ ದೃಷ್ಟಿದೋಷವು ಗುರುತಿಸಲ್ಪಡುವಷ್ಟಿರುತ್ತದೆಯೋ ಅಂತಹ ವ್ಯಕ್ತಿಯನ್ನು ಪಾರ್ಶ್ವ ದೃಷ್ಟಿಯುಳ್ಳ ವ್ಯಕ್ತಿ ಎಂದು ಕರೆಯುತ್ತಾರೆ.

## ಸಂಪೂರ್ಣ ದೃಷ್ಟಿದೋಷ

ಸಂಪೂರ್ಣವಾಗಿ ನೋಡಲು ಸಾಧ್ಯವಾಗದಿರುವ ಸ್ಥಿತಿಯನ್ನು ಪೂರ್ಣ ದೃಷ್ಟಿದೋಷ ಎನ್ನುವರು. ಅಥವಾ ಯಾರ ದೃಷ್ಟಿ ಸಾಮರ್ಥ್ಯವು ಸ್ಥೂಲ ಕಾರ್ಯಗಳನ್ನು ಕೈಗೊಳ್ಳಲು ಆಗುವುದಿಲ್ಲವೋ ಅವರನ್ನು ಪೂರ್ಣದೃಷ್ಟಿದೋಷವುಳ್ಳವರು ಎನ್ನಬಹುದು.

## ಗುರುತಿಸಲು ನೆರವಾಗುವ ಲಕ್ಷಣಗಳು

- ನಡೆದಾಡುವುದರಲ್ಲಿ ತಡವರಿಸುವುದು.
- ಕಣ್ಣಿನ ರಚನೆ ಸಾಮಾನ್ಯರಿಗಿಂತ ವಿಭಿನ್ನವಾಗಿರುವುದು. (3ನೇ ಮಾದರಿ)
- ಕಣ್ಣು ಗುಡ್ಡೆಯು ಒಂದು ಅಂಚಿನಲ್ಲಿರುವಂತೆ ಕಾಣುವುದು. (3ನೇ ಮಾದರಿ)
- ಕಣ್ಣುಗುಡ್ಡೆಯು ನಿರಂತರವಾಗಿ ತಿರುಗುವಂತೆ ಕಾಣುವುದು.

- ಮೆಳ್ಳೆಗಣ್ಣು ಹೊಂದಿರುವುದು. (3ನೇ ಮಾದರಿ)
- ಕಣ್ಣಿಗೆ ಮೊರೆ ಬಂದಿರುವುದು.
- ಕಪ್ಪುಹಲಗೆ ಅಥವಾ ಪುಸ್ತಕದಲ್ಲಿ ಬರವಣಿಗೆಗಳನ್ನು ಅತೀ ಹತ್ತಿರದಿಂದ ಓದುವುದು.
- ಓದುವಾಗ ಮತ್ತು ಬರೆಯುವಾಗ, ನೋಡುವಾಗ ಓರೆಯಾಗಿ ನೋಡುವುದು.
- ಮಂದ ಬೆಳಕಿನಲ್ಲಿ ನೋಡಲು ತೊಂದರೆ ಪಡುವುದು.

**ಶೈಕ್ಷಣಿಕ ಪರಿಣಾಮಗಳು:**

- ಚಲನವಲನದಲ್ಲಿ ತೊಂದರೆ ಅನುಭವಿಸುತ್ತಾರೆ.
- ಬರೆಯುವಿಕೆಯಲ್ಲಿ ತೊಂದರೆ ಅನುಭವಿಸುತ್ತಾರೆ.
- ತನ್ನ ಸುತ್ತಲಿನ ಬದಲಾವಣೆಗಳನ್ನು ಗುರುತಿಸುವಲ್ಲಿ ತೊಂದರೆ.
- ಬಣ್ಣಗಳನ್ನು ಗುರುತಿಸುವುದರಲ್ಲಿ ತೊಂದರೆ.
- ದಿನನಿತ್ಯದ ಚಟುವಟಿಕೆಯನ್ನು ಮಾಡುವಲ್ಲಿ ತೊಂದರೆ.
- ಪತ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಯಲ್ಲಿ ಹಿಂಜರಿಕೆ.
- ಅತೀ ಸೂಕ್ಷ್ಮ ವಸ್ತುಗಳನ್ನು ಗುರುತಿಸಲು ಆಗದಿರುವುದು.

## ಶಿಕ್ಷಕರ ಸಹಾಯ ಮತ್ತುಮಾರ್ಗದರ್ಶನ

- ಮಕ್ಕಳಿಗೆ ದೃಶ್ಯ ಅನುಭವದ ಜೊತೆಗೆ ಸ್ಪರ್ಶದ ಮೂಲಕ ಅನುಭವಗಳನ್ನು ಒದಗಿಸಿ ಕೊಡುವುದು.
- ತಡೆರಹಿತ ವಾತಾವರಣ ಕಲ್ಪಿಸುವುದು.
- ತರಗತಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ಪ್ರಮಾಣ ಸಹಜ ಬೆಳಕನ್ನು ಒದಗಿಸಿ ಕೊಡುವುದು.
- ದೃಶ್ಯಾವಳಿಗಳನ್ನು ಶಿಕ್ಷಕರು ಮಗುವಿನ ಎದುರಿನಲ್ಲಿ ಮಾತಿನ ಮೂಲಕ ವಿವರಣೆ ನೀಡುವುದು.
- ಹೆಚ್ಚಿನ ಕಾಲಾವಕಾಶ ನೀಡಿ ಪ್ರೋತ್ಸಾಹಿಸುವುದು.
- ಮಗುವಿನ ಅಗತ್ಯಕ್ಕನುಗುಣವಾಗಿ ಸೂಕ್ತ ಆಸನದ ವ್ಯವಸ್ಥೆ ಮಾಡುವುದು.
  ಉದಾ: ತರಗತಿಯ ಮೊದಲನೇ, ಎರಡನೆ ಸಾಲಿನಲ್ಲಿ ಕೂರಿಸುವುದು.
- ಬುದ್ಧಿವಂತ ಹಾಗೂ ಸಾಮಾನ್ಯ ಮಗುವಿನ ಜೊತೆಯಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುವುದು.
- ತಿಳಿ ಹಸಿರು ಬಣ್ಣದಿಂದ ಕೂಡಿರುವ ಕಪ್ಪುಹಲಗೆಯ ಮೇಲೆ ಹಳದಿ ಮಿಶ್ರಿತ ಬೂದುಬಣ್ಣದ ಸೀಮೆಸುಣ್ಣ ಬಳಸುವುದು.
- ಬಹು ಇಂದ್ರಿಯ ಬೋಧನೆಗೆ ಅವಕಾಶ ಕಲ್ಪಿಸುವುದು. ಉದಾ: ವಾಸನೆ, ರುಚಿ, ಸ್ಪರ್ಶ, ಆಲಿಸುವುದರಿಂದ ವಿಷಯವನ್ನು ತಿಳಿಯಲು ಅವಕಾಶ ನೀಡುವುದು.

**ದೃಷ್ಟಿದೋಷದ ಮಗುವಿಗೆ ನೀಡುವ ಉಪಕರಣ ಬಳಕೆ ಮತ್ತು ನಿರ್ವಹಣೆ.**

## ಪಾರ್ಶ್ವ ದೃಷ್ಟಿ ತೊಂದರೆ ಇರುವ ಮಕ್ಕಳಿಗೆ ಬಳಸುವ ಉಪಕರಣಗಳು.

- ಪರಿಸರದ ನೈಜವಸ್ತುಗಳ ಬಳಕೆ, ಬಣ್ಣದ ವಸ್ತುಗಳು.
- ದಪ್ಪ ಅಕ್ಷರದ ಆಕರ, ಬಣ್ಣವುಳ್ಳ ವಸ್ತುಗಳು, ಸ್ಕೆಚ್,ಮಾರ್ಕರ್ ಪೆನ್ನುಗಳು, ಧ್ವನಿಮುದ್ರಿತ ಕ್ಯಾಸೆಟ್. ಉಬ್ಬುತಗ್ಗು ಇರುವ ಮುದ್ರಿತ ಪುಸ್ತಕ.

- ಮಸೂರಗಳಿಂದ ಕನ್ನಡಕ, ವಿವಿಧ ಭೂತಗನ್ನಡಿಗಳು, ಬೈನಾಕ್ಯುಲರ್ ಬಳಸುವುದು.
- ದೂರದೃಷ್ಟಿವುಳ್ಳ ಮಕ್ಕಳಿಗೆ ಮಾನೋಕ್ಯುಲರ್.
- ದೃಷ್ಟಿ, ಶ್ರಾವ್ಯ, ಸ್ಪರ್ಶ ಜ್ಞಾನಕ್ಕೆ ಅನುಕೂಲವಾದ ಉಪಕರಣಗಳು.

**ಪೂರ್ಣದೃಷ್ಟಿ ತೊಂದರೆ ಇರುವ ಮಕ್ಕಳಿಗೆ ಬಳಸುವ ಸಾಧನ ಸಲಕರಣೆಗಳು**

- ಸಾಕಷ್ಟು ಆಟದ ಸಾಮಗ್ರಿಗಳು.
- ಉಬ್ಬು ಚಿತ್ರಗಳು, ಚಿತ್ರಪಟಗಳು.
- ಬ್ರೈಲ್ ಸ್ಲೇಟ್ ಮತ್ತು ಸ್ಟೈಲಸ್.
- ಅಬ್ಯಾಕಸ್, ಟೈಲರ್, ಬಿಳಿಗೋಲು. (ಉದ್ದನೆಯ ಬೆತ್ತ)
- ರೇಖಾಗಣಿತ ಸಾಮಗ್ರಿಗಳು, ಶಬ್ದದ ಚೆಂಡು, ಧ್ವನಿ ಸುರುಳಿಗಳು.

**ತರಗತಿಯ ನಿರ್ವಹಣೆ**

- ನಿಗದಿತ ಸಾಮರ್ಥ್ಯಕ್ಕೆ ನಿರ್ದಿಷ್ಟ ಉಪಕರಣಗಳನ್ನು ಬಳಸಿಕೊಂಡು ಶಿಕ್ಷಕರು ಸಾಮರ್ಥ್ಯದ ಗಳಿಕೆಗೆ ನೆರವಾಗುವ ಪೂರಕ ಚಟುವಟಿಕೆಗಳನ್ನು ಮಾಡಿಸಿ. ಸಾಮಾನ್ಯ ಮಕ್ಕಳೊಂದಿಗೆ ಕಲಿಯಲು ಅವಕಾಶ ನೀಡುವುದು.
- ಚಲನ ವಲನ ತರಬೇತಿ.
- ಸ್ಥಳ ಪರಿಜ್ಞಾನ ನೀಡುವುದು.

ಬ್ರೈಲ್ ಎಂಬುದು 6 ಚುಕ್ಕಿಗಳ ಸಂಯೋಜನೆಯಿಂದ ಕೂಡಿದ ಅಕ್ಷರಮಾಲೆ. ಈ ಅಕ್ಷರಗಳನ್ನು ಮಕ್ಕಳು ಬೆರಳುಗಳ ತುದಿಯಿಂದ ಸ್ಪರ್ಶಿಸುವುದರ ಮೂಲಕ ಓದಬಹುದು. ಇದನ್ನು ಬಹಳ ವರ್ಷಗಳ ಹಿಂದೆ ಫ್ರಾನ್ಸ್ ದೇಶದ 14 ವರ್ಷದ ಬಾಲಕ ಲೂಯಿಬ್ರೈಲ್ ಕಂಡುಹಿಡಿದನು. ಈ ಚುಕ್ಕಿಗಳನ್ನು ದಪ್ಪನಾದ ಹಾಳೆಗಳ ಮೇಲೆ ಜರುಗಿಸಬಹುದಾದ ಲೋಹದ ಪಟ್ಟಿಯ ಸಹಾಯದ ಮೂಲಕ ಬ್ರೈಲ್ ಹಲಗೆಯ ಮೇಲೆ ಹಿಂಭಾಗದಿಂದ 'ಸ್ಟೈಲಸ್' ಎಂಬ ಮುಳ್ಳಿನ ಹಿಡಿಯಿಂದ ಒತ್ತುವುದರ ಮೂಲಕ ಬರೆಯಬಹುದು. ಬ್ರೈಲ್‌ನ್ನು ಬರೆಯುವಾಗ ಮಗುವು ಚುಕ್ಕಿಗಳನ್ನು ಬಲದಿಂದ ಎಡಕ್ಕೆ ಬರೆಯಬೇಕಾಗುತ್ತದೆ. ನಂತರ ಮಗುವು ಹಾಳೆಯನ್ನು ತಿರುಗಿಸಿ ಎಡದಿಂದ ಬಲಕ್ಕೆ ಓದಬೇಕಾಗುತ್ತದೆ.

**ದೃಷ್ಟಿದೋಷವುಳ್ಳ ಮಕ್ಕಳ ಮೌಲ್ಯಮಾಪನ**

- ಮಗುವಿನ ಕಲಿಕಾ ಪ್ರಗತಿಯನ್ನು ತಿಳಿಯಲು ಮೌಖಿಕವಾಗಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.
- ಬ್ರೈಲ್ ಲಿಪಿಯ ಸಹಾಯದಿಂದ ಓದು-ಬರಹ ಮೂಲಕ ಉತ್ತರ ಪಡೆಯುವುದು.
- ಬ್ರೈಲ್ ಉಪಕರಣಗಳನ್ನು ಉಪಯೋಗಿಸುವುದು.

  ಉದಾ: ಟೇಲರ್ ಫ್ರೇಮ್, ಅಬಾಕಸ್,ಬ್ರೈಲ್ ಸ್ಲೇಟ್, ಸ್ಲೇಟ್, ಸ್ಟೆಲಸ್, ಬ್ರೈಲ್ ಪಠ್ಯಪುಸ್ತಕ.
- ಸ್ಕ್ರೈಟ್ ಸಹಾಯದೊಂದಿಗೆ ಮೌಲ್ಯಮಾಪನ ಮಾಡುವುದು.
- ವೈಯಕ್ತಿಕ ಶೈಕ್ಷಣೀಕ ಯೋಜನೆಯನ್ನು ದಾಖಲೀಕರಿಸುವುದು.
- ಸಹಪಠ್ಯ ಚಟುವಟಿಕೆಗಳಲ್ಲಿ ಸಾಧಿಸಿರುವ ವಿಶೇಷತೆಯನ್ನು ದಾಖಲೀಸುವುದು.

**ಬುದ್ಧಿದೋಷವುಳ್ಳ ಮಕ್ಕಳ ಸಾಧ್ಯತೆಗಳು:**

| ಶೈಕ್ಷಣಿಕ ಸಾಧ್ಯತೆಗಳು | ಇತರೆ ಮೂಲಭೂತ ಸಾಧ್ಯತೆಗಳು |
|---|---|
| • ಮಗುವಿನ ಬುದ್ಧಿಶಕ್ತಿಗನುಗುಣವಾಗಿ ವೈಯಕ್ತಿಕ ಶೈಕ್ಷಣಿಕ ಕಾರ್ಯಕ್ರಮ. | • ಮನೋವೈದ್ಯರ ಸಲಹೆ ಮತ್ತು ಅನುಸರಣೆ |
| • ಹೆಚ್ಚು ಮೂರ್ತ ಮತ್ತು ನೈಜ ವಸ್ತುಗಳನ್ನು ಬಳಸುವುದು. | • ಸಾಮಾಜಿಕ ಮತ್ತು ಔದ್ಯೋಗಿಕ ಕೌಶಲಗಳು. |
| • ಬಹು ಇಂದ್ರಿಯ ಚಟುವಟಿಕೆ ನೀಡುವುದು. | • ದಿನನಿತ್ಯ ಜೀವನ ನಿರ್ವಹಣಾ ಕೌಶಲಗಳು. |
| • ಸಣ್ಣ ಪ್ರಗತಿಯನ್ನೂ ಗುರ್ತಿಸಿ ಪ್ರಶಂಶಿಸುವುದು. | • ಪೋಷಕರಿಗೆ ಆಪ್ತಸಲಹೆ ಮತ್ತು ಮಾರ್ಗದರ್ಶನ |
| • ಮೇಲಿಂದ ಮೇಲೆ ಪುನರಾವರ್ತಿಸುವುದು. | |
| • ಮಧ್ಯೆ ಮಧ್ಯೆ ಲಘು ವಿಶ್ರಾಂತಿ ನೀಡುವುದು. | |
| • ಶಾಲೆಯ ಪಠ್ಯೇತರ ಚಟುವಟಿಕೆಯಲ್ಲಿ ಭಾಗಿಯಾಗುವಂತೆ ಮಾಡುವುದು. | |

## ಬುದ್ಧಿದೋಷವುಳ್ಳ ಮಕ್ಕಳ ಶಿಕ್ಷಣ:

ಮಿತಿಯುಳ್ಳ ಬುದ್ಧಿಶಕ್ತಿ ದೀರ್ಘ ಅವಧಿಯವರೆಗೆ ಮುಂದುವರೆದರೆ ಮಕ್ಕಳು ಕಲಿಕೆಯಲ್ಲಿ ಮತ್ತು ಸಾಮಾಜಿಕ ಹೊಂದಾಣಿಕೆಯಲ್ಲಿ ತೊಂದರೆಯನ್ನು ಅನುಭವಿಸುತ್ತಾರೆ.

## ಬುದ್ಧಿ ದೋಷದ ವರ್ಗೀಕರಣ :

ಬುದ್ಧಿದೋಷವನ್ನು ವ್ಯಕ್ತಿಯ ಬುದ್ಧಿಮಟ್ಟವನ್ನು ಆಧರಿಸಿ ಈ ಕೆಳಗಿನಂತೆ ವರ್ಗೀಕರಿಸಲಾಗುತ್ತದೆ. ಇದನ್ನು ಮನೋವಿಜ್ಞಾನಿಗಳು ಮಾಪನ ಮಾಡಿ ವರದಿ ನೀಡುತ್ತಾರೆ. ಇದನ್ನು ಐ.ಕ್ಯೂ.ನಲ್ಲಿ ಅಳೆಯಲಾಗುತ್ತದೆ.

01. ಸೌಮ್ಯ - 75 - 89 IQ

02. ಸಾಧಾರಣ - 50 - 74 IQ

03. ತೀವ್ರ - 30 - 49 IQ

04. ಅತಿ ತೀವ್ರ - 30 - IQ ಕ್ಕಿಂತ ಕಡಿಮೆ

ಈ ಬಗೆಯ ವರ್ಗೀಕರಣ ಶೈಕ್ಷಣಿಕ ಅಗತ್ಯಗಳನ್ನು ಯೋಜಿಸಲು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯುಕ್ತವಾಗಿದೆ. ಈ ಮೇಲಿನ ಎಲ್ಲಾ ವರ್ಗದ ಮಕ್ಕಳೂ ಅವರ ಸಾಮರ್ಥ್ಯಕ್ಕನುಗುಣವಾಗಿ ಶಿಕ್ಷಣ ಪಡೆಯಬಲ್ಲರು.

## ಗುರುತಿಸಲು ನೆರವಾಗುವ ಲಕ್ಷಣಗಳು :

- ವಯೋಮಾನಕ್ಕನುಗುಣವಾಗಿ ಅರಿವು ಜ್ಞಾನಗಳು ಕಂಡುಬರುವುದಿಲ್ಲ.
- ತನ್ನ ಕೆಲಸಗಳನ್ನು ತಾನು ಮಾಡಿಕೊಳ್ಳುವುದಿಲ್ಲ.
- ಕಲಿಕೆ ಮತ್ತು ಗ್ರಹಿಕೆಯಲ್ಲಿ ನಿಧಾನ.
- ಮಂಕುತನ, ಚಟುವಟಿಕೆಗಳಲ್ಲಿ ಬಹಳ ನಿಧಾನ, ಕೆಲವೊಮ್ಮೆ ಏನೂ ಗೊತ್ತಾಗುವುದಿಲ್ಲ.

- ನಾಚಿಕೆಯ ಸ್ವಭಾವ
- ಆಕಾರದಲ್ಲಿ ಚಿಕ್ಕತಲೆ, ದೊಡ್ಡತಲೆ.
- ಜ್ಞಾಪಕ ಶಕ್ತಿಯ ಕೊರತೆ.
- ಚಟುವಟಿಕೆಯಲ್ಲಿ ಏಕಾಗ್ರತೆ ಇಲ್ಲದಿರುವುದು.
- ಬೆಳವಣಿಗೆಯ ಮೈಲಿಗಲ್ಲುಗಳಲ್ಲಿ ವಿಳಂಬ.
- ಗಿಡ್ಡ ಕೈ ಕಾಲುಗಳು, ಓರೆಯಾದ ಕಣ್ಣು, ಚಪ್ಪಟೆ ಮೂಗು, ಮೃದು ಚರ್ಮ , ಅಂಗೈಗೆರೆಗಳಲ್ಲಿ ವ್ಯತ್ಯಾಸ, ಅತಿ ಹೆಚ್ಚು ಚಟುವಟಿಕೆ, ಅತಿ ಕಡಿಮೆ ಚಟುವಟಿಕೆ ಮತ್ತು ಯಾವಾಗಲೂ ಬಾಯಲ್ಲಿ ಜೊಲ್ಲು ಸುರಿಸುವುದು.
- ಕಲಿತ ವಿಷಯವನ್ನು ಹೆಚ್ಚು ಹೊತ್ತು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ.
- ಬಾಯಿಯನ್ನು ತೆರೆದು ಚಿಕ್ಕದಾಗಿ ನಾಲಿಗೆ ಹೊರಕ್ಕೆ ಹಾಕುತ್ತಿರುವುದು.

**ಶೈಕ್ಷಣಿಕ ಪರಿಣಾಮಗಳು :**

- ತರಗತಿಯಲ್ಲಿ ಮೊದಮೊದಲು ಒಂದು ಕಡೆ ಹೆಚ್ಚು ಹೊತ್ತು ಕೂರದಿರುವುದು.
- ಸಹಪಾಠಿಗಳೊಂದಿಗೆ ಪದೇ ಪದೇ ಕೀಟಲೆ ಮಾಡುತ್ತಿರುತ್ತಾರೆ.
- ಇಂತಹ ಮಕ್ಕಳಿಗೆ ಹೇಳಿದ ವಿಷಯವನ್ನು ಪದೇ ಪದೇ ಅದೇ ವಿಷಯವನ್ನು ಪುನರಾವರ್ತಿಸಬೇಕಾಗುತ್ತದೆ.
- ಬರೆಯುವಾಗಿ ಅಕ್ಷರ ಮತ್ತು ಪದಗಳ ಮಧ್ಯೆ ಹೊಂದಾಣಿಕೆ ಇರದೆ ಬಿಟ್ಟು ಬಿಟ್ಟು ಬರೆಯುತ್ತಾರೆ.
- ತರಗತಿಯ ಸಹಪಾಠಿಗಳೊಂದಿಗೆ ಹೊಂದಿಕೊಳ್ಳಲು ಪ್ರಾರಂಭದಲ್ಲಿ ಹೆಚ್ಚುಹೊತ್ತು ತೆಗೆದುಕೊಳ್ಳುವುದು.
- ಕೆಲ ಮಕ್ಕಳು ಸ್ಥಿರವಾಗಿ ಗಮನ ಕೇಂದ್ರಿಕರಿಸಲಾರರು.

**ಶಿಕ್ಷಕರ ಸಹಾಯ ಮತ್ತು ಮಾರ್ಗದರ್ಶನ :**

- ಈ ಮಕ್ಕಳು ಕೆಲವು ಮೂಲಭೂತ ಶೈಕ್ಷಣಿಕ ಕೌಶಲಗಳನ್ನು ಮಾತ್ರ ಕಲಿಯುವ ಸಾಮರ್ಥ್ಯ ಹೊಂದಿರುತ್ತಾರೆ. ಎಲ್ಲಾ ಕೌಶಲಗಳಲ್ಲಿ ಪ್ರಾಮುಖ್ಯತೆಯನ್ನು ಪಡೆಯದಿದ್ದರೂ ನಿತ್ಯಜೀವನಕ್ಕೆ ಸಹಕಾರಿಯಾಗಿರುವಷ್ಟರ ಮಟ್ಟಿಗೆ ಕೆಲ ಕೌಶಲಗಳನ್ನು ಕಲಿಯಲು ಅವಕಾಶ ನೀಡುವುದು.
- ಕಲಿಕಾಂಶವನ್ನು ಕಲಿಸುವಾಗ ಅದರಲ್ಲಿರುವ ಸರಳ ಪರಿಕಲ್ಪನೆಗಳನ್ನು ಗುರುತಿಸಿ, ಪ್ರತಿಯೊಂದನ್ನು ಕಲಿಯಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಂಡು ನಿಧಾನವಾಗಿ ಕಲಿಸುವುದು.
- ಸಾಮಾನ್ಯ ಮಕ್ಕಳೊಂದಿಗೆ ಬುದ್ಧಿದೋಷವುಳ್ಳ ಮಕ್ಕಳನ್ನು ಕೀಟಲೆ ಮಾಡುವುದು, ಸತಾಯಿಸುವುದು, ಇತರೆ ಅಹಿತಕರ ಚಟುವಟಿಕೆ ನಡೆಸದಂತೆ ತರಗತಿಯಲ್ಲಿ ನೋಡಿಕೊಳ್ಳುವುದು.
- ಕಲಿಕೆಯ ಪ್ರಗತಿಯನ್ನುಮುಕ್ತವಾಗಿ ಪ್ರಶಂಸಿಸಿ, ಸಹಪಾಠಿಗಳಿಗೆ ಮತ್ತು ಪೋಷಕರಿಗೆ ವಿವರಿಸಬೇಕಾಗುವುದು.
- ಏಕಾಂಗಿಯಾಗಿ ಇರಲು ಬಿಡಬಾರದು.
- ಇತರರ ಸಾಮರ್ಥ್ಯಗಳೊಂದಿಗೆ ಹೋಲಿಕೆ ಮಾಡದಿರುವುದು.
- ಚೂಪಾದ ಹರಿತವಾದ ಅಪಾಯಕಾರಿಯಾದ ವಸ್ತುಗಳನ್ನು ತರಗತಿ ಕೋಣೆಯಿಂದ ದೂರವಿರಿಸುವುದು.
- ಈ ಮಕ್ಕಳು ಕಲಿತಿದ್ದನ್ನು ಮರೆಯದಂತೆ ಹೆಚ್ಚಿನ ಅಭ್ಯಾಸ ಮತ್ತು ಪುನರಾವರ್ತನೆ ನೀಡುವುದು.

- ❖ ಕೇವಲ ಮಾತಿನ ಮೂಲಕ ವಿವರಣೆ ನೀಡುವ ಬದಲು ಚಟುವಟಿಕೆಗಳ ಮೂಲಕ, ಏಕಪಾತ್ರಾಭಿನಯ, ಸಂಭಾಷಣೆ, ನಾಟಕಾಭಿನಯ ಮುಂತಾದ ಸನ್ನಿವೇಶಗಳನ್ನು ರೂಢಿಸಿಕೊಳ್ಳಬೇಕು.
- ❖ ಆಟ, ದೈಹಿಕ ಚಟುವಟಿಕೆಗಳು ಮತ್ತು ಹಾಡುಗಾರಿಕೆ ಕಲಿಕೆಯ ವಿಧಾನಗಳನ್ನು ಉಪಯೋಗಿಸಿಕೊಂಡು ಕಲಿಸಬೇಕು. ಇದರಿಂದ ಮಕ್ಕಳ ಮೇಲೆ ಶಾಶ್ವತ ಕಲಿಕಾ ಪರಿಣಾಮವನ್ನುಂಟು ಮಾಡಬಹುದು.
- ❖ ಕೆಲವೊಮ್ಮೆ ಮೂಲಭೂತ ಕೌಶಲಗಳನ್ನು ಕಲಿಸಲು ಸಾಮಾನ್ಯ ಅವಧಿಗಿಂತ ಹೆಚ್ಚು ಸಮಯಬೇಕಾಗುತ್ತದೆ.
- ❖ ಮಕ್ಕಳಿಗೆ ಇಷ್ಟವಾದ ವಿಷಯಗಳನ್ನು ಗುರ್ತಿಸಿ, ಅದರ ಮೂಲಕ ವಿಷಯಗಳನ್ನು ಕಲಿಸುವುದು.
- ❖ ಮಕ್ಕಳಿಗೆ ಪ್ರೇರಣೆ ಮತ್ತು ಪ್ರೋತ್ಸಾಹ ಪ್ರತಿ ಹಂತದಲ್ಲೂ ನೀಡುವುದು.
- ❖ ನೇರ ಮತ್ತು ಸರಳ ಪ್ರಶ್ನೆ ಕೇಳುವುದು.
- ❖ ಮೌಖಿಕ ಪರೀಕ್ಷೆಗೆ ಹೆಚ್ಚಿನ ಅಂಕಗಳನ್ನು ನಿಗದಿತಗೊಳಿಸುವುದು.
- ❖ ಚಟುವಟಿಕೆ ಆಧಾರಿತ ಪರೋಕ್ಷ ಮೌಲ್ಯಮಾಪನ ಮಾಡುವುದು.
- ❖ ಹೆಚ್ಚಾಗಿ ವಸ್ತುನಿಷ್ಠ ಪ್ರಶ್ನೆಗಳನ್ನು ನೀಡುವುದು.

**ಬುದ್ಧಿದೋಷದ ಮಗುವಿಗೆ ನೀಡುವ ಉಪಕರಣ ಬಳಕೆ ಅಥವಾ ನಿರ್ವಹಣೆ**

- ❖ ಟಿ.ಎಲ್.ಎಂ. ಕಿಟ್. ಹಾಗೂ ಜೋಡಣಾ ಪಟ್ಟಿಗಳ ಬಳಕೆ
- ❖ ಬಹು ಇಂದ್ರಿಯ ಕಲಿಕೆಯ ಸಾಮಗ್ರಿಗಳು
- ❖ ಮಿಂಚುಪಟ್ಟಿಗಳು ದಪ್ಪ ಅಕ್ಷರ ಮತ್ತು ಸಂಖ್ಯೆಗಳಿಂದ ಕೂಡಿರಬೇಕು.
- ❖ ಫಜಲ್ ಬೋರ್ಡುಗಳು ಮತ್ತು ಟ್ರೈನಿಂಗ್ ಪುಸ್ತಕಗಳ ಬಳಕೆ, ಕಲಿಕೆಯ ಉಪಕರಣಗಳನ್ನು ಮಗು ಸ್ಪರ್ಶಿಸಿ ನೋಡಿ ಕಲಿಯಲು ಅವಕಾಶ ಮಾಡಿಕೊಡಬೇಕು.
- ❖ ಚಟುವಟಿಕೆಗಳನ್ನು ಕೊಟ್ಟಾಗ, ಹೆಚ್ಚಾಗಿ ಟಿ.ಎಲ್.ಎಂ. ಕಿಟ್ ಬಳಸುವುದು.
- ❖ ನೈಜ ಕಲಿಕೋಪಕರಣ ನೀಡಿ ಪರಿಕಲ್ಪನೆಗಳನ್ನು ಮೂಡಿಸುವುದು.

## ಚಲನಾಂಗ ಅಥವಾ ದೈಹಿಕ ದೋಷವುಳ್ಳ ಮಕ್ಕಳ ಸಾಧ್ಯತೆಗಳು

| ಶೈಕ್ಷಣಿಕ ಸಾಧ್ಯತೆಗಳು | ಇತರೆ ಮೂಲಭೂತ ಸಾಧ್ಯತೆಗಳು |
|---|---|
| ❖ ತರಗತಿಯಲ್ಲಿ ಸಾಧನೋಪಕರಣಗಳನ್ನು ಧರಿಸಿಯೇ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು. ಇದಕ್ಕಾಗಿ ಅವರಿಗೆ ಸೂಕ್ತ ಸ್ಥಳಾವಕಾಶ ಒದಗಿಸುವುದು. | ❖ ಮೂಳೆ ತಜ್ಞರಿಂದ ತಪಾಸಣೆ ಮತ್ತು ಚಿಕಿತ್ಸೆ |
| ❖ ಅಗತ್ಯವಾದಲ್ಲಿ ದಪ್ಪ ಹಿಡಿಕೆಯಿರುವ ಸೀಸದ ಕಡ್ಡಿಯನ್ನು ಬರೆಯಲು ಬಳಸುವುದು. | ❖ ಮೂಳೆ ತಜ್ಞರ ಸಲಹೆಯ ಮೇರೆಗೆ ಸಾಧನೋಪಕರಣಗಳ ಪೂರೈಕೆ ಮತ್ತು ಬಳಕೆ. |
| ❖ ಸಣ್ಣ ಪ್ರಗತಿಯನ್ನೂ ಗುರ್ತಿಸಿ ಪ್ರಶಂಸಿಸುವುದು. | ❖ ಸಾಮಾಜಿಕ ಮತ್ತು ಔದ್ಯೋಗಿಕ ಸಲಹೆ ಮತ್ತು ಮಾರ್ಗದರ್ಶನ ಇತ್ಯಾದಿ. |

| | |
|---|---|
| ❖ ಪರೀಕ್ಷೆ ಬರೆಯಲು ಹೆಚ್ಚಿನ ಸಮಯಾವಕಾಶ ಮಾಡಿಕೊಡುವುದು. | ❖ ಅಂಗ ಚಿಕಿತ್ಸಾ ಸೌಲಭ್ಯ ಕಲ್ಪಿಸುವುದು. |
| ❖ ಈ ಮಕ್ಕಳಿಗೆ ಭೌತಿಕ ಪರಿಸರದಲ್ಲಿ ಹೊಂದಾಣಿಕೆ ಬೇಕು. (ಇಳಿಜಾರು ಮಾರ್ಗ, ಹಿಡಿಕಂಬಿಗಳು ಇತ್ಯಾದಿ) | ❖ ಅಗತ್ಯವಿದ್ದಲ್ಲಿ ಈ ಮಕ್ಕಳು ಸ್ವತಂತ್ರವಾಗಿ ಓಡಾಡಲು ಗಾಲಿ ಕುರ್ಚಿಗಳನ್ನು ನೀಡಬೇಕು. |
| ❖ ತಡೆ ರಹಿತ ವಾತಾವರಣ ನಿರ್ಮಿಸುವುದು. | |

## ಚಲನಾಂಗ (ದೈಹಿಕ) ದೋಷವುಳ್ಳ ಶಿಕ್ಷಣ

ಇಂತಹ ಮಕ್ಕಳು ತಮ್ಮ ಕೈಕಾಲುಗಳ ಚಲನೆಯಲ್ಲಿ ಹಾಗೂ ಮೂಳೆ ಕೀಲುಗಳ ಮತ್ತು ಸ್ನಾಯುಗಳ ಸಾಮಾನ್ಯ ಕಾರ್ಯದಲ್ಲಿ ತೊಂದರೆಯನ್ನು ಅನುಭವಿಸುತ್ತಾರೆ.

**ಈ ಕೆಳಗಿನ ಕಾರಣಗಳಿಂದ ದೈಹಿಕ ದೋಷವುಂಟಾಗುತ್ತದೆ.**

ಪೋಲಿಯೋ, ಮಿದುಳಿನ ಪಾರ್ಶ್ವವಾಯು, ಹುಟ್ಟಿನಿಂದಲೇ ಇರುವ ವೈಕಲ್ಯತೆ, ಸುಟ್ಟಗಾಯ, ಅಂಗವಿಚ್ಛೇದನ, ಕುಷ್ಠರೋಗ, ಪಾರ್ಶ್ವವಾಯು, ಅಪಘಾತ ಮತ್ತು ರುಮೆಟಾಯಿಡ್,ಆರ್ಥ್ರೈಟಿಸ್, ಸ್ಪೈನಾ ಬೈಫಿಡಾ ಇತ್ಯಾದಿ.

## ದೋಷವನ್ನು ಗುರುತಿಸಲು ನೆರವಾಗುವ ಲಕ್ಷಣಗಳು

- ❖ ಮಗುವಿನ ಅಂಗಾಂಗಗಳು ಸರಿಯಾಗಿ ಬೆಳವಣಿಗೆಯಾಗದಿರುವುದು.
- ❖ ಏಕಾಂಗಿಯಾಗಿರುವುದು, ಸದಾ ಅನಾರೋಗ್ಯದಿಂದ ಬಳಲುವುದು. ನಡೆದಾಡಲು ತಡವರಿಸುವುದು.
- ❖ ಕುತ್ತಿಗೆ, ಕೈ ಬೆರಳುಗಳು, ಸೊಂಟ ಕಾಲುಗಳಲ್ಲಿ ದೋಷ ಹೊಂದಿರುವುದು.
- ❖ ಕೀಲು ನೋವು ಅನುಭವಿಸುವುದು.
- ❖ ಪೆನ್ನು ಹಿಡಿಯಲು, ಓದಲು, ಬರೆಯಲು ತೊಂದರೆ ಪಡುವುದು.
- ❖ ದಿನನಿತ್ಯದ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಾಗ ತೊಂದರೆ ಅನುಭವಿಸುವುದು.
- ❖ ಸರಿಯಾದ ಭಂಗಿಯಲ್ಲಿ ಕುಳಿತುಕೊಳ್ಳಲು, ನಿಲ್ಲಲು, ನಡೆದಾಡಲು ತೊಂದರೆ ಅನುಭವಿಸುತ್ತಿರುವುದು.

## ದೋಷದ ಶೈಕ್ಷಣಿಕ ಪರಿಣಾಮಗಳು

- ➢ ತರಗತಿ ಕೊಠಡಿಯಲ್ಲಿ ಇತರ ಮಕ್ಕಳಂತೆ ಸಕ್ರಿಯವಾಗಿ ಭಾಗವಹಿಸಲು ತೊಂದರೆಪಡುವುದು
- ➢ ಕ್ರೀಡೆ, ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಲು ತೊಂದರೆಪಡುವುದು.
- ➢ ಸ್ಥಳದಲ್ಲಿಯೇ ಮಾಡುವ ಚಟುವಟಿಕೆಯನ್ನು ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳುವುದು.
- ➢ ಲಿಖಿತ ಹಾಗೂ ಮೌಖಿಕ ಉತ್ತರ ನೀಡುವಾಗ ತಡವರಿಸುತ್ತಿರುವುದು.

## ಶಿಕ್ಷಕರ ಸಹಾಯ ಮತ್ತು ಮಾರ್ಗದರ್ಶನ

- ❖ ತರಗತಿಯಲ್ಲಿ ಗಾಲಿಕುರ್ಚಿ, ಕ್ಯಾಲಿಪರ್ಸ್‌ಗಳು (ಕೃತಕ ಕೈಕಾಲುಗಳು) ಮುಂತಾದವುಗಳ ಬಳಕೆ ಕುರಿತು ಮಾಹಿತಿ ನೀಡುವುದು.

- ❖ ಬರೆಯಲು, ಓದಲು, ಉತ್ತರಿಸಲು ಸಹಾಯ ಮತ್ತು ಸಮಯಾವಕಾಶ ನೀಡುವುದು.
- ❖ ಕ್ರೀಡೆ ಮತ್ತು ಮತ್ತಿತರ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು.
- ❖ ಕುಳಿತ ಭಂಗಿಯಲ್ಲಿ ಮಾಡುವ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ನೀಡುವುದು.
- ❖ ಲಿಖಿತ ಮತ್ತು ಮೌಖಿಕ ಉತ್ತರ ಪಡೆಯುವುದು.
- ❖ ತರಗತಿಯಲ್ಲಿ ಸೂಕ್ತ ತಡೆರಹಿತ ವಾತಾವರಣ ನೀಡುವುದು.

**ದೋಷದ ಮಗುವಿಗೆ ನೀಡುವ ಉಪಕರಣ ಬಳಕೆ ಮತ್ತು ನಿರ್ವಹಣೆ**

- ❖ ಗಾಲಿ ಕುರ್ಚಿ, ತ್ರಿಚಕ್ರ ವಾಹನ, ಊರುಗೋಲು, ಕೃತಕ ಕೈ ಕಾಲುಗಳು, ಸರ್ಜಿಕಲ್ ಶೂ, ಸೊಂಟ(ನಡು)ಪಟ್ಟಿಗಳು ಇತ್ಯಾದಿ ಉಪಕರಣಗಳ ಬಳಕೆ.
- ❖ ಸಂಪನ್ಮೂಲ ಕೊಠಡಿಗಳ ಬಳಕೆ, ವಿಶೇಷ ಸ್ನಾಯು ಕೌಶಲ, ದೈನಂದಿನ ಚಟುವಟಿಕೆ, ಅಂಗಚಿಕಿತ್ಸೆ, ತೆರಫಿ ಶಿಕ್ಷಣ, ವೈದ್ಯಕೀಯ ಸಲಹೆ, ವಿಶೇಷ ತಜ್ಞರ ಮಾರ್ಗದರ್ಶನ, ಪಾಲಕ ಪೋಷಕರಿಗೆ ಆಪ್ತ ಸಮಾಲೋಚನೆ ಕಾಲಕಾಲಕ್ಕೆ ನೀಡಿ ಪ್ರೇರೇಪಿಸುವುದು.

## ಕಲಿಕಾ ದೋಷವುಳ್ಳ ಮಕ್ಕಳು ಸಾಧ್ಯತೆಗಳು

| ಶೈಕ್ಷಣಿಕ ಸಾಧ್ಯತೆಗಳು | ಇತರೆ ಮೂಲಭೂತ ಸಾಧ್ಯತೆಗಳು |
|---|---|
| ❖ ಕಲಿಕೆಯ ಅಂಶಗಳನ್ನು ಹಂತಹಂತವಾಗಿ ಕಲಿಯಲು ಅವಕಾಶ ನೀಡುವುದು. | ❖ ಮನೋ ವೈದ್ಯರಿಂದ ತಪಾಸಣೆ ಮತ್ತು ಸಲಹೆ. |
| ❖ ಬಹು ಇಂದ್ರಿಯ ಕಲಿಕಾ ಅನುಭವವನ್ನು ಒದಗಿಸುವುದು ಅಥವಾ ಉತ್ತೇಜನ ನೀಡುವುದು. | |
| ❖ ಪರಿಹಾರಾತ್ಮಕ ಬೋಧನೆ ಅತ್ಯವಶ್ಯಕ. | |

## ಕಲಿಕಾ ದೋಷವುಳ್ಳ ಮಕ್ಕಳು

ಮಗುವು ದಿನನಿತ್ಯದ ಚಟುವಟಿಕೆಯಲ್ಲಿ ಪ್ರಮುಖವಾದ ವಿಷಯಗಳನ್ನು ಮತ್ತು ಬೇಡಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವಲ್ಲಿ ತೊಂದರೆ ಅನುಭವಿಸುತ್ತದೆ. ಓದಲು, ಬರೆಯಲು, ಗಣಿತ, ಭಾಷಾ ವಿಷಯಗಳನ್ನು ಅರ್ಥೈಸುವಲ್ಲಿ ತೊಂದರೆಯಿರುವ ಮಕ್ಕಳನ್ನು ಕಲಿಕಾ ದೋಷವುಳ್ಳ ಮಕ್ಕಳು ಎನ್ನುತ್ತಾರೆ.

## ಕಲಿಕೆಯಲ್ಲಿ ದೋಷವುಳ್ಳ ಮಕ್ಕಳ ಶೈಕ್ಷಣಿಕ ಸಮಸ್ಯೆಗಳು

ಶಾಲಾ ಮಕ್ಕಳಲ್ಲಿ ವಿವಿಧ ರೀತಿಯ ಶೈಕ್ಷಣಿಕ ತೊಂದರೆಗಳನ್ನು ನಾವು ಕಾಣಬಹುದು. ಅವು ಮಕ್ಕಳ ವಯಸ್ಸು ಮತ್ತು ಬೆಳವಣಿಗೆಯ ಹಂತಗಳಿಗನುಸಾರವಾಗಿ ವಿಭಿನ್ನವಾಗಿರುವುವು. ಶಾಲಾ ಪೂರ್ವದಲ್ಲಿ ಮಾತು, ಭಾಷೆ ಹಾಗೂ ಸಂಭಾಷಣೆಯಲ್ಲಿ ಗೊಂದಲಗಳಿರುವುದು ಸರ್ವೇಸಾಮಾನ್ಯ. ಕೆಲವು ಮಕ್ಕಳು ನಿಧಾನವಾಗಿ ಮಾತನಾಡಿದರೆ, ಇನ್ನು ಕೆಲವರು ಮಾತನಾಡುವಾಗ ತಡವರಿಸಬಹುದು ಅಥವಾ ನಿರರ್ಗಳತೆ ಕಾಣದಿರಬಹುದು. ಹಲವಾರು ಉಚ್ಛಾರಣೆಯಲ್ಲಿ ದೋಷ ತೋರಿದರೆ, ಇನ್ನೂ ಕೆಲವರು ಧ್ವನಿಯ ಏರಿಳಿತಗಳ ಮೇಲೆ ಹಿಡಿತ ಸಾಧಿಸುವಲ್ಲಿ ಸೋಲುವರು. ಗ್ರಹಿಕೆ ಮತ್ತು ಕಣ್ಣು–

ಕರ ಸಂಯೋಜನೆಯನ್ನು ಬಳಸಿ ಮಾಡುವಂತಹ ಚಟುವಟಿಕೆಗಳಲ್ಲಿ ಕೆಲವರು ತೊಂದರೆ ಪಡುವರು. ಮಕ್ಕಳಲ್ಲಿ ಶ್ರವಣ ಅಥವಾ ದೃಷ್ಟಿ ದೋಷಗಳಿರಬಹುದು. ಕೆಲವು ಬಾರಿ ಮಕ್ಕಳು ಹಠಾತ್ ಪ್ರವೃತ್ತಿ ತೋರಬಹುದು. ಕೈಯಲ್ಲಿರುವ ವಸ್ತುವನ್ನು ಹಾಳುಮಾಡಬಹುದು. ಕಲ್ಲು ತೂರಬಹುದು ಹೀಗೆ ವ್ಯತಿರಿಕ್ತವಾಗಿ ವರ್ತಿಸಬಹುದು. ಇಂತಹ ಮಕ್ಕಳು ಸರಾಸರಿ ಅಥವಾ ಸರಾಸರಿಗಿಂತ ಹೆಚ್ಚಿನ ಮಟ್ಟದ ಸಾಮಾನ್ಯ ಬುದ್ಧಿಶಕ್ತಿಯನ್ನ ಹೊಂದಿರುತ್ತಾರೆ.

## ದೋಷದ ಬಗೆಗಳು :

- ಓದುವ ತೊಂದರೆಯಿರುವ ಮಕ್ಕಳು.
- ಗಣಿತದ ಲೆಕ್ಕಾಚಾರ ಮಾಡುವಲ್ಲಿ ತೊಂದರೆ ಇರುವ ಮಕ್ಕಳು.
- ಬರೆಯುವ ಕ್ರಿಯೆಯಲ್ಲಿ ತೊಂದರೆ ಇರುವ ಮಕ್ಕಳು.
- ಜ್ಞಾಪಕ ಶಕ್ತಿಯಲ್ಲಿ ತೊಂದರೆ ಇರುವ ಮಕ್ಕಳು.

## ಗುರುತಿಸಲು ನೆರವಾಗುವ ಲಕ್ಷಣಗಳು :

- ಸಹಪಾಠಿಗಳಿಗಿಂತ ಬಹಳ ನಿಧಾನವಾಗಿ ಓದುತ್ತಾರೆ. 'ದಿನ'ವನ್ನು ನದಿ ಎಂದೂ, 'ಬಳೆ'ಯನ್ನು ಬಲೆ ಎಂದೂ 'ಕಾರು' ಎಂಬುದನ್ನು ಕರು ಎಂದು ತಪ್ಪಾಗಿ ಓದುವುದು.
- ಲೆಕ್ಕದಲ್ಲಿ ತೊಂದರೆ 6 ಮತ್ತು 9, 31 ಮತ್ತು 13 ಈ ರೀತಿಯ ಸಂಖ್ಯೆಗಳನ್ನು ಅದಲು ಬದಲಾಗಿ ಓದುವುದು.
- ಲೆಕ್ಕದಲ್ಲಿ ಮೂಲ ಕ್ರಿಯೆಗಳ ಸಂಕೇತಗಳನ್ನು ತಪ್ಪಾಗಿ ಬರೆಯುತ್ತಾರೆ.
- ಪರಿಚ್ಛೇದ ಓದಿ, ಚಿಕ್ಕ ಪ್ರಶ್ನೆಗಳಿಗೂ ಉತ್ತರಿಸುವುದಿಲ್ಲ.
- ಕೈ ಬರಹ ಮಾತನಾಡುವ ಕೌಶಲ ಮುಂತಾದವುಗಳಲ್ಲಿ ತೀರಾ ಹಿಂದುಳಿದಿರುವುದು.
- ಕಾರ್ಯ ಚಟುವಟಿಕೆ ಮಾಡುವಲ್ಲಿ ತುಂಬಾ ನಿಧಾನವಾಗಿ ಮಾಡುವುದು.
- ಏಕಾಗ್ರತೆ ಕಡಿಮೆ ಹೊಂದಿರುವುದು.
- ಸಮಯ, ದಿನ, ತಿಂಗಳು, ಋತು ಮತ್ತು ಮಗ್ಗಿಯನ್ನು ಕ್ರಮವಾಗಿ ಹೇಳುವಾಗ ತೊಂದರೆ. ದಿಕ್ಕುಗಳನ್ನು ಸೂಚಿಸುವಾಗ ತೊಂದರೆ, ಎಡ-ಬಲ, ಮೇಲೆ-ಕೆಳಗೆ, ಮುಂದೆ-ಹಿಂದೆ ಇವುಗಳ ಬಗ್ಗೆ ಗೊಂದಲ.
- ಶೈಕ್ಷಣಿಕವಾಗಿ ಎಲ್ಲಾ ವಿಷಯಗಳು ಒಂದೇ ರೀತಿ ಪ್ರಗತಿ ಇರುವುದಿಲ್ಲ.
- ಸೂಚನೆ ಪಾಲಿಸಲು ಹೇಳಿದಾಗ ಮತ್ತೆ ಮತ್ತೆ ಹೇಳುವಂತೆ ಕೇಳುವುದು.

## ಕಲಿಕೆಯ ಸಮಸ್ಯೆಗಳನ್ನು ಗುರುತಿಸುವುದು ಹಾಗೂ ನಿರ್ಣಯಿಸುವುದು

## ಗಣಿತದಲ್ಲಿರುವ ಸಾಮಾನ್ಯ ದೋಷಗಳು :

- ಯೋಚಿಸದೆ ಎಣಿಸುವುದು. 19,30. . . . .109, 1000. . .
- ಅಂಕೆ ಸಂಖ್ಯೆಗಳ ಉಕ್ತಲೇಖನ
- 101 ನ್ನ 1001 ಎಂದು ಬರೆಯುವುದು, ಓದುವುದು : 86 ನ್ನು 806 ಎಂದು ಓದುವುದು, ಬರೆಯುವುದು, 110 ನ್ನು 1010 ಎಂದು ಬರೆಯುವುದು, ಓದುವುದು.

- ಕ್ರಮವಾಗಿ ಬರೆಯುವುದು 99 ರಿಂದ ಆದ ನಂತರ 109; 999 ನಂತರ 100
- ದೊಡ್ಡ ಹಾಗೂ ಸಣ್ಣ ಸಂಖ್ಯೆಗಳ ವ್ಯತ್ಯಾಸದಲ್ಲಿ ಗೊಂದಲ ಉದಾ:9<5, 17>71, 110>111 ತಪ್ಪಾಗಿ ಗುರುತಿಸುವುದು.
- ಏರಿಕೆ ಕ್ರಮ, ಇಳಿಕೆ ಕ್ರಮಗಳಲ್ಲಿ ಬರೆಯುವುದು. ಉದಾ: 2,5,1,8,7 ಅಥವಾ 3,1,4,8
- ಸಂಖ್ಯೆಗಳು ಹಾಗೂ ಕ್ರಮವಾಚಕಗಳಲ್ಲಿ ಗೊಂದಲ.
- ಬೆಸ ಸಮ ಸಂಖ್ಯೆಗಳಲ್ಲಿ ಗೊಂದಲ
- ಕೂಡುವಲ್ಲಿ ತಪ್ಪುಗಳು
- ಎಡದಿಂದ ಬಲಕ್ಕೆ ಕೂಡುವುದು
- ದಶಕ ತೆಗೆದುಕೊಂಡು ಕೂಡುವುದು.
- + ಚಿಹ್ನೆಯನ್ನು ಸರಿಯಾಗಿ ಬಳಸದೆ ತಪ್ಪು ಮಾಡುವುದು.
- ಕೂಡು, ಮೊತ್ತು, ಒಟ್ಟು ಇಂತಹ ಪದಗಳಲ್ಲಿ ಗೊಂದಲ
- ಕಳೆಯುವುದರಲ್ಲಿ ತಪ್ಪುಗಳು
- ಕಳೆಯುವಾಗ ತಪ್ಪು ಮಾಡುವುದು
- ದಶಕ ತೆಗೆದುಕೊಂಡು ಮಾಡುವುದರಲ್ಲಿ ತೊಂದರೆ
- - ಚಿಹ್ನೆಯನ್ನು ಸರಿಯಾಗಿ ಬಳಸದೆ ತಪ್ಪು ಮಾಡುವುದು
- ಕಳೆ, ವ್ಯತ್ಯಾಸ, ಉಳಿಯುವುದು ಇಂತಹ ಪದಗಳಲ್ಲಿ ಗೊಂದಲ
- ಮಗ್ಗಿ ಹೇಳಲು ಬರುವುದಿಲ್ಲ
- ಭಿನ್ನರಾಶಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಮಸ್ಯೆ
- ಸಂಖ್ಯೆಗಳನ್ನು ಎಣಿಸುವಾಗ ತಪ್ಪಾಗಿ ಎಣಿಸುವುದು. ಉದಾ: 19ರ ನಂತರ 30 ಎಂದು ಬರೆಯುವುದು.
- ಸ್ಥಾನ ಬೆಲೆಗಳ ಗುರುತಿಸುವಿಕೆಯಲ್ಲಿ ತೊಂದರೆ. ಉದಾ: 32ನ್ನು 23 ಎಂದು ಬರೆಯುವುದು
- ಚಿಕ್ಕ ಮತ್ತು ದೊಡ್ಡ ಸಂಖ್ಯೆಗಳಲ್ಲಿ ತೊಂದರೆ. ಉದಾ: 45>54
- ಏರಿಕೆ ಕ್ರಮ-ಇಳಿಕೆ ಕ್ರಮಗಳಲ್ಲಿ ತೊಂದರೆ. ಉದಾ: 3,2,4,1
- ಗಣಿತದಲ್ಲಿಯ ಕ್ರಮ ಸೂತ್ರ, ಅನುಕ್ರಮತೆ, ಕೂಡುವುದು, ಕಳೆಯುವುದು, ಗುಣಿಸುವುದು, ಭಾಗಿಸುವ ಮೂಲ ಕೌಶಲಗಳ ಪರಿಕಲ್ಪನೆ ಗ್ರಹಿಸುವಲ್ಲಿ ಮತ್ತು ನೆನಪಿಟ್ಟುಕೊಳ್ಳುವಲ್ಲಿ ಅಸಮರ್ಥರು.

**ಓದುವುದರಲ್ಲಿನ ದೋಷಗಳು :**

- ನಿಧಾನವಾಗಿ ಓದುವುದು ಅಥವಾ ಸಂಕೋಚದಿಂದ ಓದುವುದು
- ಬೆರಳಿಟ್ಟು ಓದುವುದು
- ಓದುವಾಗ ಪದಗಳನ್ನು, ವಾಕ್ಯಗಳನ್ನು ಹಾರಿಸಿ ಬಿಡುವುದು
- ಎರಡು ಅಥವಾ ಮೂರು ಬಾರಿ ಒಂದು ಪದವನ್ನು ಓದುವುದು
- ಓದಲು ಪ್ರಾರಂಭಿಸಿದಾಗ ಪ್ರತಿ ಪದದ ಅಕ್ಷರಗಳನ್ನು ಬಿಡಿ-ಬಿಡಿಯಾಗಿ ಓದುವುದು

- ಧ್ವನಿಯ ಏರಿಳಿತವಿಲ್ಲದಂತೆ ಓದುವುದು
- ಪದದ ಅಕ್ಷರಗಳನ್ನು ಸೇರಿಸಿ ಒಂದು ಪದವನ್ನು ಸರಿಯಾಗಿ ಉಚ್ಚರಿಸಲಾಗದು
- ಪದಗಳನ್ನು ತಪ್ಪಾಗಿ ಉಚ್ಚರಿಸುವರು
- ಧ್ವನಿಸಾಮ್ಯವಿರುವ ಪದಗಳಲ್ಲಿ ಗೊಂದಲ ಉದಾ: ಇರುವೆ
- ಧ್ವನಿ ಸಾಮ್ಯವಿರುವ ಪದಗಳನ್ನು ಗುರುತಿಸಲಾರರು
- ಭೂತಕಾಲದಲ್ಲಿರುವ ವಾಕ್ಯಗಳನ್ನು ಭವಿಷ್ಯತ್ ಕಾಲದಲ್ಲಿರುವಂತೆ ಓದುವುದು
- ಓದುವಾಗ ಊಹಿಸುತ್ತಾ ಇಲ್ಲದಿರುವ ಪದಗಳನ್ನು ಹೇಳಿಬಿಡುವುದು ಉದಾ: ಕಲ್ಪನೆ-ಕಮಲ
- ಇಂಗ್ಲೀಷ ಓದುವಾಗ dog ಎನ್ನುವ ಪದವನ್ನು god ಎಂದು no ಎನ್ನುವ ಪದವನ್ನು on ಎಂದು ಓದುವುದು
- ಪದಗಳಲ್ಲಿರುವ ಅಕ್ಷರಗಳನ್ನು ಹಿಂದೆ ಮುಂದೆ ಮಾಡುವುದು ಉದಾ: ಕಾಗದ-ಕಾದಗ
- ಹೃಸ್ವಸ್ವರಕ್ಕೆ -ಧೀರ್ಘ ಸ್ವರ, ಧೀರ್ಘ ಸ್ವರಕ್ಕೆ-ಹೃಸ್ವ ಸ್ವರ ಓದುವುದು.

  **ಉದಾ:** ಚಾಲಕ-ಚಲಕ, ಭವನ-ಭಾವನ
- ಉದ್ದವಾಗಿರುವ ಪದವನ್ನು ಅರ್ಧವೇ ಓದುವುದು ಉದಾ: ಪರಿಕಲ್ಪನೆ-ಕಲ್ಪನೆ
- ಒಂದೇ ತರಹ ಕಾಣುವ ಪದಗಳನ್ನು ತಪ್ಪಾಗಿ ಓದುವುದು house-horse
- ಇಲ್ಲದಿರುವ ಅಕ್ಷರ ಸೇರಿಸಿ ಹೇಳುವುದು ಉದಾ: children -childrens
- ಲೇಖನ ಚಿನ್ಹೆಗಳನ್ನು ಅಲಕ್ಷಿಸುವುದು
- ಇಂಗ್ಲೀಷ ಭಾಷೆ ಓದುವಾಗ ಪ್ರಿಪಿಕ್ಸ್ ಮತ್ತು ಸಪಿಕ್ಸ್ ನ್ನು ಬಿಟ್ಟು ಬಿಡುವುದು.
- ಇರುವ ಅಕ್ಷರ ಬಿಡುವುದು ಇಲ್ಲದಿರುವ ಅಕ್ಷರ ಸೇರಿಸುವುದು. ಉದಾ: ಸಮಯ-ಸಮ; ಕಣ-ಕರಣ; ದಿನ-ದಿವಸ
- ಲೇಖನ ಚಿನ್ಹೆಗಳ ಬಗ್ಗೆ ಅರಿವಿದ್ದರೂ ಕೂಡ ಓದುವಾಗ ಮತ್ತು ಬರೆಯುವಾಗ ಅನುಕ್ರಮವಾಗಿ ಬಳಸುವಲ್ಲಿ ಗಮನವಿರದು.

## ಬರವಣಿಗೆಯಲ್ಲಿ ವಿಶಿಷ್ಟವಾದ ದೋಷಗಳು

- ಆಂಗ್ಲ ಅಥವಾ ಕನ್ನಡ ವರ್ಣಮಾಲೆ ಸರಿಯಾಗಿ ಬರೆಯದಿರುವುದು
- ಕನ್ನಡದಲ್ಲಿ ಗುಣಿತಾಕ್ಷರ, ಒತ್ತಕ್ಷರಗಳಲ್ಲಿ ತಪ್ಪು ಹಾಗೂ ಇಂಗ್ಲೀಷ ನ 'spelling' ಗಳಲ್ಲಿ ದೋಷಗಳು
- 'p' ಬದಲಾಗಿ 'q' ಬರೆಯುವುದು- 'b' ಬದಲಾಗಿ 'd' ಬರೆಯುವುದು.
- 'N' ಅಕ್ಷರವನ್ನು 'U' ಎಂದ 'm' ಅಕ್ಷರವನ್ನು 'w' ಎಂದು ಬರೆಯುವುದು.
- ಉಚ್ಚರಿಸುವ ರೀತಿಯಲ್ಲೆ ಸ್ಪೆಲ್ಲಿಂಗ್‌ನ್ನು ಬರೆಯುವುದು. ಉದಾಹರಣೆ: 'Busy' ನ್ನು 'Buzzy' ಅಥವಾ 'sight' ನ್ನು 'site' ಎಂದು ಬರೆಯುವುದು.
- ಅತಿ ವಿಚಿತ್ರ ಸ್ಪೆಲ್ಲಿಂಗ್ ಬರೆಯುವುದು. 'last' ನ್ನು 'lenh' ಎಂದು ಬರೆಯುವುದು.
- ಇಂಗ್ಲೀಷ್ ಪದಗಳನ್ನು ಬರೆಯುವಾಗ ಕೆಲವು ಅಕ್ಷರಗಳನ್ನು ಬಿಟ್ಟು ಬರೆಯುವುದು. ಉದಾಹರಣೆಗೆ: 'went' ನ್ನು 'wet' ಅಥವಾ 'limp' ನ್ನು 'lip' ಎಂದು ಬರೆಯುವುದು.

- ಪದದಲ್ಲಿ ಇಲ್ಲದಿರುವ ಹೊಸ ಅಕ್ಷರವನ್ನು ಸೇರಿಸುವುದು. ಉದಾಹರಣೆ: 'want'ನ್ನು 'whant'
- ಅಕ್ಷರಗಳನ್ನು ಹೊಂದಿಸಿ ಬರೆಯುವಲ್ಲಿ ದೋಷ.
- ಅಕ್ಷರಗಳನ್ನು ಹೊಂದಿಸಿ ಜ್ಞಾನವಿದ್ದರೂ, ಅವುಗಳನ್ನು ಕ್ರಮವಾಗಿ ಬಳಸದಿರುವುದು.

**ಇತರೆ ಸಮಸ್ಯೆಗಳು**

- ಎಡ-ಬಲ ಗುರುತಿಸುವ ಪರಿಕಲ್ಪನೆಯಲ್ಲಿ ಗೊಂದಲ.
- ಮೇಲೆ-ಕೆಳಗೆ, ಹೆಚ್ಚ-ಕಡಿಮೆ, ಭಾರ-ಹಗುರ, ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ ಗುರುತಿಸುವಲ್ಲಿ ಸಮಸ್ಯೆ.
- ಹಣ ಹಾಗೂ ಕಾಲಜ್ಞಾನದಲ್ಲಿ ಸಮಸ್ಯೆ.
- ಕ್ರಮಬದ್ಧವಾದ ಕಾರ್ಯಚಟುವಟಿಕೆಗಳಲ್ಲಿ ಸಮಸ್ಯೆ. ಉದಾ: ಬೂಟ್ ಲೇಸ್ ಕಟ್ಟುವಲ್ಲಿ ಗೊಂದಲ.
- ಸುಲಭವಾಗಿ ಕೆಲಸ ಕಾರ್ಯಗಳನ್ನು ಮಾಡುವಲ್ಲಿ ತೊಂದರೆ.
- ದೃಷ್ಠಿ ಹಾಗೂ ಸ್ಥಳದರಿವಿನ ಹೊಂದಾಣಿಕೆಯಲ್ಲಿ ದೋಷಗಳು.
- ತ್ರಿ ಡೈಮೆನಷನಲ್(3D) ಆಕಾರಗಳನ್ನು ರಚಿಸುವಲ್ಲಿ ಅಥವಾ ನಕಲು ಮಾಡುವಲ್ಲಿ ಗೊಂದಲ.
- ಎಡಗೈ ಬಳಕೆಯ ಅಭ್ಯಾಸದಿಂದಾಗಿ ಮಾಡುವ ಎಲ್ಲಾ ಕಾರ್ಯಗಳಲ್ಲೂ ಗೊಂದಲ.

**ಕಲಿಕೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವ ಮಕ್ಕಳಲ್ಲಿ ಕಂಡುಬರುವ ಕೀಳರಿಮೆಯ ಲಕ್ಷಣಗಳು**

- ತಾವು ಇನ್ನೊಬ್ಬರನ್ನು ಖುಷಿಪಡಿಸಬೇಕೆಂದುಕೊಳ್ಳುವುದು.
- ತಮ್ಮನ್ನು ತಾವು ಇಷ್ಟಪಡದಿರುವುದು.
- ಯಾವಾಗಲೂ ಅಸಂತೋಷದಿಂದಿರುವುದು.
- ತಮಗೆ ಇರುವ ತೊಂದರೆಗಳು ನೀಗಿಸಲಾಗದಿರುವಂತವು ಎಂದುಕೊಳ್ಳುವುದು.
- ತಮ್ಮೆಲ್ಲಾ ತೊಂದರೆಗಳಿಗೆ ತಾವೇ ಕಾರಣರೂ, ತಮ್ಮೆಲ್ಲಾ ತಪ್ಪುಗಳಿಗೆ ತಾವೇ ಜವಾಬ್ದಾರರು ಎಂದುಕೊಳ್ಳುವುದು.
- ತಾವು ಮಾಡಿದ ಪ್ರತಿಯೊಂದು ಕೆಲಸಕ್ಕೂ ಸರಿಯಾಗಿದೆಯೋ ಇಲ್ಲವೋ ಎಂದು ಇತರರ ಅಭಿಪ್ರಾಯ ಕೇಳುವುದು. ತಾವು ಮಾಡಬೇಕೆಂದುಕೊಂಡಿರುವ ಕೆಲಸಕ್ಕೆ ಇನ್ನೊಬ್ಬರ ಅಪ್ಪಣೆ ಪಡೆಯುವುದು.
- ಸುಲಭವಾಗಿ ಗೆಳೆತನ ಬೆಳೆಸಲಾರರು ಅಥವಾ ಉತ್ತಮ ಗೆಳೆಯರಿಲ್ಲದಿರುವುದು.
- ಯಾವಾಗಲು ತಾವು ಬೇರೆಯವರಿಗಿಂತ ಭಿನ್ನ ಎಂದು ತೋರಿಸಿಕೊಳ್ಳಲು ಇಚ್ಛಿಸುವುದು.

**ಶೈಕ್ಷಣಿಕ ಪರಿಣಾಮಗಳು:**

- ಭಾಷೆಯನ್ನು ಗ್ರಹಿಸುವುದರಲ್ಲಿ ಮತ್ತು ಭಾಷೆಯ ಮೂಲಕ ವಿಚಾರಗಳನ್ನು ವ್ಯಕ್ತಪಡಿಸುವುದರಲ್ಲಿನ ತೊಂದರೆ.
- ಓದುಗಾರಿಕೆಯಲ್ಲಿ ಹಾಗೂ ಬರವಣಿಗೆಯಲ್ಲಿ ಕುಂದು ಕೊರತೆ.
- ಅಂಕಗಣಿತದಲ್ಲಿನ ಕುಂದುಕೊರತೆ.
- ಪತ್ತೆಹಚ್ಚುವಿಕೆ, ಗುರುತಿಸುವುದಲ್ಲಿ ತೊಂದರೆ.
- ಸಾಮಾಜಿಕ ವೈಯಕ್ತಿಕ ನಡವಳಿಯಲ್ಲಿ ತೊಂದರೆ

- ❖ ಗಮನ ನೀಡುವಲ್ಲಿ ತೊಂದರೆ.
- ❖ ಹೊಸ ಸನ್ನಿವೇಶದಲ್ಲಿ ಹೊಂದಾಣಿಕೆಯಾಗದಿರುವುದು.
- ❖ ಜವಾಬ್ದಾರಿ ವಹಿಸುವಿಕೆಯಲ್ಲಿ ತೊಂದರೆ
- ❖ ಕೊಟ್ಟ ಕೆಲಸವನ್ನು ಪೂರ್ಣ ಗೊಳಿಸದಿರುವುದು.
- ❖ ಪದಗಳ ಅರ್ಥವನ್ನು ಗ್ರಹಿಸದಿರುವುದು.
- ❖ ತರಗತಿಯಲ್ಲಿ ನಡೆಯುವ ಚರ್ಚೆಗಳನ್ನು ಅರ್ಥ ಮಾಡಿಕೊಳ್ಳದಿರುವುದು.
- ❖ ಮಾಹಿತಿಗಳನ್ನು ಬೇಗ ಮರೆಯುವುದು.

### ಶಿಕ್ಷಕರ ಸಹಾಯ ಮತ್ತು ಮಾರ್ಗದರ್ಶನ

- ➢ ಕಲಿಕೆಗೆ ಆಸಕ್ತಿ ಮೂಡಿಸಲು ಚಟುವಟಿಕೆಯನ್ನು ಹೆಚ್ಚು ಹೆಚ್ಚು ಮಾಡಿಸುವುದು.
- ➢ ಕಲಿಕಾ ವಿಷಯಗಳನ್ನು ಚಿಕ್ಕಚಿಕ್ಕ ಘಟಕಗಳಾಗಿ ವಿಂಗಡಿಸಿಕೊಂಡು ಬೋಧಿಸುವುದು.
- ➢ ಬಹು ಇಂದ್ರಿಯ ಕಲಿಕೆಗೆ ಅವಕಾಶ ಕಲ್ಪಿಸುವುದು.
- ➢ ಉತ್ತಮ ಪ್ರಗತಿಗೆ ಪ್ರೇರಣೆ ಅಥವಾ ಪ್ರೋತ್ಸಾಹ ನೀಡುವುದು.
- ➢ ತಪ್ಪು ಮಾಡಿದಾಗ ತಕ್ಷಣ ತಿದ್ದುವುದು.
- ➢ ನಕಾರಾತ್ಮಕ ವಿಷಯಗಳನ್ನು ಸಕಾರಾತ್ಮಕವಾಗಿ ಮೌಲ್ಯಗಳನ್ನು ಬೋಧಿಸುವುದು.
- ➢ ಸಮವಯಸ್ಕರ ಬೋಧನಾ ಪದ್ಧತಿ, ಬೋಧನಾ ವಿಧಾನವನ್ನು ಅನುಸರಿಸುವುದು.
- ➢ ಅನುಮಗನ ಮತ್ತು ನಿಗಮನ ಪದ್ಧತಿಯನ್ನು ಅನುಸರಿಸುವುದು.

ಹೆಚ್ಚಿನ ಮಾಹಿತಿಗಾಗಿ ಗಮನಿಸಿ.

1. https://karnatakadisabled.blogspot.com/p/blog-page_5.html?m=1
2. PWD 2016 ACT - https://depwd.gov.in/acts/

### ಸ್ನೇಹಮಯಿ ಕಲಿಕೆಯ ಪರಿಸರ

ಸಮನ್ವಯ ಎಂದರೆ ಕೇವಲ ನ್ಯೂನತೆಯುಳ್ಳ ಮಕ್ಕಳಷ್ಟೇ ಅಲ್ಲದೆ ವಿವಿಧ ಹಿನ್ನಲೆಯುಳ್ಳ ಹಾಗೂ ವಿವಿಧ ಸಾಮರ್ಥ್ಯವುಳ್ಳ ಮಕ್ಕಳೂ ಒಳಗೊಂಡಿರುತ್ತಾರೆ. ಶಾಲೆಯಿಂದ ಹೊರಗುಳಿಯುವಿಕೆ; ಖಾಯಿಲೆ; ಬಡತನ; ವಲಸೆ ಮುಂತಾದ ಅನೇಕ ಕಾರಣಗಳು ಹಾಗೂ ವಿಕಲತೆ ಕಲಿಯುವ ಸಾಮರ್ಥ್ಯದ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರುತ್ತವೆ. ಇಂತಹ ಅನೇಕ ಸಮಸ್ಯೆಗಳನ್ನು ಶಿಕ್ಷಕ ಸರಿಪಡಿಸಲು ಸಾಧ್ಯವಿಲ್ಲ. ಆದರೆ ಈ ಸಂಗತಿಗಳು ಮಗುವಿನಲ್ಲಿ ಉಂಟು ಮಾಡುವ ಕೀಳರಿಮೆಯನ್ನು ಅಧ್ಯಾಪಕ ಕಡಿಮೆ ಮಾಡಲು/ಹೋಗಲಾಡಿಸಲು ಸಾಧ್ಯವಿದೆ. ಭರವಸೆ, ಮಾನಸಿಕ ಬೆಂಬಲವನ್ನು ನೀಡಿ ಮಗು ಧನಾತ್ಮಕವಾಗಿ ಆಲೋಚಿಸಿ ಕಾರ್ಯಪ್ರವೃತ್ತನನ್ನಾಗಿಸಲು ಸಾಧ್ಯವಿದೆ.

ಇಂತಹ ಮಕ್ಕಳನ್ನು ತರಗತಿ ಕೊಠಡಿಗಳಿಗೆ ಬರುವಂತೆ ಮಾಡುವುದು ಹಾಗೂ ಎಲ್ಲಾ ಮಕ್ಕಳ ಜೊತೆಯಲ್ಲಿ ಕಲಿಯುವ ಅವಕಾಶ ಕಲ್ಪಿಸುವುದು ಕೇವಲ ಅರ್ಧ ಸವಾಲನ್ನು ಪೂರೈಸಿದಂತಾಗುತ್ತದೆ. ಇನ್ನರ್ಧ ಸವಾಲು ಅವರ ಎಲ್ಲಾ ವಿಧದ ಕಲಿಕಾ ಅಗತ್ಯಗಳನ್ನು ತರಗತಿ ಕೊಠಡಿಗಳಲ್ಲಿ ಪೂರೈಸುವುದಾಗಿರುತ್ತದೆ. ತರಗತಿ ಕೋಣೆಯಲ್ಲಿ ದೈಹಿಕವಾಗಿ

ಮತ್ತು ಮಾನಸಿಕವಾಗಿ ಭಿನ್ನ ಸಾಮರ್ಥ್ಯವುಳ್ಳ ಮಕ್ಕಳು (ವಿಕಲ ಚೇತನರು, ಕಲಿಕೆಯಲ್ಲಿ ಹಿಂದುಳಿದಿರುವರು ಮತ್ತು ಸಾಮಾನ್ಯ ಮಕ್ಕಳು) ಇರುತ್ತಾರೆ. ಇವರೆಲ್ಲರ ಕಲಿಕೆಯ ಅಗತ್ಯಗಳನ್ನು ಏಕಕಾಲದಲ್ಲಿ ತರಗತಿಯ ಕೋಣೆಯಲ್ಲಿ ಪೂರೈಸಿ ಎಲ್ಲ ಮಕ್ಕಳು ಕಲಿಯುವಂತೆ ಮಾಡುವುದೇ ಬೋಧನೆಯ ಸಮನ್ವಯ. ಇದನ್ನು ಸಂಪನ್ಮೂಲ ಬೆಂಬಲ ವ್ಯವಸ್ಥೆ ಎಂದೂ ಕರೆಯಲಾಗುತ್ತದೆ.

ತರಗತಿ ಕೊಠಡಿಗಳು ವೈವಿಧ್ಯತೆಯಿಂದ ಕೂಡಿರುತ್ತವೆ. ಮಕ್ಕಳು ವಿವಿಧ ಬಗೆ ಮತ್ತು ರೀತಿಯಲ್ಲಿ ಕಲಿಯುತ್ತಾರೆ. ಇದಕ್ಕೆ ಅವರಲ್ಲಿನ ಅನುವಂಶಿಕ ಅಂಶಗಳು : ಅನುಭವ ಬೆಳೆದ ಪರಿಸರ ಕಾರಣವಿರಬಹುದು. ವೈವಿಧ್ಯಮಯ ಕಲಿಕಾ ಅಗತ್ಯಗಳನ್ನು ಪೂರೈಸಲು ಬಗೆಬಗೆಯ ಬೋಧನಾ ಸಾಮಗ್ರಿ, ವಿಧಾನ ಹಾಗೂ ಚಟುವಟಿಕೆಗಳನ್ನು ಬಳಸುವ ಅಗತ್ಯವಿದೆ. ಹೀಗೆ ಕಲಿಕೆಯ ಭಿನ್ನಪರಿಸರವನ್ನು ಸೃಷ್ಟಿಸುವ ಮೂಲಕ ಎಲ್ಲಾ ಮಕ್ಕಳೂ ಕಲಿಯುವಂತಹ, ಕಲಿಯಬೇಕೆನ್ನುವ ಹಾಗೂ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಂಡಿದ್ದೇವೆ ಎನ್ನುವ ಭಾವನೆಯನ್ನು ಎಲ್ಲಾ ಮಕ್ಕಳಲ್ಲಿ ಉಂಟುಮಾಡಬೇಕಾಗಿದೆ.

ಕಲಿಕೆಯ ಪರಿಸರ ಎನ್ನುವುದು ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ತರಗತಿಯ ಕೋಣೆಯ ಸಜ್ಜುಗೊಳಿಸುವಿಕೆ; ಕಲಿಕೆ-ಬೋಧನೆಯನ್ನು ವೈಯಕ್ತೀಕರಣಗೊಳಿಸುವುದು–ಎಲ್ಲಾ ಮಕ್ಕಳಿಗೆ ಕಲಿಯಲು ಸಮಾನ ಅವಕಾಶ ಮಾಡಿಕೊಡುವುದು ಎಂಬ ಅಂಶಗಳು ಪ್ರಧಾನವಾಗುತ್ತವೆ. ಜೊತೆಗೆ ಹೊರಾಂಗಣ ಸನ್ನಿವೇಶದಲ್ಲಿ ಕಲಿಕೆಯಾಗುತ್ತದೆ. ಉದಾಹರಣೆಗೆ:- ಸಮೀಕ್ಷೆ, ಕ್ಷೇತ್ರ ಅಧ್ಯಯನ ಇತ್ಯಾದಿ. ಹಾಗೆಯೇ ಉತ್ತಮ ಕುಡಿಯುವ ನೀರು, ಶೌಚಾಲಯ ಮತ್ತು ಸರಾಗವಾಗಿ ಚಲಿಸಲು ಅವಕಾಶ, ಭೌತಿಕ ಮತ್ತು ಮಾನಸಿಕ ತಡೆರಹಿತ ವ್ಯವಸ್ಥೆ ಇತ್ಯಾದಿ ಅಂಶಗಳು ಕೂಡಾ ಕಲಿಕೆಯ ಮೇಲೆ ಪ್ರಭಾವ ಬೀರುತ್ತವೆ. ಈ ಹಿನ್ನಲೆಯಲ್ಲಿ ಎಲ್ಲ ಮಕ್ಕಳಿಗೆ ಅನುಕೂಲ ಕಲ್ಪಿಸುವುದು ಅಗತ್ಯ. ಇಂತಹ ಪರಿಸರ ಸ್ನೇಹಮಯ ಕಲಿಕೆ ಪರಿಸರವಾಗುತ್ತದೆ.

## ಸ್ನೇಹಮಯಿ ಕಲಿಕೆಯ ಪರಿಸರ ಎಂದರೇನು?

ತರಗತಿಯಲ್ಲಿ ವಿವಿಧ ಚಟುವಟಿಕೆಗಳಲ್ಲಿ ಪ್ರತಿ ಮಗು ಭಾಗವಹಿಸಲು ಹಾಗೂ ಅವರ ಉತ್ತಮ ಕಲಿಕೆಗೆ ಅವಕಾಶ ಮಾಡಿಕೊಡುವ ಮೂಲಕ ಮಕ್ಕಳಿಗೆ ತರಗತಿ ಕೊಠಡಿಯು ಒಂದು ಒಳ್ಳೆಯ ಸ್ಥಳವೆನಿಸುವಂತೆ ಮಾಡುವುದು. ಮಕ್ಕಳು ವಿವಿಧ ಇಂದ್ರಿಯಗಳ ಮೂಲಕ ಗ್ರಹಿಸಲು ಅವಕಾಶ ಮಾಡಿಕೊಡುವ; ಅನ್ವೇಷಣೆ ಅಥವಾ ವಿಮರ್ಶೆಗೆ ಅವಕಾಶವೀಯುವ; ಕಲಿಕೆಗೆ ಸಹಾಯಕವಾಗುವ ಒಂದು ಸೌಹಾರ್ದ ಯುತ ವಾತಾವರಣ ಸೃಷ್ಠಿಮಾಡುವುದು ಅಗತ್ಯ. ಯಾವ ತರಗತಿ ಕೊಠಡಿಗಳಲ್ಲಿ ಮಕ್ಕಳನ್ನು ಅವರಿರುವಂತೆಯೇ ಗೌರವಿಸಲಾಗುತ್ತದೆಯೋ; ಯಾವುದೇ ಹೆದರಿಕೆಯಿಲ್ಲದೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗುತ್ತದೆಯೋ; ಹಾಗೂ ಕಲಿಕೆಯಲ್ಲಿ ಯಶ್ವಸಿಯಾಗಿದ್ದೇವೆ ಎಂಬ ಭಾವನೆ ಬರುವಂತೆ ಕಲಿಕೆ-ಬೋಧನೆ ಚಟುವಟಿಕೆಗಳು ರೂಪುಗೊಂಡಿವೆಯೋ ಅಂತಹ ತರಗತಿ ಕೊಠಡಿಗಳು ಹೆಚ್ಚು ಸಂತೋಷದಾಯಕ ತರಗತಿಗಳಾಗಿರುತ್ತವೆ. ಸಹಯೋಗ ಅಥವಾ ಸಹಭಾಗಿತ್ವ ಹಾಗೂ ಸೌಹಾರ್ದಯುತ ಗುಂಪುಗಳಲ್ಲಿ ಕಲಿಕೆಯಾಗುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಮಕ್ಕಳು ಇಂತಹ ಪರಿಸರದಲ್ಲಿ ಹೊಸ ವಿಷಯಗಳನ್ನು ವಿನೋದದಿಂದ ಕಲಿಯುತ್ತಾರೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾರೆ.

ಕಲಿಕಾ ಸ್ನೇಹಮಯಿ ಪರಿಸರವು: ಮಗು-ಸ್ನೇಹಮಯಿ ಹಾಗೂ ಶಿಕ್ಷಕರ ಸ್ನೇಹಮಯಿಯೂ ಹೌದು. ಕಲಿಯುವ ಸಮುದಾಯವಾಗಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಂಡುಬರುತ್ತಾರೆ. ಇವರಿಬ್ಬರೂ ಜೊತೆಯಾಗಿ ಕಲಿಯುವ ಸನ್ನಿವೇಶಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಇದು ಮಕ್ಕಳನ್ನು ಕಲಿಕೆಯ ಕೇಂದ್ರ ಬಿಂದುವನ್ನಾಗಿ ಮಾಡುತ್ತದೆ; ಕಲಿಕೆಯಲ್ಲಿ ಅವರು ಚುರುಕುತನದಿಂದ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ. ಇದರಿಂದ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಲು ಸಮರ್ಥರಾಗುತ್ತಾರೆ. ಪೋಷಕರು, ಸೋದರ/ರಿಯರು, ಸ್ವಯಂ ಸೇವಕರು ತರಗತಿ ಕೊಠಡಿಯಲ್ಲಿ ವಿಶೇಷ ಅಗತ್ಯವಿರುವ ಮಕ್ಕಳ ಕೆಲವು ಅಗತ್ಯಗಳನ್ನು ಪೂರೈಸುವುದರಿಂದ-ಉದಾಹರಣೆಗೆ ಆಹಾರ ಸೇವನೆ; ಶೌಚದ ವೇಳೆಯಲ್ಲಿ ಸಹಾಯ ಮಾಡುವುದರಿಂದ ಶಾಲಾ ಪರಿಸರಕ್ಕೆ ಸುಲಭವಾಗಿ ಮಗು ಹೊಂದಿಕೆಯಾಗುತ್ತದೆ. ಸಮುದಾಯದಲ್ಲಿ ಉತ್ತಮ ಪರಿಶ್ರಮ ಇರುವ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಬಳಸಿ ಕಲಿಕೆ ಬೋಧನೆಯನ್ನು ವೈಯಕ್ತೀಕರಣಗೊಳಿಸಲು ಅವಕಾಶವಿದೆ.

## ಸಮನ್ವಯ ಕಲಿಕಾ ಸ್ನೇಹಮಯಿ ತರಗತಿ ಕೊಠಡಿಯ ವೈಶಿಷ್ಟ್ಯತೆಗಳು

### ತರಗತಿ ಕೊಠಡಿಯಲ್ಲಿ ಯಾರಿದ್ದಾರೆ ?

ಶಿಕ್ಷಕ ಅಥವಾ ಶಿಕ್ಷಕಿ, ವಿವಿಧ ಹಿನ್ನೆಲೆಗಳಿಂದ ಬಂದ ವಿವಿಧ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಹಾಗೂ ಸಹಾಯಕರು ತರಗತಿ ಕೊಠಡಿಯ ಸನ್ನಿವೇಶ ಮುಂದಿನಂತೆ ಇರುವುದು ಆಪೇಕ್ಷಣೀಯ.

### ಶಿಕ್ಷಕರ ಸಹಾಯ ಮತ್ತು ಮಾರ್ಗದರ್ಶನ

- ಮಕ್ಕಳಿಗೆ ದೃಶ್ಯ ಅನುಭವದ ಜೊತೆಗೆ ಸ್ಪರ್ಶ ದ ಮೂಲಕ ಅನುಭವಗಳನ್ನು ಒದಗಿಸಿ ಕೊಡುವುದು.
- ತಡೆರಹಿತ ವಾತಾವರಣ ಕಲ್ಪಿಸುವುದು.
- ತರಗತಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ಪ್ರಮಾಣ ಸಹಜ ಬೆಳಕನ್ನು ಒದಗಿಸಿ ಕೊಡುವುದು.
- ದೃಶ್ಯಾವಳಿಗಳನ್ನು ಶಿಕ್ಷಕರು ಮಗುವಿನ ಎದುರಿನಲ್ಲಿ ಮಾತಿನ ಮೂಲಕ ವಿವರಣೆ ನೀಡುವುದು.
- ಹೆಚ್ಚಿನ ಕಾಲಾವಕಾಶ ನೀಡಿ ಪ್ರೋತ್ಸಾಹಿಸುವುದು.
- ಮಗುವಿನ ಅಗತ್ಯಕ್ಕನುಗುಣವಾಗಿ ಸೂಕ್ತ ಆಸನದ ವ್ಯವಸ್ಥೆ ಮಾಡುವುದು. ಉದಾ: ತರಗತಿಯ ಮೊದಲನೇ, ಎರಡನೆಯ ಸಾಲಿನಲ್ಲಿ ಕೂರಿಸುವುದು.
- ಬುದ್ಧಿವಂತ ಹಾಗೂ ಸಾಮಾನ್ಯ ಮಗುವಿನ ಜೊತೆಯಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುವುದು.
- ತಿಳಿ ಹಸಿರು ಬಣ್ಣದಿಂದ ಕೂಡಿರುವ ಕಪ್ಪುಹಲಗೆಯ ಮೇಲೆ ಹಳದಿ ಮಿಶ್ರಿತ ಬೂದುಬಣ್ಣದ ಸೀಮೆಸುಣ್ಣ ಬಳಸುವುದು.
- ಬಹು ಇಂದ್ರಿಯ ಬೋಧನೆಗೆ ಅವಕಾಶ ಕಲ್ಪಿಸುವುದು. ಉದಾ: ವಾಸನೆ, ರುಚಿ, ಸ್ಪರ್ಶ, ಆಲಿಸುವುದರಿಂದ ವಿಷಯವನ್ನು ತಿಳಿಯಲು ಅವಕಾಶ ನೀಡುವುದು.

### ಸೂಚಿತ ಪ್ರಕ್ರಿಯಾ ಹಂತಗಳು

1. **ಚಟುವಟಿಕೆ- 01** ಶೈಕ್ಷಣಿಕ ಮಾರ್ಗೋಪಾಯಗಳನ್ನು ಕುರಿತು ಚರ್ಚಿಸಿ ಒಂದು ಉಪಸಂಹಾರಕ್ಕೆ ಬರುವುದು ಗುಂಪು ಚರ್ಚೆ ಮಾಡುವುದು.
2. **ಚಟುವಟಿಕೆ- 02** ಸಮನ್ವಯ ಕಲಿಕಾ ಸ್ನೇಹಮಯಿ ತರಗತಿ ಕೊಠಡಿಯ ಲಕ್ಷಣಗಳ ಪಟ್ಟಿ ತಯಾರಿಸಲು ಶಿಭಿರಾರ್ಥಿಗಳಿಗೆ ತಿಳಿಸುವುದು.
3. **ಚಟುವಟಿಕೆ – 03** ಕಲಿಕಾ ಸ್ನೇಹಮಯಿ ಕಲಿಕಾ ಕೊಠಡಿಯ ಮಾದರಿ ವಿಡಿಯೋ ಕ್ಲಿಪ್ ಹಾಕಿ ತೋರಿಸುವುದು.

## ಮೌಲ್ಯಮಾಪನ ಪ್ರಶ್ನೆಗಳು

1. **ಶ್ರವಣದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು**

    ಎ) ಉಚ್ಚಾರಣೆಯ ಸ್ಪಷ್ಟತೆಗೆ ಹೆಚ್ಚು ಹೊತ್ತು ನೀಡದಿರುವುದು

ಬಿ) ವಸ್ತುನಿಷ್ಠ ಮತ್ತು ಸರಳ ಪ್ರಶ್ನೆಗಳನ್ನು ಕೇಳುವುದು

ಸಿ) ಃ ಒಂದು ಮತ್ತು ಎರಡು ಸರಿ

ಡಿ) ಒಂದು ಮತ್ತು ಎರಡು ತಪ್ಪು

**2. ದೃಷ್ಟಿದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನದ ಅಂಶಗಳು**

ಎ) ಹೆಚ್ಚಿನ ಕಾಲಾವಕಾಶ ನೀಡುವುದು

ಬಿ) ಲಿಖಿತ ಮೌಲ್ಯಮಾಪನಕ್ಕೆ ಬದಲಾಗಿ ಮೌಖಿಕ ಮೌಲ್ಯಮಾಪನ ಮಾಡುವುದು

ಸಿ) ಒಂದು ಮತ್ತು ಎರಡು ಸರಿ

ಡಿ) ಒಂದು ಮತ್ತು ಎರಡು ತಪ್ಪು

**3. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವೈದ್ಯಕೀಯ ಸಹಾಯ ಒದಗಿಸಲು ಮುಖ್ಯವಾಗಿ ಇವರ ನೆರವನ್ನು ಪಡೆಯುವುದು ಅಗತ್ಯ**

ಎ) ಕುಟುಂಬಗಳ ನೆರವು

ಬಿ) ಶಿಕ್ಷಕರ ನೆರವು

ಸಿ) ಸಂಪನ್ಮೂಲ ಶಿಕ್ಷಕರ ನೆರವು

ಡಿ) ಮೇಲಿನ ಎಲ್ಲವುಗಳು

**4. ಬುದ್ಧಿ ದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು**

ಎ) ಚಿಕ್ಕ ಪದಗಳ ಉತ್ತರವನ್ನು ಗಣನೆಗೆ ತೆಗೆದುಕೊಳ್ಳುವುದು

ಬಿ) ಚಟುವಟಿಕೆ ಆಧಾರಿತ ಮೌಲ್ಯಮಾಪನ ಮಾಡುವುದು

ಸಿ) ಒಂದು ಮತ್ತು ಎರಡು ಸರಿ

ಡಿ) ಒಂದು ಮತ್ತು ಎರಡು ತಪ್ಪು

**5. ದಿನನಿತ್ಯ ಜೀವನಕ್ಕೆ ಅಗತ್ಯವಿರುವ ದಿನ ನಿತ್ಯ ಚಟುವಟಿಕ ಕೌಶಲ್ಯಗಳನ್ನು ರೂಢಿಸುವುದು**

ಎ) ಬುದ್ಧಿದೋಷವಿರುವ ಮಕ್ಕಳಿಗೆ

ಬಿ) ಶ್ರವಣದೋಷವಿರುವ ಮಕ್ಕಳಿಗೆ

ಸಿ) ತೆಲನಾಂಗದೂಷವಿರುವ ಮಕ್ಕಳಿಗೆ

ಡಿ) ಮೇಲಿನ ಎಲ್ಲವುಗಳು

**6. CWSN ವಿಸ್ತರಿಸಿ**

ಎ) Child With Special Needs

ಬಿ) Children With Special Needs

ಸಿ) Children With Support Needs

ಡಿ) Child With Support Need

**7. ವಿಶೇಷ ಅಗತ್ಯವುಳ್ಳ ಮಕ್ಕಳೆಂದರೆ,**

ಎ) ದೈಹಿಕ ಮತ್ತು ಮಾನಸಿಕ ನ್ಯೂನತೆಯುಳ್ಳವರು

ಬಿ) ತ್ರಿಲಿಂಗಿಗಳು

ಸಿ) ಅರಣ್ಯವಾಸಿಗಳು

ಡಿ) ಮೇಲಿನ ಎಲ್ಲರೂ

## ಅಧ್ಯಾಯ-03

## ಶಾಲೆಗಳು ಮಾಡಬಹುದಾದ ಕಾರ್ಯಗಳು

ಶಾಲೆಯು ಸಮನ್ವಯ ಶಿಕ್ಷಣ ಎಲ್ಲಾ ಮಕ್ಕಳಿಗೂ ಅಂದರೆ, ಶ್ರವಣ ನ್ಯೂನತೆ, ದೃಷ್ಟಿದೋಷ, ಬುದ್ಧಿದೋಷ, ಕಲಿಕಾ ದೊಷ, ದೈಹಿಕ ದೋಷ ಹೀಗೆ ಅವರವರ ಅಗತ್ಯತೆಗಳನ್ನು ಆಧರಿಸಿ ದಾಖಲಾತಿಗೆ ಅವಕಾಶ ನೀಡಿ ಸಮಾನವಾದ ಶಿಕ್ಷಣ ನೀಡುವ ಕೇಂದ್ರವಾಗಿದೆ. ವಿಶೇಷ ಅಗತ್ಯವುಳ್ಳ ಮಕ್ಕಳೂ ಸಹ ಇತರೆ ಮಕ್ಕಳೊಡನೆ ಸಮಾನವಾಗಿ ಬೆರೆತು ಕಲಿಯಲು ಅವಕಾಶ ಮಾಡಿಕೊಡುವುದು.

ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯತೆಗಳನ್ನು ಸಾಮಾನ್ಯ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕ, ಶಿಕ್ಷಕಿಯರಿಂದಲೇ ಪೂರೈಸುವುದರ ಮೂಲಕ ಸರ್ವಮಕ್ಕಳಿಗೂ ಶಿಕ್ಷಣ ನೀಡುವುದೇ ಶಾಲೆಯ ಕಾರ್ಯವಾಗಿದೆ.

- ಶಾಲೆಯಲ್ಲಿ ಸ್ವತಂತ್ರವಾಗಿ ಕಲಿಯಲು ಸಾಧನೋಪಕರಣಗಳನ್ನು ಒದಗಿಸುವುದು.
- ಶಾಲೆಯಲ್ಲಿ ಕ್ರೀಡೆ, ಚಿತ್ರಕಲೆಯಂತಹ ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳೂ ಪಾಲ್ಗೊಳ್ಳುವಂತೆ ಭೌತಿಕ ಪರಿಸರದಲ್ಲಿ ಹೊಂದಾಣಿಕೆ ಮಾಡುವುದು.
- ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ವೈದ್ಯಕೀಯ ಶಿಬಿರ ಏರ್ಪಡಿಸುವ ಮೂಲಕ ಗುರುತಿಸಿ ಅವರ ಕಲಿಕೆಗೆ ಅನುಗುಣವಾಗಿ ಇಳಿಜಾರು ಮೆಟ್ಟಿಲು ನಿರ್ಮಾಣ, ಸಾಧನ ಸಲಕರಣೆಗಳನ್ನು ಪೂರೈಸುವುದು.
- ಶಾಲೆಯಲ್ಲಿ ಇಂತಹ ಮಕ್ಕಳಿಗೆ ಆರ್ಥಿಕ ನೆರವನ್ನು ಪೋಷಣಾ ಭತ್ಯೆ, ವಿದ್ಯಾರ್ಥಿ ವೇತನ, ಪ್ರತಿಭಾ ವಿದ್ಯಾರ್ಥಿ ವೇತನ ದೊರಕಿಸಿಕೊಡುವುದು.
- ಶಾಲೆ ಸಮುದಾಯದ ಎಲ್ಲಾ ಪ್ರತಿನಿಧಿಗಳ/ಪೋಷಕರ ಸಭೆ ಏರ್ಪಡಿಸಿ ಮಕ್ಕಳ ಕಲಿಕೆ/ಪ್ರಗತಿ ಬಗ್ಗೆ ಶಿಬಿರಗಳನ್ನು ಏರ್ಪಡಿಸುವುದು.
- ಎಲ್ಲಾ ಮಕ್ಕಳಿಗೂ ಏಕ ರೀತಿಯ ತರಗತಿಗಳು ಹಾಗೂ ಬೋಧನಾ ಅವಕಾಶ ನೀಡುವುದು.
- ವಿಶೇಷ ಶಿಕ್ಷಕರಿಂದ ವಿವಿಧ ಕಲಿಕಾ ಕೌಶಲಗಳ ಬಗ್ಗೆ ಸೌಲಭ್ಯ ಒದಗಿಸುವುದು.
- ವೈಯಕ್ತಿಕ ಬೋಧನೆಗೆ ಅವಕಾಶ ಬೇಕಾಗುವ ಸಂದರ್ಭದಲ್ಲಿ ವಿಶೇಷ ತರಗತಿ ವ್ಯವಸ್ಥೆ ಇರಬೇಕು.
- ಶಾಲೆಯು ಮಕ್ಕಳ ಅವಶ್ಯಕತೆ, ಅಗತ್ಯತೆಗಳನ್ನು ಪೂರೈಸಬೇಕಾಗುತ್ತದೆ.

ಮಕ್ಕಳ ಶಾಲಾ ಶಿಕ್ಷಣದಿಂದ ಹೊರಬಂದ ನಂತರ ದಿನನಿತ್ಯದ ಜೀವನ ಕೌಶಲಗಳ ಬಗ್ಗೆ ಪರಾವಲಂಬಿಗಳಾಗದೆ ಸ್ವತಂತ್ರ ಜೀವನ ನಡೆಸುವಂತಹ ಕೌಶಲ ಬೆಳೆಸುವ ಜವಾಬ್ದಾರಿ ಇದೆ. ಸಾಮಾಜಿಕ ಮತ್ತು ಶೈಕ್ಷಣಿಕ ಅನುಭವಗಳೂ ಕೂಡ ಜೀವನ ಕೌಶಲಗಳಾಗಿ ರೂಪುಗೊಳಿಸುವ ಜವಾಬ್ದಾರಿ ಶಾಲೆಗಳಿಗಿರಬೇಕು.

ಶಾಲೆಯಲ್ಲಿ ವಿಶೇಷ ಅಗತ್ಯತೆಯುಳ್ಳ ಮಗು ಅಥವಾ ಸಾಮಾನ್ಯ ಮಗುವಾಗಲೀ ಕಲಿಕೆಯಲ್ಲಿ ತಪ್ಪು ಮಾಡಿದಾಗ ಅಥವಾ ಹಿಂದೆ ಬಿದ್ದಾಗ ಶಿಕ್ಷಕರು ಸಹನೆಯಿಂದಲೇ ಕಾರ್ಯ ನಿರ್ವಹಿಸತಕ್ಕದ್ದು.

ನಿಗದಿತ ಸಮಯದಲ್ಲಿ ವ್ಯವಸ್ಥಿತವಾಗಿ ಬೋಧನಾ ಕಾರ್ಯ, ಕಲಿಕಾ ವಾತಾವರಣ, ಸೌಲಭ್ಯಗಳ ವ್ಯವಸ್ಥೆ, ಶಿಕ್ಷಕರ ಜವಾಬ್ದಾರಿ, ಉತ್ತಮ ವಾತಾವರಣ ಒದಗಿಸುವುದು ಶಾಲೆಯ ಜವಾಬ್ದಾರಿಯಾಗಿರುತ್ತದೆ.

ಪ್ರತಿ ವಿಷಯವಾರು ಹಂತ-ಹಂತವಾಗಿ ಮೌಲ್ಯಮಾಪನದ ವ್ಯವಸ್ಥೆ ಮಾಡುವುದು ಮತ್ತು ಮೌಲ್ಯಮಾಪನದಿಂದ ದೊರೆಯುವ ಅನುಕೂಲ, ಅನಾನುಕೂಲಗಳ ಪಟ್ಟಿ ಮಾಡಿ ಪುನರ್‌ಬಲನ ಕಲಿಕೆಗೆ ಅವಕಾಶ ಮಾಡಿಕೊಡುವುದು.

## ಔದ್ಯೋಗಿಕ ಶಿಕ್ಷಣ ಅಥವಾ ವೃತ್ತಿ ಕೌಶಲಗಳು

ವಿಶೇಷ ಅಗತವುಳ್ಳ ಮಕ್ಕಳಿಗೆ ವೃತ್ತಿಕೌಶಲಗಳ ಅಭಿವೃದ್ಧಿ ಮುಖ್ಯವಾದದ್ದು. ಶಾಲಾ ಶಿಕ್ಷಣದ ನಂತರ ಆರ್ಥಿಕವಾಗಿ ಸಬಲರಾಗಬೇಕಾದರೆ, ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕಾದರೆ ಸರ್ಕಾರಿ/ಅರೆ ಸರ್ಕಾರಿ ಕಛೇರಿಗಳಲ್ಲಿ ಉದ್ಯೋಗ ದೊರೆಯದಿದ್ದಾಗ, ನಿರುದ್ಯೋಗಿಗಳಾಗದೆ ಸ್ವಉದ್ಯೋಗ ಮಾಡಿಕೊಂಡು ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಬಹುದಾಗಿದೆ. ಆದ್ದರಿಂದ ವಿವಿಧ ವೃತ್ತಿಗಳ ಕುರಿತು ಅನುಭವವನ್ನು ಶಾಲಾ ಶಿಕ್ಷಣ ಮಾಡಿಕೊಡಬೇಕು.

ವೃತ್ತಿ ಮಾರ್ಗದರ್ಶನಲ್ಲಿ ನಿರ್ವಹಿಸಬೇಕಾದ ಕಾರ್ಯಗಳೆಂದರೆ, ಕಸೂತಿ, ಮೇಣದಬತ್ತಿ ತಯಾರಿಕೆ, ಗೃಹೋಪಯೋಗಿ ವಸ್ತುಗಳ ತಯಾರಿಕೆ, ಕಾಗದ, ಬಣ್ಣಬಣ್ಣದ ಪೇಪರ್, ತೆಳುವಾದ ತಂತಿಯ ಸಹಾಯದಿಂದ ಹೂವುಗಳ ತಯಾರಿಕೆ, ಜೇಡಿಮಣ್ಣಿನಿಂದ ವಸ್ತುಗಳ ತಯಾರಿಕೆ, ಥರ್ಮಕೋಲ್ ವರ್ಕ್ಸ್, ಊದುಬತ್ತಿ ತಯಾರಿಕೆ, ಸ್ವಾçಗಳ ತಯಾರಿಕೆ, ಹಾಲಿನ ಪ್ಯಾಕೆಟ್‌ಗಳಿಂದ, ತೆಂಗಿನ ಚಿಪ್ಪಿನಿಂದ ವಸ್ತುಗಳನ್ನು ತಯಾರಿಸುವುದು. ಹೀಗೆ ವಿವಿಧ ರೀತಿಯ ಆಕರ್ಷಕ ವಸ್ತುಗಳನ್ನು ತಯಾರಿಸುವುದನ್ನು ಶಾಲಾ ಮಟ್ಟದಲ್ಲಿ ಬಹುಮಾನಗಳನ್ನು ಕೊಡುವುದರ ಮೂಲಕ ಮಕ್ಕಳನ್ನು ಶಾಲಾಜೀವನ ಹಂತದಲ್ಲೇ ಪ್ರೇರೇಪಿಸಿ ಔದ್ಯೋಗಿಕ ಶಿಕ್ಷಣಕ್ಕೆ ಉತ್ತೇಜನ ನೀಡಬಹುದು.

- **ಊದುಬತ್ತಿ ತಯಾರಿಕೆ**

  ಕಲ್ಲಿದ್ದಲು ಮಸಿಯನ್ನು ಜಿಗುಟಿನೊಂದಿಗೆ ಸಮಪ್ರಮಾಣದಲ್ಲಿ ಬೆರೆಸಿ, ಚಪಾತಿ ಹಿಟ್ಟಿನಂತೆ ಬೆರೆಸಿ ಬಿದಿರಿನ ಕಡ್ಡಿಯೊಂದಿಗೆ ಸೇರಿಸಿ ಹಲಗೆಯ ಮೇಲೆ ಹೊಸೆಯುವುದು.

- **ಮೇಣದ ಬತ್ತಿ ತಯಾರಿಕೆ**

  ಮೇಣವನ್ನು ಕಾಯಿಸಿ ವಿವಿಧ ಬಣ್ಣಗಳನ್ನು ಬೆರೆಸಿ, ವಿವಿಧ ಆಕಾರಗಳ ಅಚ್ಚುಗಳಲ್ಲಿ ಸುರಿದು, ಮಧ್ಯದಲ್ಲಿ ದಾರ ಇಟ್ಟು, ತಣ್ಣಗಾದ ನಂತರ ಅಚ್ಚನ್ನು ಬಿಡಿಸುವದು. ಮೇಣದಿಂದ ವಿವಿಧ ರೀತಿಯ ಪಾಠೋಪಕರಣಗಳನ್ನು ತಯಾರಿಸಬಹುದು.

  **ಬೇಕಾಗಿರುವ ಸಾಮಗ್ರಿಗಳು :** ಮೇಣ, ದಾರ, ಬಣ್ಣಗಳು, ಸ್ಟವ್, ಸೀಮೆಎಣ್ಣೆ, ಪಾತ್ರೆ.

- **ಕಸೂತಿ**

  ಬ್ಯಾಗ್ ಹೆಣೆಯುವುದು, ಬಾಗಿಲು ತೋರಣಗಳು, ಬುಟ್ಟಿ ತಯಾರಿಕೆ ಮುಂತಾದವುಗಳನ್ನು ತಯಾರಿಸಿ, ಮಾರಾಟ ಮಾಡಿದರೆ, ಆರ್ಥಿಕ ಸ್ಥಿತಿ, ಸುಧಾರಿಸಿಕೊಳ್ಳಲು ಅನುಕೂಲವಾಗುತ್ತದೆ.

- **ಪಾಟ್ ಪೇಂಟಿಂಗ್**

  ವಿಧ ವಿಧದ ಆಕಾರಗಳ ಪಾಟ್‌ಗಳಿಗೆ ಪೇಂಟಿಂಗ್ (ಹಸಿರು ಸಸ್ಯಗಳು) ಮಾಡುವುದು.

- **ಗೃಹೋಪಯೋಗಿ ವಸ್ತುಗಳ ತಯಾರಿಕೆ**

ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ಕೌಶಲ ಎಲ್ಲರಿಗೂ ಬೇಕು. ಇದರಿಂದ ಎಷ್ಟೋ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು.

**ಉದಾ :** ಉಪ್ಪಿನಕಾಯಿ ತಯಾರಿಕೆ ವಿಧಾನ- ಬೇಕಾದ ಕಾಯಿಗಳು, ಹಣ್ಣುಗಳು, ಎಣ್ಣೆ, ಕಾರದಪುಡಿ, ಉಪ್ಪು, ಸಾಸಿವೆ, ಬೆಳ್ಳುಳ್ಳಿ, ಕೊಬ್ಬರಿ, ಶುಂಠಿ ಇತ್ಯಾದಿ ವಸ್ತುಗಳು.

### ❖ ಸಾ.ಉ.ಉ.ಕಾ.ದಲ್ಲಿ ನಿರುಪಯುಕ್ತ ವಸ್ತುಗಳಿಂದ ಸಾಮಗ್ರಿಗಳ ತಯಾರಿಕೆ

ಜನ ಬಳಸಿ (ಬಳಕೆಮಾಡಿ) ಬಿಸಾಡಿದ ಅಂದರೆ, ಐಸ್‌ಕ್ರೀಮ್ ಕಪ್, ಕಡ್ಡಿಗಳು, ಗೋಲಿಗಳು, ಬಳೆಚೂರುಗಳು, ಟೂತ್‌ಪೇಸ್ಟ್ ಪ್ಯಾಕೇಟ್, ಬ್ರಷ್, ನವಿಲುಗರಿ, ಹುಲ್ಲುಕಡ್ಡಿಗಳು, ತೆಂಗಿನನಾರು, ಬಿದಿರು ಕಡ್ಡಿಗಳು, ನಾಣ್ಯಗಳಿಂದ ಹೀಗೆ ಇವುಗಳಿಂದ ಹಾರಗಳು, ತಟ್ಟೆಗಳು, ಪ್ರಾಣಿಗಳ ಮುಖವಾಡಗಳು, ಹೂವುಗಳನ್ನು, ಹೂವಿನ ಕುಂಡಗಳ ತಯಾರಿಕೆ, ಇನ್ನೂ ಮುಂತಾದವುಗಳನ್ನು ತಯಾರಿಸಲು ಪ್ರೋತ್ಸಾಹಿಸುವುದು.

**ಅಡೆತಡೆ ರಹಿತ ವಾತಾವರಣದ ಮಾರ್ಗಸೂಚಿ :**

- ಮುಖ್ಯ ದ್ವಾರದಿಂದ ಶಾಲೆ ಆವರಣದವರೆಗೆ, ಆಟದ ಮೈದಾನ ವಿಶಾಲ ಹಾಗೂ ಸಮತಟ್ಟಾಗಿರಬೇಕು.
- ಶಾಲಾ ಕಟ್ಟಡದ ಎಲ್ಲಾ ದ್ವಾರಗಳು ಹಾಗೂ ಬಾಗಿಲುಗಳು ಕನಿಷ್ಟ ೪-೫ ಚದರ ಅಡಿ ಅಗಲವಾಗಿರಬೇಕು.
- ಶೌಚಾಲಯವು ಶಾಲೆಯ ಒಳಗಿದ್ದು, ವಿಶೇಷ ಅಗತ್ಯವುಳ್ಳ ಮಕ್ಕಳು ಬಳಸುವಂತಾಗಿರಬೇಕು. ಶೌಚಾಲಯದಲ್ಲಿ ಕಮೋಡ್ ಮತ್ತು ಹಿಡಿಕೆಗಳಿರಬೇಕು.
- ಕುಡಿಯುವ ನೀರು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸುಲಭವಾಗಿ ದೊರಕುವಂತಿರಬೇಕು.
- ವಿಶೇಷ ಅಗತ್ಯವುಳ್ಳ ಮಕ್ಕಳು ಓಡಾಡುವಂತಹ ಸ್ಥಳಗಳಲ್ಲಿ ಸಮತಟ್ಟವಾದ ದಾರಿಯಿರಬೇಕು.
- ವಿಶೇಷ ಅಗತ್ಯವುಳ್ಳ ಮಕ್ಕಳು ನಡೆಯುವಂತಹ ಜಾಗದಲ್ಲಿ ವಿಶಾಲವಾಗಿ ಕಾಣುವಂತಹ ಕಿಟಕಿಗಳು, ಬೆಳಕು, ಮರಗಳ ಕೊಂಬೆ, ಹೂ ಕುಂಡಗಳು, ಮಾಹಿತಿ ಫಲಕಗಳು ಇರಬೇಕು.
- ಅಪಾಯವಿರುವಂತಹ ಸ್ಥಳಗಳಲ್ಲಿ ಹಿಡಿಕೆಗಳಿರಬೇಕು. ಎತ್ತರದ ಮೆಟ್ಟಿಲು ಹಾಗೂ ವರಾಂಡಗಳಲ್ಲಿ ಹಿಡಿಕೆಗಳನ್ನು ಹಾಕಿಸಿರಬೇಕು.
- ಕೈಹಿಡಿಕೆಗಳು ಮೊನಚಾಗಿರಬಾರದು.
- ಮೆಟ್ಟಿಲುಗಳು ಏಕರೂಪದ ಎತ್ತರದಲ್ಲಿರಬೇಕು.
- ಹಳದಿ ಬಣ್ಣವನ್ನು ಇಳಿಜಾರು ಇರುವ ಕಡೆ ಬಳಸಬೇಕು.
- ಮೆಟ್ಟಿಲುಗಳ ಪ್ರಾರಂಭ ಹಾಗೂ ಕೊನೆಯ ಮೆಟ್ಟಿಲು ಹಳದಿ ಬಣ್ಣದ್ದಾಗಿದ್ದು, ಸುಲಭವಾಗಿ ಗುರುತಿಸುವಂತಾಗಿರಬೇಕು.
- ಎಲ್ಲಾ ಸೂಚನೆಗಳು ಬ್ರೈಲ್ ಲಿಪಿಯಲ್ಲಿ ಲಿಖಿತ ಹಾಗೂ ಚಿತ್ರಗಳ ಸೂಚನೆಗಳು ಕನಿಷ್ಟ ೦೩ ಅಡಿಯಲ್ಲಿದ್ದು, ಮಕ್ಕಳು ಓದುವಂತಾಗಿರಬೇಕು.
- ನೆಲವು ಜಾರುವಂತಿರಬಾರದು, ಕಾಲಿಗೆ ಅಪಾಯವಾಗುವಂತಹದನ್ನು ನಿಯಂತ್ರಿಸಬೇಕು.
- ನೈಸರ್ಗಿಕ ಬೆಳಕಿರಬೇಕು, ಕಿಟಕಿಗಳು ಹೆಚ್ಚಾಗಿದ್ದು, ಹೆಚ್ಚು ಗಾಳಿ, ಬೆಳಕು ಬರುವಂತಿರಬೇಕು.

- ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಅನುಕೂಲಕರವಾದ ಪರಿಸರವಿರಬೇಕು.
  (ಒಡೆದು ಹೋಗಿರುವ ಕಿಟಕಿ ಗಾಜು, ಕಿತ್ತು ಹೋದ ಮೆಟ್ಟಿಲುಗಳು, ಮುರಿದು ಹೋದ ಪೀಠೋಪಕರಣಗಳು, ಅಸುರಕ್ಷಿತ ಚಾವಣಿ ಇತ್ಯಾದಿ ಇರದಂತೆ ನೋಡಿಕೊಳ್ಳುವುದು.)
- ಕೈ ಹಿಡಿಕೆಗಳು: 1:12 ಅಳತೆಯಲ್ಲಿದ್ದು, ಕಡ್ಡಾಯವಾಗಿ ಎಲ್ಲಾ ರ್ಯಾಂಪ್ಸ್ ಳಿಗೆ ಕೈಹಿಡಿಕೆಯಿರಬೇಕು.
- ದೃಷ್ಟಿದೋಷವಿರುವ ಮಕ್ಕಳು ಮೆಟ್ಟಿಲು ಹತ್ತುವಾಗ, ಎಚ್ಚರಿಕೆಯನ್ನು ನೀಡಿರುವ ಬಗ್ಗೆ ಬರೆದು ಹಾಕಿರಬೇಕು. ಏಕೆಂದರೆ ಇದರಿಂದ ಮಕ್ಕಳು ಬೀಳುವುದನ್ನು ತಪ್ಪಿಸಬಹುದು.
- ಸುಲಭವಾಗಿ ಸಿಗುವಂತಹ, ಕೈಗೆ ಎಟಕುವಂತಹ ಪಾಠೋಪಕರಣಗಳು ತರಗತಿ ಕೋಣೆಯಲ್ಲಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಎಲ್ಲಾ ವಿಶೇಷ ಅಗತ್ಯವುಳ್ಳ ಮಕ್ಕಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು.
- ಶಿಕ್ಷಕರು ಪ್ರತಿಯೊಂದು ಮಗುವಿನ ಬಗ್ಗೆ ಕಾಳಜಿ ವಹಿಸಬೇಕು. ಆ ಮಗುವಿನ ಅವಶ್ಯಕತೆಯನ್ನು ಅರಿತು ಮಗು ಕುಳಿತುಕೊಳ್ಳುವ ರೀತಿ, ಜಾಗ, ಪ್ರತಿಯೊಂದನ್ನು ವೈಯಕ್ತಿಕವಾಗಿ ನೋಡಿಕೊಳ್ಳಬೇಕು.
- ಸಾಧನ ಸಲಕರಣೆಗಳನ್ನು ಬಳಸುವಂತಹ ಮಕ್ಕಳಿಗಾಗಿ ವಿಶಾಲವಾದ ಜಾಗವಿದೆಯೇ? ಎಂದು ಖಾತ್ರಿಪಡಿಸಿಕೊಳ್ಳುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಮಾನಸಿಕವಾಗಿ ಬಳಲುವಂತಹ ಮಕ್ಕಳನ್ನು ಜಾಗರೂಕತೆಯಿಂದ, ಸಂಪನ್ಮೂಲ ಶಿಕ್ಷಕರ ಅಥವಾ ಪೋಷಕರ ಸಹಾಯವನ್ನು ಪಡೆದು ಅವರನ್ನು ಯಾವ ರೀತಿ ನೋಡಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಬೇಕು.
- ನಡೆಯಲಾರದ ಮಕ್ಕಳಿಗೆ ಪಾಠಪ್ರವಚನಗಳನ್ನು ನೆಲಮಹಡಿಯಲ್ಲಿ ವ್ಯವಸ್ಥೆ ಮಾಡಬೇಕು.
- ಬರೆವಣಿಗೆಯಲ್ಲಿ ತೊಂದರೆಯಿರುವಂತಹ ಮಕ್ಕಳಿಗೆ ಬೇರೆಯವರಿಂದ ಬರೆಯುವ ವ್ಯವಸ್ಥೆ ಮಾಡಬೇಕು.
- ಮಾತಿನ ಸಂಪರ್ಕ ತೊಂದರೆಯಿರುವ ಮಕ್ಕಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹೆಚ್ಚಿನ ಸಮಯವನ್ನು ನೀಡಬೇಕು.
- ಭಾಷೆ ಹಾಗೂ ಇತರೆ ವಿಷಯಗಳ ಕಠಿಣತೆಯನ್ನು ಮಗುವಿನ ಸಾಮರ್ಥ್ಯವನ್ನು ನೋಡಿ ತಯಾರಿಸಬೇಕು.
- ಕಲಿಕಾ ಸಾಮಗ್ರಿಗಳು ಹಾಗೂ ಉಪಕರಣಗಳು ಮಗು ಮುಟ್ಟಿ ನೋಡಿ ಅಭಿವ್ಯಕ್ತ ಪಡಿಸುವಂತಿರಬೇಕು.
- ಮಗುವಿನ ಅರ್ಥೈಸುವಿಕೆ ಹಾಗೂ ಸಾಮರ್ಥ್ಯವನ್ನು ಗಮನಿಸಿ ವಿಷಯ ಹಾಗೂ ಮೌಲ್ಯಮಾಪನ ನಡೆಸಬೇಕು.
  ಉದಾ: ಬೋಧಿಸಿರುವ ಘಟಕಗಳನ್ನು ಕಡಿಮೆ ಮಾಡಬಹುದು.
- ಅವಶ್ಯಕತೆಯಿದ್ದಲ್ಲಿ ಪ್ರಶ್ನೆಗಳು ಮುಖ್ಯವಾಗಿ ಬಹುಆಯ್ಕೆ ಹಾಗೂ ಬಿಟ್ಟಜಾಗವನ್ನು ಭರ್ತಿಮಾಡುವ ರೀತಿಯಲ್ಲಿ ಪ್ರಶ್ನೆಗಳಿರಬಹುದು.
- ಶ್ರವಣ ದೋಷವುಳ್ಳ ಮಗುವಿಗೆ ಶಿಕ್ಷಕರ ಮುಖವನ್ನು ನೋಡಿ, ಗಮನಿಸಿ ಶಿಕ್ಷಕರು ಹೇಳುವುದನ್ನು ಗಮನಿಸಲು ಸರಿಯಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಬೇಕು.
- ಉತ್ತರ ನೀಡದೆ ಹೆಚ್ಚಿನ ಸಮಯವನ್ನು ನೀಡಬೇಕಾಗಿದೆ.

- ದೃಷ್ಟಿದೋಷವಿರುವ ಮಕ್ಕಳಿಗೆ ಶಿಕ್ಷಕರ ಮುಖ ಹಾಗೂ ಕಪ್ಪುಹಲಗೆ ಸರಿಯಾಗಿ ಕಾಣಿಸುವಂತೆ ಕುಳಿತುಕೊಳ್ಳುವ ವ್ಯವಸ್ಥೆಯಾಗಬೇಕು.
- ಇಂತಹ ಮಕ್ಕಳಿಗೆ ಬೋಧನಾ ಪ್ರಕ್ರಿಯೆಯು ಪ್ರಾಯೋಗಿಕವಾಗಿರಬೇಕು.
- ಶಿಕ್ಷಕರು ಬೋಧಿಸುವಾಗ ಹೆಚ್ಚು ಹೆಚ್ಚು ಬಾಯಿಮಾತಿನ ಮೂಲಕ ಸೂಚಿಸಬೇಕು.
- ಮೌಲ್ಯಮಾಪನ ಮಾಡುವಾಗ ಹಾಗೂ ಪಾಠೋಪಕರಣಗಳನ್ನು ಬಳಸುವಾಗ ಸೂಚನೆ, ಹಾವಭಾವ ಅಥವಾ ಅಭಿನಯದ ಮೂಲಕ ನೀಡಬೇಕು.
- ಸಂಪನ್ಮೂಲ ವ್ಯಕ್ತಿಯ ಸಹಾಯ ಪಡೆದು ಭಾರತೀಯ ಸಂಜ್ಞಾ ಭಾಷೆಯನ್ನು ಬಳಸುವುದು.
- ಪಠ್ಯೇತರ ಚಟುವಟಿಕೆಯಡಿಯಲ್ಲಿ ಸರಿಸಮಾನ ಮಕ್ಕಳ ಸಹಯೋಗದೊಂದಿಗೆ ಸಂಜ್ಞಾ ಭಾಷೆಯನ್ನು ಬಳಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಸಕ್ರಿಯವಾಗಿ ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಸರಿಸಮಾನ ಸಹಾಯವನ್ನು ಪಡೆಯುವುದು.
- ಸರಿಸಮಾನರ ಸಹಾಯದಿಂದ ಸಂಭಾಷಣೆ ಹಾಗೂ ಪ್ರೇರೇಪಿಸಬಹುದಾದ ಕೌಶಲಗಳನ್ನು ಬೆಳೆಸುವುದು.
- ವಿಜ್ಞಾನ ಪ್ರಯೋಗದಲ್ಲಿ ಸಕಲ ಸಲಕರಣೆಗಳಿಗೆ ಚಾರ್ಟ್ಗಳು, ಚಿತ್ರಗಳ ಮೇಲೆ ಬ್ರೈಲ್ ಲಿಪಿಯಲ್ಲಿ ಬರೆದು ಅಂಟಿಸಿರಬೇಕು.
- ಎಲ್ಲಾ ಪಾಠೋಪಕರಣಗಳು ದೃಷ್ಟಿನೋಟ, ಸ್ಪರ್ಶನೀಯ ಆಗಿರಬೇಕು.
- ಸ್ಪರ್ಶನೀಯ ಹಾಗೂ ಎದ್ದು ಕಾಣುವಂತೆ (ಕೆತ್ತನೆ ಮಾಡಿದಂತಹ) ಇರುವ ಭೂಪಟಗಳು, ಗೋಳ, ಮಾದರಿಗಳು, ಚಿತ್ರಗಳು ಬಳಸಬೇಕು.
- ದೂರದೃಷ್ಟಿದೋಷವುಳ್ಳ ಮಕ್ಕಳಿಗೆ ದಿನನಿತ್ಯ ಬಳಸುವ ಕೌಶಲಗಳನ್ನು ಹಾಗೂ ಪ್ರೇರೇಪಿಸಬಹುದಾದ ಕೌಶಲಗಳನ್ನು ಹೇಳಿಕೊಡಬೇಕು.
- ಸಂಪನ್ಮೂಲ ಶಿಕ್ಷಕರ ಸಹಾಯದಿಂದ ದೃಷ್ಟಿದೋಷವುಳ್ಳ ಮಕ್ಕಳಿಗೆ ಸರಿಯಾದ ತರಬೇತಿಯನ್ನು ನೀಡುವುದು.
- ಸಂಪನ್ಮೂಲ ಶಿಕ್ಷಕರು ಸಂಭಾಷಣೆ ಮೂಲಕ ದೃಷ್ಟಿದೋಷವುಳ್ಳ ಮಕ್ಕಳು ಕಲಿಯುವಂತಿರಬೇಕು.
- ಮಾಹಿತಿಯನ್ನು ಸರಿಯಾದ ನಮೂನೆ, ಬ್ರೈಲ್ ಲಿಪಿ, ಸಂಜ್ಞಾಭಾಷೆ, ವಾಕ್ ಶ್ರವಣಗಳ ಮೂಲಕ ನೀಡಬೇಕು.
- ಸಂಪನ್ಮೂಲ ವ್ಯಕ್ತಿಗಳ, ಪೋಷಕರ, ಸರಿಸಮಾನರ ಸಹಕಾರದೊಂದಿಗೆ ತರಬೇತಿಯನ್ನು ಮತ್ತು ನಿತ್ಯ ಜೀವನದ ಕೌಶಲಗಳನ್ನು ಬಳಸುವ ಬಗ್ಗೆ ತರಬೇತಿ ನೀಡಬೇಕು.
- ಮೌಲ್ಯಮಾಪನವು ಪ್ರಬಂಧ ಅಥವಾ ಲಘುಲೇಖನ ಪ್ರಶ್ನೆಗಳ ಬದಲಾಗಿ ವಸ್ತುನಿಷ್ಠ ಪ್ರಶ್ನೆಗಳಾಗಿರಬೇಕು. (ಭಾಷಾ ಸಾಮರ್ಥ್ಯ ಕಡಿಮೆ ಇರುವ ವಿದ್ಯಾರ್ಥಿಗಳಿಗಾಗಿ)
- ಪುಸ್ತಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು.
- ಸಾಧನ ಸಲಕರಣೆಗಳಲ್ಲಿ ಕ್ಯಾಲಿಪರ್ಸ್, ವ್ಹೀಲ್ಚೇರ್, ಸಂವಹನ ಬೋರ್ಡ ಇತ್ಯಾದಿ ಸಲಕರಣೆಗಳನ್ನು ಒದಗಿಸಬೇಕು.
- ಶ್ರವಣ ಸಾಧನಗಳನ್ನು ಸರಿಪಡಿಸಿಕೊಳ್ಳುವ ಕಲೆಯನ್ನು ತಿಳಿದುಕೊಂಡಿರಬೇಕು.
- ಭಾಷಾ ಸಾಮರ್ಥ್ಯವನ್ನು ವೃದ್ಧಿಸಲು ಭಾಷೆಯನ್ನು ಕಲಿಯುವ ತಂತ್ರಾಂಶ ವೃದ್ಧಿಸಬೇಕು.
- ಬೋಧನಾ ಸಾಮಗ್ರಿಗಳು ಸುಲಭವಾಗಿ ದೊರಕುವಂತಿರಬೇಕು. (ಶ್ರವಣ ಮಾಧ್ಯಮ, ಬ್ರೈಲ್)

- ಸಂವಹನ ಹಾಗೂ ಭಾಷಾ ಸಾಮರ್ಥ್ಯವನ್ನು ಭಾಷ್ಯಾಕಾರ, ಮಾಹಿತಿ ಹಾಗೂ ತಂತ್ರಜ್ಞಾನ ಸಹಾಯದಿಂದ ಪಡೆಯಬೇಕು

## ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು ನಿರ್ವಹಿಸಬೇಕಾದ ಕಾರ್ಯಗಳು

1. ತಾಲ್ಲೂಕು ಹಂತದಲ್ಲಿ ಸಮನ್ವಯ ಶಿಕ್ಷಣದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುವುದು.
2. ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಕ್ಲಷ್ಟರ್ ಸಂಪನ್ಮೂಲ ಸಮನ್ವಯ ಶಿಕ್ಷಣ ಸಮನ್ವಯಗೊಳಿಸುವುದು.
3. ತಾಲ್ಲೂಕಿನಲ್ಲಿ ವಿಶೇಷ ಸಾಮರ್ಥ್ಯಗಳುಳ್ಳ ಮಕ್ಕಳನ್ನು ಗುರುತಿಸುವುದು ಹಾಗೂ ಪ್ರತಿ ಮಕ್ಕಳ ವಿವರವಾದ ಮಾಹಿತಿಯನ್ನು (child profile) ಸಿದ್ದಪಡಿಸಿ ತಾಲ್ಲೂಕಿನಲ್ಲಿ ಸಮನ್ವಯ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಜೊತೆ ವಿನಿಮಯ ಮಾಡಿಕೊಳ್ಳುವುದು.
4. ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ವಾರ್ಷಿಕ ಪಂಚಾಂಗವನ್ನು (calendar of event) ಜವಾಬ್ದಾರಿಗಳೊಂದಿಗೆ ಸಿದ್ದಪಡಿಸುವುದು.
5. ತಾಲ್ಲೂಕಿನಲ್ಲಿ ವಿಶೇಷ ಸಾಮರ್ಥ್ಯಗಳುಳ್ಳ ಮಕ್ಕಳಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮನ್ವಯಗೊಳಿಸುವುದು.
6. “ಸಮನ್ವಯ ಕಲಿಕಾ ಪರಿಸರ ಯೋಜನೆ” ಸಿದ್ಧಪಡಿಸುವುದರ ಮೂಲಕ ವಾರ್ಷಿಕ ಕಾರ್ಯಕ್ರಮ ಯೋಜನೆ ಹಾಗೂ ಪಾಠ ಯೋಜನೆಗಳಲ್ಲಿ ಸಮನ್ವಯಗೊಳಿಸುವುದು.
7. ತಾಲ್ಲೂಕಿನಲ್ಲಿ ವೈದ್ಯಕೀಯ ತಪಾಸಣೆ-ಪೋಷಕರ ಮಾರ್ಗದರ್ಶನ ಅಧಿವೇಶನ ಯೋಜನೆ ಸಿದ್ಧಪಡಿಸಿ ನಿಗದಿತ ಕಾಲದಲ್ಲಿ ಅನುಷ್ಠಾನಗೊಳಿಸುವುದು.
8. ಸಂಪನ್ಮೂಲ ವ್ಯಕ್ತಿಗಳ ತಂಡಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಯೋಜನೆ ಸಿದ್ಧಪಡಿಸುವುದು.
9. ಗೃಹಾಧಾರಿತ ಶಿಕ್ಷಣದಲ್ಲಿ ಪೋಷಕರಿಗೆ ನೀಡಬಹುದಾದ ಸಬಲೀಕರಣದ ಯೋಜನೆ ಸಿದ್ದಪಡಿಸುವುದು ಮತ್ತು ತೀವ್ರ ನ್ಯೂನತೆಯ ಕಾರಣದಿಂದ ಶಾಲೆಯಿಂದ ಹೊರುಗುಳಿದ ಮಕ್ಕಳಿಗೆ ಅವಶ್ಯ ಶೈಕ್ಷಣಿಕ ಚಟುವಟಿಕೆಗಳನ್ನು ಕಲ್ಪಿಸಿಕೊಡುವುದು. ಎನ್.ಜಿ.ಓ. ಸ್ವಯಂ ಸೇವಕರ ಸೇವೆಯನ್ನು ಬಳಸಿಕೊಳ್ಳುವುದು.
10. ಸಾಮಾನ್ಯ ಶಿಕ್ಷಕರಿಗೆ, ಪೋಷಕರಿಗೆ, ಎಸ್.ಡಿ.ಎಂ.ಸಿ. ಸದಸ್ಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಜನಪ್ರತಿನಿಧಿಗಳಿಗೆ ಸಮನ್ವಯ ಶಿಕ್ಷಣ ಕುರಿತು ತರಬೇತಿ ನೀಡುವುದು.
11. ವಿಶೇಷ ಅಗತ್ಯತೆಯುಳ್ಳ ಎಲ್ಲಾ ವಿದ್ಯಾರ್ಥಿಗಳ ಪೋಷಕರನ್ನು ಭೇಟಿ ಮಾಡುವುದು ಹಾಗೂ ಅವರು ಶಾಲೆಗಳಿಗೆ ದಾಖಲಾಗುವಂತೆ ಕ್ರಮ ಕೈಗೊಳ್ಳುವುದು. ಶಾಲೆಗೆ ದಾಖಲು ಮಾಡಿಸಿ ಪೋಷಕರಿಗೆ ವಿದ್ಯಾರ್ಥಿಯ ಅನುಪಾಲನೆ ಮಾಡುವ ಬಗ್ಗೆ ಜಾಗೃತಿ ಮೂಡಿಸುವುದು.
12. ಶಾಲಾ ಭೇಟಿ ಯೋಜನೆ ಸಿದ್ಧಪಡಿಸಿಕೊಂಡು ಶಾಲೆಗೆ ಭೇಟಿ ನೀಡುವ ಸಂದರ್ಭದಲ್ಲಿ ಸಾಮಾನ್ಯ ವಿದ್ಯಾರ್ಥಿಗಳು ವಿಶೇಷ ಅಗತ್ಯತೆಯುಳ್ಳ ಮಕ್ಕಳೊಂದಿಗೆ ಬೆರೆಯುವಂತೆ ಮಾಡಲು ಕ್ರಮ ಕೈಗೊಳ್ಳಬೇಕು.
13. ವಿದ್ಯಾರ್ಥಿಗಳ ಅಗತ್ಯತೆಗಳಿಗನುಸಾರವಾಗಿ ಅವರುಗಳಿಗೆ ಸ್ಥಳಾವಕಾಶ ದೊರೆಯುತ್ತಿರುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

14. ಪಠ್ಯಕ್ರಮ ಹೊಂದಾಣಿಕೆ ಸಾಮರ್ಥ್ಯಗಳ ಹೊಂದಾಣಿಕೆ ಕುರಿತು ಚಿಂತನೆ ಮಾಡುವುದು, ಸಂಗ್ರಹಿಸುವುದು, ಮಾರ್ಗದರ್ಶನ ಮಾಡುವುದು.
15. ಬಹು ಇಂದ್ರಿಯ ಬೋಧನೆಗೆ ನೈಜ ವಸ್ತುಗಳನ್ನು ಉಪಯೋಗಿಸುತ್ತಿರುತ್ತಾರೆಯೇ ಎಂಬುದನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡುವುದು.
16. ತರಗತಿಗಳನ್ನು ಸಮನ್ವಯ ಕಲಿಕಾ ಸ್ನೇಹಮಯಿಯಾಗುವಂತೆ ಕಲಿಕಾ-ಬೋಧನಾ ಸಾಮಗ್ರಿಗಳನ್ನು ಬಳಸಿಕೊಂಡು ಸಮವಯಸ್ಕರ ಹಾಗೂ ಸ್ನೇಹಮಯಿಯಾಗುವಂತೆ ಅವಶ್ಯ ಅಂಶಗಳ ಕುರಿತು ಕ್ರಮಕೈಗೊಳ್ಳುವುದು.
17. ಶಾಲಾ ಭೇಟಿಗಳಲ್ಲಿ ಶಿಕ್ಷಕರು ಪೋಷಕರು, ವಿದ್ಯಾರ್ಥಿಗಳು ಮುಖ್ಯಶಿಕ್ಷಕರ ಜೊತೆ ಚರ್ಚಿಸುವುದು.
18. ಉಸ್ತುವಾರಿಯ ಟಿಪ್ಪಣಿಗಳನ್ನು ಮನೆ ಹಾಗೂ ಶಾಲೆಗಳಲ್ಲಿ ನಿರ್ವಹಿಸುವುದು.
19. ಕಳೆದ ಭೇಟಿಗೂ, ಪ್ರಸ್ತುತ ಭೇಟಿಗೂ ಆಗಿರುವ ಬದಲಾವಣೆಗಳ ದಾಖಲೀಕರಣ ಮಾಡುವುದು.
20. ಸಮನ್ವಯ ಶಿಕ್ಷಣಕ್ಕೆ ಒಳಪಡುವ ವಿದ್ಯಾರ್ಥಿಗಳಿಗೆ ಅವಶ್ಯಕ ಮೌಲ್ಯಮಾಪನ ಸಾಧನ ಸಿದ್ಧಪಡಿಸುವುದು.
21. ಶಿಕ್ಷಕರ ಮಾಸಿಕ ಸಮಾಲೋಚನಾ ಸಭೆಗಳಲ್ಲಿ ಸಮನ್ವಯ ಶಿಕ್ಷಕರಿಗೆ ಸಂಬಂಧಿಸಿದಂತೆ ವಿಷಯಗಳ ವಿನಿಮಯ ಮಾಡಿಕೊಳ್ಳುವುದು.
22. ಸಮನ್ವಯ ಶಿಕ್ಷಣದ ರಾಯಭಾರಿಯಾಗಿ ಕಾರ್ಯನಿರ್ವಹಿಸುವುದು.
23. ನಿಗದಿತ ನಮೂನೆಗಳಲ್ಲಿ ನಿಗದಿತ ಅವಧಿಯಲ್ಲಿ ಮಾಹಿತಿ ಸಂಗ್ರಹಿಸಿ ನಿಗದಿತ ವರದಿ ನಮೂನೆಗಳಲ್ಲಿ ಸಂಬಂಧಿಸಿದವರಿಗೆ ವರದಿ ಮಾಡುವುದು.
24. ಬಿ.ಐ.ಇ.ಆರ್.ಟಿ ಗಳು ತಿಂಗಳಲ್ಲಿ ಕನಿಷ್ಠ 15 ದಿನಗಳಿಗಿಂತ ಕಡಿಮೆ ಇಲ್ಲದಂತೆ ಶಾಲಾ ಭೇಟಿ ಮಾಡುವುದು.

### ಶಾಲಾ ಮಕ್ಕಳಲ್ಲಿ ಕಂಡು ಬರುವ ಸಾಮಾನ್ಯ ಮಾನಸಿಕ ತೊಂದರೆಗಳು

1. ಇಂದ್ರಿಯಗಳ ದೋಷ, ಅಂಗವಿಕಲತೆ, ದುರ್ಬಲತೆ
2. ಸಂವಹನೆಯಲ್ಲಿ ದೋಷಗಳು
3. ಆಹಾರ ಸೇವನೆ ಮತ್ತು ವಿಸರ್ಜನೆಯಲ್ಲಿ ತೊಂದರೆಗಳು
4. ಭಾವನಾತ್ಮಕ ಸಮಸ್ಯೆಗಳು
5. ವರ್ತನಾ ದೋಷಗಳು
6. ಚಲನವಲನಗಳಲ್ಲಿ ತೊಂದರೆ
7. ಏಕಾಗ್ರತೆಯ ಕೊರತೆ.

### ಮಕ್ಕಳಲ್ಲಿ ಕಾಣುವ ಶೈಕ್ಷಣಿಕ ತೊಂದರೆಗಳು

ಶಾಲಾ ಮಕ್ಕಳಲ್ಲಿ ಶೈಕ್ಷಣಿಕ ತೊಂದರೆಗಳು ವಿಭಿನ್ನ ರೀತಿಯಲ್ಲಿ ಕಂಡುಬರುತ್ತವೆ. ಮಕ್ಕಳು ಶಾಲಾ ಕಲಿಕೆಯಲ್ಲಿ ಹಿಂದುಳಿದಿರುವುದು ಒಂದು ಪ್ರಮುಖ ದೂರು. ಪಾಲಕರಿಗೆ ಇತರೆ ಮಕ್ಕಳೊಡನೆ ಹೋಲಿಸಿದರೆ ಓದು ಬರಹದಲ್ಲಿ ತಮ್ಮ ಮಗು ಹಿಂದುಳಿದಿರುವುದು ಒಂದು ದೊಡ್ಡ ಆತಂಕವೆನಿಸುವುದು. ಈ ರೀತಿಯ ತೊಂದರೆ ಕಂಡಾಗ ಪಾಲಕರು ಶಿಸ್ತಿನಿಂದ, ಹೊಡೆದು ಬಡೆದು, ಬುದ್ಧಿವಾದ ಹೇಳುವರು, ಮನೆಪಾಠಕ್ಕೆ ಕಳುಹಿಸುವರು. ಹೆಚ್ಚುವರಿ ಅಭ್ಯಾಸದಲ್ಲಿ ತೊಡಗಿಸಲು ಪ್ರಯತ್ನಿಸುವರು. ಕೆಲವೊಮ್ಮೆ ಸುಧಾರಣೆ ಕಂಡರೂ ಅದು ತಾತ್ಕಾಲಿಕ. ನಂತರ ಪಾಲಕರು ಶಾಲೆ, ಶಿಕ್ಷಕರು, ಪಠ್ಯಕ್ರಮ ಕೊನೆಗೆ ಶಿಕ್ಷಣ

ವ್ಯವಸ್ಥೆಯನ್ನೇ ದೂರಲಾರಂಭಿಸುತ್ತಾರೆ. ತಮ್ಮಲ್ಲಿರುವ ಕೆಲವು ತೊಂದರೆಗಳನ್ನು ತಮಗೆ ಬೇಕಾದಂತೆ ವ್ಯಾಖ್ಯಾನ ಮಾಡಿ ಸಮಜಾಯಿಸಿ ಉತ್ತರ ಕಂಡುಕೊಳ್ಳುತ್ತಾರೆ. ಇದೇ ರೀತಿ ಮಗುವಿನಲ್ಲಿರುವ ತೊಂದರೆಯನ್ನು ಒಪ್ಪಿಕೊಳ್ಳದೆ ಸುತ್ತಲೂ ಪರಿಸರದಲ್ಲೇ ತೊಂದರೆ ಇದೆಯೆಂದೂ ಇನ್ನು ಕೆಲವೊಮ್ಮೆ ಅನುವಂಶೀಯತೆ ಇದಕ್ಕೆ ಕಾರಣವಾಗಿರಬಹುದೆಂದೂ ಭ್ರಮಿಸುತ್ತಾರೆ. ಪೋಷಕರು ಹಾಗೂ ಶಿಕ್ಷಕರು ಅರಿಯಲಾರದ ಮತ್ತು ವಿವರಿಸಲಾರದ ಕೆಲವು ಪರಿಕಲ್ಪನೆಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದಿಲ್ಲ. ಸ್ವಲ್ಪ ಸಮಯದ ನಂತರ ತಮ್ಮ ಮಗುವಿನಲ್ಲಿರುವ ಶೈಕ್ಷಣಿಕ ತೊಂದರೆಯ ಬಗ್ಗೆ ಪಾಲಕರು ಅರಿಯುತ್ತಾರೆ.

**ಶೈಕ್ಷಣಿಕ ತೊಂದರೆಯನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು**

1. ಶಿಕ್ಷಣದಲ್ಲಿ ಹಿಂದುಳಿಯುವಿಕೆ.
2. ಶಿಕ್ಷಣದಲ್ಲಿ ಕೆಳಮಟ್ಟದ ಸಾಧನೆ

**ಎ) ಶೈಕ್ಷಣಿಕವಾಗಿ ಮಿತಿ ಹೊಂದಿದ ಮಕ್ಕಳು :**

ಕೆಲವೊಮ್ಮೆ ಮಕ್ಕಳ ಜ್ಞಾನೇಂದ್ರಿಯಗಳಲ್ಲಿ ದೋಷವಿರುವುದರಿಂದ, ಬುದ್ಧಿಮಾಂದ್ಯತೆ ಇರುವುದರಿಂದ, ಮಂದಗಾಮಿಗಳಾಗಿರುವುದರಿಂದ ಶೈಕ್ಷಣಿಕ ಪ್ರಗತಿ ಕುಂಠಿತವಾಗುವುದು. ಅವರಲ್ಲಿನ ನಿರ್ದಿಷ್ಟವಾದ ತೊಂದರೆಯನ್ನು ತಿಳಿದುಕೊಂಡು ಅದಕ್ಕೆ ಪರಿಹಾರ ಕಂಡುಹಿಡಿದಲ್ಲಿ ಅವರ ಶೈಕ್ಷಣಿಕ ಬೆಳವಣಿಗೆಯು ಅವರ ಸಾಮರ್ಥ್ಯಕ್ಕನುಸಾರವಾಗಿ ಸಾಗುವುದು. ಆದ್ದರಿಂದ ಶಿಕ್ಷಕರು, ಪೋಷಕರು, ತಜ್ಞರಿಗೆ ಮಗುವಿನಲ್ಲಿರುವ ಶೈಕ್ಷಣಿಕ ಮಿತಿಯನ್ನು ಸಮರ್ಪಕವಾಗಿ ಅರಿಯುವ ಅಗತ್ಯವಿದೆ. ಸಮರ್ಪಕವಾಗಿ ಅರ್ಥೈಸಿಕೊಂಡಲ್ಲಿ ಮಗುವಿನ ಹಾಗೂ ಪೋಷಕರ ಮುಂದಿನ ಭವಿಷ್ಯವು ಸುಗಮವಾಗುವುದು.

ಮಾನಸಿಕ ತೊಂದರೆಗಳು ಮಗುವಿನ ಕಲಿಕೆಯ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ಶಿಕ್ಷಣದಲ್ಲಿ ಮಿತಿ ಹೊಂದಿದ, ಮಕ್ಕಳಲ್ಲಿ ಬುದ್ಧಿಶಕ್ತಿ, ಮಾನಸಿಕ ಸ್ಥಿತಿ, ಶಾಲೆಯ ಪ್ರಗತಿ ಈ ಮೂರಕ್ಕೂ ಒಂದಕ್ಕೊಂದು ಸಂಬಂಧವಿದೆಯೆಂದು ಅರಿವಾಗುವುದು. ಸರಿಯಾಗಿ ವೀಕ್ಷಿಸಿದಾಗ ಮಗುವಿನ ವಯಸ್ಸು ಅದಕ್ಕನುಸಾರವಾದ ಕಲಿಕೆಯನ್ನು ಮಾಪನ ಮಾಡಿದಾಗ ತುಂಬ ಅಂತರವಿರುವುದು ಕಂಡು ಬರುತ್ತದೆ. ಉದಾಹರಣೆಗೆ : ಸಾಮಾನ್ಯವಾಗಿ 10 ವರ್ಷದ ಮಗು ಐದನೇ ತರಗತಿಯಲ್ಲಿರಬೇಕು. ಮಗು ಐದನೇ ತರಗತಿಯಲ್ಲಿರಬಹುದು. ಆದರೆ ಐದನೇ ತರಗತಿಯ ಕಲಿಕಾ ಮಟ್ಟವನ್ನು ಅಳೆದಾಗ ಒಂದು ಅಥವಾ ಎರಡನೇ ತರಗತಿಯ ಮಟ್ಟಕ್ಕೆ ಇರಬಹುದು. ಅಂದರೆ ಮಗುವಿನ ಕಲಿಕೆಯು ನಾಲ್ಕು ವರ್ಷಗಳ ಹಿನ್ನೆಡೆಯಿಂದ ತಿಳಿಯುತ್ತದೆ.

**ಬಿ) ಶಿಕ್ಷಣದಲ್ಲಿ ಕೆಳಮಟ್ಟದ ಸಾಧನೆ :**

ಕೆಲವು ಮಕ್ಕಳಲ್ಲಿ ಹಲವು ಕಾರಣಗಳಿಂದ ಓದು, ಬರಹದ ಪ್ರಗತಿ ಕುಂಠಿತಗೊಳ್ಳಬಹುದು. ಕುಂಠಿತಗೊಂಡಂತಹ ಕಲಿಕೆಯ ಪ್ರಗತಿಯಲ್ಲಿ ಕೆಲವು ಓದು, ಬರಹಕ್ಕೆ ಸಂಬಂಧಪಟ್ಟಂತಹ ತೊಂದರೆಗಳಾಗಿರಬಹುದು ಅಥವಾ ಓದು, ಬರಹಕ್ಕೆ ಸಂಬಂಧ ಪಡೆದಿರಬಹುದು. ಸರಾಸರಿ ಬುದ್ಧಿಮಟ್ಟ ಹೊಂದಿದ ಮಕ್ಕಳ ಶಿಕ್ಷಣದಲ್ಲಿ ಪ್ರಗತಿ ಹೊಂದಿರಲು ಕಾರಣವೇನೆಂಬುದನ್ನು ಸರಿಯಾಗಿ ವ್ಯಾಖ್ಯಾನ ಮಾಡಲಾಗದು. ನಮ್ಮ ದೇಶದಲ್ಲಿ ದೈಹಿಕ ಅಥವಾ ಪಂಚೇಂದ್ರಿಯ ತೊಂದರೆಗಳಿಂದ ಬಳಲುತ್ತಿರುವ ಮಕ್ಕಳು ಪ್ರತಿಭಾವಂತ ಮಕ್ಕಳ ಸಂಗಡ ಸ್ಪಂದಿಸಲು ನಮ್ಮ ಶಿಕ್ಷಣ ವ್ಯವಸ್ಥೆ ಅಪೇಕ್ಷೆ ಪಡುತ್ತದೆ. ಈ ತರಹದ ಅತಿಯಾದ ಅಪೇಕ್ಷೆ ಈ ನ್ಯೂನತೆ ಹೊಂದಿದಂತಹ ಮಗುವಿಗೆ ಕಲಿಕೆಯಲ್ಲಿ ಒಂದು ದೊಡ್ಡ

ಗಂಡಾಂತರವನ್ನು ತಂದೊಡ್ಡುವುದು. ಈ ಪರಿಸ್ಥಿತಿ ಇರುವುದರಿಂದಲೇ ಕೆಲವು ಮಕ್ಕಳಲ್ಲಿ ಕಲಿಕೆಯ ಪ್ರಗತಿ ಸುಗಮವಾಗಿ ಸಾಗುವುದಿಲ್ಲ.

**ಕೆಳಮಟ್ಟದ ಶಾಲಾ ಪ್ರಗತಿಗೆ ಕಾರಣಗಳು :**

1. ತೀರ ಕೆಳಮಟ್ಟದ ಬೋಧನೆ ಅಥವಾ ಬೋಧನೆಯೆ ಇಲ್ಲದಿರುವುದು.
2. ಕಲಿಸುವ ಕ್ರಮ ಹಾಗೂ ಕಲಿಯುವವರ ಅಗತ್ಯಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು.
3. ಸಾಕಷ್ಟು ಪುನರ್ ಮನನ ಅಥವಾ ಅಭ್ಯಾಸ ಮಾಡದಿರುವುದು.
4. ಅನುಚಿತ ಅಥವಾ ಅಸಮಂಜಸ ಬೋಧನಾ ಸಾಮಗ್ರಿಗಳ ಬಳಕೆ.
5. ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡದ ಯೋಜನೆಗಳು
6. ಶಿಕ್ಷಣಕ್ಕೆ ಮನೆಯಿಂದ ಅಲ್ಪ ಪ್ರಮಾಣದ ಬೆಂಬಲ
7. ಅತಿಯಾದ ನಿರೀಕ್ಷೆ:
8. ಕೆಳಮಟ್ಟದ ಅಪೇಕ್ಷೆ:
9. ಗಂಡು ಹೆಣ್ಣು ಮಕ್ಕಳಲ್ಲಿ ತಾರತಮ್ಯ:
10. ಪ್ರಭಾವ ಬೀರದ ಅನುಕರಣೀಯ ವ್ಯಕ್ತಿಗಳು:
11. ಆಗಾಗ ಶಾಲೆಗಳ ಹಾಗೂ ಮಾಧ್ಯಮದ ಬದಲಾವಣೆ
12. ಟಿ.ವಿ. ಸಮೂಹ ಮಾಧ್ಯಮಗಳ ನಕಾರಾತ್ಮಕ ಪ್ರಚೋದನೆ
13. ಬೌದ್ಧಿಕ ಪ್ರೌಢಿಮೆ ಮತ್ತು ಪಾಂಡಿತ್ಯ
14. ತೀವ್ರ ಅಥವಾ ಗಂಭೀರ ವೈದ್ಯಕೀಯ ಸಮಸ್ಯೆಗಳು
15. ದೋಷಪೂರ್ಣ ವರ್ತನೆಗಳು
16. ಸಹಪಾಠಿಗಳಿಂದ ಒತ್ತಡ
17. ತೀವ್ರ ಹಾಗೂ ಗಂಭೀರವಾದ ಕೌಟುಂಬಿಕ ಸಮಸ್ಯೆಗಳು
18. ಪರೀಕ್ಷೆಗೆ ಸಿದ್ಧತೆ ನಡೆಸುವ ಮತ್ತು ಬರೆಯುವ ಕೌಶಲಗಳಲ್ಲಿ ಕೊರತೆ
19. ಲೋಪಯುಕ್ತ ಶಾಲಾ ನೀತಿ ಮತ್ತು ಯೋಜನೆಗಳು
20. ತಡವಾಗಿ ವಿಕಸಿತಗೊಳ್ಳುವ ಮತ್ತು ಶೀಘ್ರವಾಗಿ ಮಂಕಾಗುವ ಮಕ್ಕಳು

**ಆತ್ಮಾಭಿಮಾನ ಬೆಳೆಸಿಕೊಳ್ಳಲು ಕೆಲವು ಸಲಹೆಗಳು :**

- ❖ ಉತ್ತಮ ಆತ್ಮಾಭಿಮಾನ ಹೊಂದಿದ ಅನುಕರಣೀಯ ವ್ಯಕ್ತಿಯಾಗಿರಬೇಕು. ನಿಮ್ಮಲ್ಲಿ ಸಕಾರಾತ್ಮಕ ಮನೋಧೋರಣೆಯಿದ್ದರೆ, ನಿಮ್ಮ ಒಡನಾಡಿಗಳಲ್ಲೂ ಇದನ್ನು ಕಾಣಬಹುದು.
- ❖ ನಿಮ್ಮ ಅಪೇಕ್ಷೆಯ ಮಟ್ಟ ಸಾಮರ್ಥ್ಯಕ್ಕನುಸಾರವಾಗಿರಲಿ. ಇಲ್ಲದೆ ಹೋದಲ್ಲಿ ಯಾವಾಗಲೂ ಸೋಲುವ ಹೆದರಿಕೆ ಇರುವುದು.

- ನಮ್ಮ ಹಾಗೂ ಬೇರೆಯವರ ವೈಯಕ್ತಿಕತೆಯನ್ನು ಗೌರವಿಸಬೇಕು. ಬೇರೆಯವರ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಬೇಕು. ಇತರರು ತೋರುವ ಸಾಧನೆಯನ್ನು ಹಾಗೂ ಆರೋಗ್ಯ ಪೂರ್ಣ ಪ್ರಯತ್ನಗಳನ್ನು ಎಲ್ಲರೆದುರು ಮೆಚ್ಚಿಕೊಳ್ಳಬೇಕು.
- ಅವರು ಮಾಡುವ ಕೆಲಸದಲ್ಲಿ ಅಸಫಲರಾದಾಗ ಅವರನ್ನು ಪ್ರೋತ್ಸಾಹಿಸಬೇಕು.
- ಮಕ್ಕಳ ಮತ್ತು ಮತ್ತೊಬ್ಬರ ವರ್ತನೆಯನ್ನು ಸುಧಾರಿಸಲು ಮಾಡುವ ಪ್ರಯತ್ನಗಳು ಅತಿ ಗಂಭೀರವಾದವು. ಬೇರೆಯವರ ನಕಾರಾತ್ಮಕ ವರ್ತನೆಗಳನ್ನು ದೂಷಿಸುವ ಬದಲು ಸಕಾರಾತ್ಮಕ ಪ್ರೋತ್ಸಾಹದಿಂದ ಅವರ ವರ್ತನೆಗಳಲ್ಲಿ ಏನು ದೋಷಗಳಿವೆ ಮತ್ತು ಯಾವ ರೀತಿ ಅವುಗಳನ್ನು ಸರಿಪಡಿಸಿಕೊಳ್ಳಬೇಕೆಂದು ತಿಳಿ ಹೇಳುವುದು ಪರಿಣಾಮಕಾರಿ.
- ಒಬ್ಬರ ವರ್ತನೆಯನ್ನು ಮತ್ತೊಬ್ಬರ ವರ್ತನೆಯೊಂದಿಗೆ ಹೋಲಿಸಬೇಡಿ.

## ಶಿಕ್ಷಕರಿಗೆ ಕೆಲವು ಉಪಯುಕ್ತ ಅಂಶಗಳು

- ಪ್ರತಿಯೊಂದು ವಿದ್ಯಾರ್ಥಿಯು ವಿಭಿನ್ನವಾಗಿರುತ್ತಾರೆ.
- ಒಳ್ಳೆಯ ಉದ್ದೇಶವಿದ್ದರೂ ಸಹ ಮಕ್ಕಳ ನಡುವೆ ಹೋಲಿಕೆ ಮಾಡಬಾರದು.
- ಪ್ರತಿಯೊಂದು ಮಗುವೂ ಅವನ ಅಥವಾ ಅವಳದೇ ಆದ ಕಲಿಕೆಯ ಹಂತ ಅಥವಾ ರೀತಿಯನ್ನು ಹೊಂದಿರುತ್ತಾರೆ.
- ನೀವು ಕಲಿಸುವ ವಸ್ತುವಿಷಯಗಳನ್ನು ಅವರ ವಯಸ್ಸು, ಹಂತ, ಕಲಿಕೆಯ ಮಟ್ಟಕ್ಕೆ ತಕ್ಕಂತೆ ಮಾರ್ಪಡಿಸಲು ಪ್ರಯತ್ನಿಸಿ.
- ಯಾವಾಗಲೂ ಮಕ್ಕಳಿಗೆ ಸರಳತೆಯಿಂದ, ಸಂಕೀರ್ಣತೆಯ ರೀತಿಯಲಿ ಕಲಿಸಬೇಕು.
- ಯಾವುದೇ ವಿಷಯವನ್ನು ಹೆಚ್ಚು ಪ್ರಾಯೋಗಿಕ ಉದಾಹರಣೆಗಳೊಂದಿಗೆ ಅಥವಾ ವಿವರಣಾತ್ಮಕವಾಗಿ ಬೋಧಿಸಬೇಕು.
- ವಿದ್ಯಾರ್ಥಿಯು ತರಗತಿಯಲ್ಲಿ ಮಾತನಾಡಲು ಅವಕಾಶ ನೀಡಬೇಕು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲು ಅಥವಾ ನಿಮ್ಮ ಹೇಳಿಕೆಗಳನ್ನು ಚರ್ಚಿಸಲು ಸಹ ಉತ್ತೇಜಿಸಬೇಕು.
- ಯಾವುದೇ ಪ್ರಶ್ನೆಯೂ ಶಿಕ್ಷಕರಿಗೆ ಅಥವಾ ಶಿಕ್ಷಣ ಪ್ರಕ್ರಿಯೆಗೆ ಅಗೌರವ ಸೂಚಿಸಿದಂತೆ ಎಂದು ಭಾವಿಸಬಾರದು.
- ಶೈಕ್ಷಣಿಕ ಸಮಸ್ಯೆಗಳನ್ನು ಹೊಂದಿರುವ ಮಕ್ಕಳಿಗೆ ವಿಶೇಷ ತರಗತಿಗಳನ್ನು ರೂಪಿಸಬೇಕು ಹಾಗೂ ತರಗತಿಗಳಲ್ಲಿನ ಮಕ್ಕಳ ಸಂಖ್ಯೆಯು ಕಡಿಮೆ ಇರಬೇಕು.
- ಎಲ್ಲಾ ಸಮಯದಲ್ಲೂ ಪ್ರತ್ಯೇಕವಾಗಿ ಕಲಿಸಲು ಸಾಧ್ಯವಾಗದಿದ್ದಾಗ ಶೈಕ್ಷಣಿಕ ಪ್ರಗತಿಯಲ್ಲಿ ಹಿಂದಿರುವ ಕೆಲವು ಮಕ್ಕಳನ್ನು ಒಟ್ಟಾಗಿ ಸೇರಿಸಿ ಕಲಿಸುವುದು ಒಳಿತು.
- ವಸ್ತು ವಿಷಯದೊಡನೆ ಸಂಪರ್ಕ (ಸಂಬಂಧ) ಕಲ್ಪಿಸಲು ಬೋಧನಾ ಸಾಮಗ್ರಿಗಳೂ ಆಟದ ಸಾಮಗ್ರಿಗಳನ್ನು ಬಳಸಬೇಕು.
- ಕಲಿಕೆ ಬೋಧನೆಯಲ್ಲಿ ಒತ್ತಡವಿರಬಾರದು. ವ್ಯತಿರಿಕ್ತವಾದ ಅಡೆತಡೆಗಳಿಗೆ ಮಗುವನ್ನು ಒಳಪಡಿಸದಾಗ ವಿರುದ್ಧವಾದ ಅಥವಾ ಹಠಮಾರಿ ವರ್ತನೆಗಳನ್ನು ಹೊಂದಬಹುದು.
- ಮಕ್ಕಳು ಕೆಲಮಟ್ಟದ ಕಾರ್ಯನಿರ್ವಹಣೆ ಮಾಡಿದಾಗ ಅವರನ್ನು ಹೆದರಿಸುವುದಾಗಲೀ, ಬೆದರಿಸುವುದಾಗಲೀ ಮಾಡಬಾರದು.
- ಶೈಕ್ಷಣಿಕವಾಗಿ ಹಿಂದುಳಿದಿರುವ ಮಕ್ಕಳಿಗನುಗುಣವಾಗಿ ಕ್ರೀಡೆ, ಸಂಗೀತ ಅಥವಾ ಇತರೆ ಚಟುವಟಿಕೆಗಳಲ್ಲಿ ಅವರ ಸಾಮರ್ಥ್ಯ & ಅಭಿಕ್ಷಮತೆಯನ್ನು ಅಭಿವೃದ್ಧಿಪಡಿಸಬೇಕು.

- ❖ ಮಕ್ಕಳಿಗೆ ಹೊಡೆಯಬಾರದು.
- ❖ ಯಾವಾಗಲೂ ಮಕ್ಕಳನ್ನು ಬಹಿಂರಗವಾಗಿ ಹೊಗಳುವುದು ಮತ್ತು ಪ್ರತ್ಯೇಕವಾಗಿ ದಂಡಿಸುವುದನ್ನು ಕಲಿಯಬೇಕು.
- ❖ ಚಿಕ್ಕದಾಗಿ, ಸ್ಪಷ್ಟವಾಗಿ, ಸರಳ ರೀತಿಯಲ್ಲಿ ತಿಳಿಸಬೇಕು.

**ಕೆಲವು ಉಪಯುಕ್ತ ಮಾಹಿತಿಯನ್ನು ವಿವಿಧ ಹಂತಗಳಲ್ಲಿ ಈ ಕೆಳಗೆ ವಿವರಿಸಲಾಗಿದೆ.**

**01. ಚಟುವಟಿಕೆಯಾಧಾರಿತ ಶಿಕ್ಷಣ**

ಕಣ್ಣಾ ಮುಚ್ಚಾಲೆ ಆಟದ ಮೂಲಕ ಸಂಖ್ಯೆಯ ಎಣಿಕೆಯನ್ನು ಕಲಿಸುವುದು. ಟೋಪಿ, ಬಿಲ್ಲೆಗಳು (ಗುಂಡಿ) ಅಥವಾ ಕೆಲವು ಗೊಂಬೆಗಳನ್ನು ಉಪಯೋಗಿಸಿ, ಬಣ್ಣ ಅಥವಾ ಆಕಾರಗಳನ್ನು ಕಲಿಸುವುದು, ೨ ವರ್ಷದ ಒಳಗಿನ ಮಕ್ಕಳಿಗಾಗಿ ಇಲ್ಲಿ ಹೊರತಂದಿರುವ ಎಂಬ ಮಕ್ಕಳ ಕಿಟ್‌ಗಳನ್ನು ಸಹ ಬಳಸಿ ಮಕ್ಕಳಿಗೆ ಶಿಕ್ಷಣ ನೀಡುವುದು.

02. **ಮಗುವಿಗೆ ತಕ್ಕಂತ ಶಿಕ್ಷಣ**

ಶಿಕ್ಷಣದ ಗುರಿ ಮತ್ತು ಚಟುವಟಿಕೆಗಳು ಒಂದು ಮಗುವಿನ ವೇಗಕ್ಕೆ ತಕ್ಕಂತೆ ಇರಬೇಕು. ಆ ಮಗುವಿನ ವಿವಿಧ ಕ್ಷೇತ್ರಗಳಿಂಧ ಅಥವಾ ಚಟುವಟಿಕೆಗಳ ಪ್ರಚಲಿತ ಮಟ್ಟವನ್ನು ತಿಳಿಯಬೇಕಾಗುತ್ತದೆ. ಉದಾ: ಆ ಮಗುವಿಗೆ ಪೆನ್ಸಿಲ್ ಅಥವಾ ಬರವಣಿಗೆಯ ಸಾಮಗ್ರಿಗಳನ್ನು ಹಿಡಿಯಲು ಸಾಧ್ಯವಾಗದಿರುವುದು. ಇಂತಹ ಸಂದರ್ಭಗಳಲ್ಲಿ ಮಗುವಿನ ವರ್ಣಮಾಲೆ ಬರೆಸಲು ಪ್ರಾರಂಭಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಬದಲಾಗಿ ಅವನಿಗೆ/ಅವಳಿಗೆ ಬರವಣಿಗೆಯ ಪೂರ್ವ ಚಟುವಟಿಕೆಗಳಿಂದ ಬಣ್ಣ ಹಚ್ಚುವ, ಕತ್ತರಿಸುವ ಮಡಚುವ ಹಿಡಿಯುವ ಚಟುವಟಿಕೆಗಳಲ್ಲಿ ತರಬೇತಿ ನೀಡಬೇಕಾಗುತ್ತದೆ.

03. **ಅನುಸರಣಾ ತರಬೇತಿ**

ಕೆಲವು ವಯಸ್ಕ ಮಕ್ಕಳು ಸಾಮಾನ್ಯವಾಗಿ ಹೆಚ್ಚಿನ ಅವಧಿ ತರಗತಿಯಲ್ಲಿ ಕುಳಿತುಕೊಳ್ಳುವುದಿಲ್ಲ. ನಮ್ಮ ಶಾಲೆಗಳಲ್ಲಿ ಸಾಮಾನ್ಯವಾಗಿ ಸಂಭವಿಸುವ ತರಗತಿ ಅವಧಿ ವಿಸ್ತರಣೆಯನ್ನು ಇವರು ಪ್ರೋತ್ಸಾಹಿಸುವುದಿಲ್ಲ. ಹಾಗಾಗಿ ಶಿಕ್ಷಕರು ಇಂತಹ ಮಕ್ಕಳಿಗೆ ಪ್ರೋತ್ಸಾಹ ಮತ್ತು ಬಹುಮಾನ ನೀಡುವ ಮೂಲಕ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು. ಅವರು ಉತ್ತಮವಾದ ಕೌಶಲ್ಯಗಳು ಅಥವಾ ವರ್ತನೆಗಳನ್ನು ತೋರಿಸಿದ ನಂತರವೇ ಅವರಿಗೆ ಬಹುಮಾನಗಳನ್ನು ನೀಡಬೇಕು. ಆ ಬಹುಮಾನಗಳು ಮಗು ಅಥವಾ ಮಕ್ಕಳ ಗುಂಪು ಇಷ್ಟಪಡುವಂತಹ ವಸ್ತುಗಳಾಗಿರಬೇಕು. ಹಾಗೆಯೇ ಕೆಟ್ಟ ಅಥವಾ ದುರ್ವರ್ತನೆಗಳನ್ನು ತೋರಿದ ಮಗುವಿಗೆ ಬಹುಮಾನ ನೀಡಬಾರದು ಹಾಗೆಯೇ ನಿಮ್ಮ ಆದೇಶಗಳನ್ನು ಪಾಲಿಸಿದ ಮಗುವಿಗೂ ಕೂಡಾ ಅದೇ ಪ್ರಾಮುಖ್ಯತೆಯನ್ನು ನೀಡಬೇಕು ಮತ್ತು ಅವರನ್ನು ಅಲಕ್ಷಿಸಬಾರದು.

04. **ವ್ಯಕ್ತಿಗತ ಶಿಕ್ಷಣ**

ಶೈಕ್ಷಣಿಕ ಸಮಸ್ಯೆಗಳನ್ನೊಳಗೊಂಡ ಕೆಲವು ಮಕ್ಕಳಿಗೆ ವ್ಯಕ್ತಿಗತವಾಗಿ ಅಥವಾ ಒಂದರ ನಂತರ ಒಂದರಂತೆ ಸೂಚನೆಗಳನ್ನು ನೀಡಬೇಕು. ಗುಂಪು ಶಿಕ್ಷಣದಿಂದ ಎಲ್ಲಾ ಮಕ್ಕಳಿಗೂ ಸಮಾನ ರೀತಿಯ ಪ್ರಯೋಜನ ದೊರೆಯುವುದಿಲ್ಲ. ಕೆಲವು ಕ್ಷೇತ್ರ ಅಥವಾ ವಿಷಯಗಳಲ್ಲಿ ವಿಶೇಷ ಶಿಕ್ಷಣ ಅವಶ್ಯಕತೆ ಇರುವ ಮಕ್ಕಳನ್ನು ಗುರುತಿಸಿ ಅವರಿಗೆ ವಿಶೇಷ ಗಮನ ಮತ್ತು ತರಬೇತಿ ನೀಡಬೇಕು. ಒಂದೇ ರೀತಿಯ ಸಮಾನ ಶೈಕ್ಷಣಿಕ ತೊಂದರೆಯಿರುವ ಮಕ್ಕಳ, ಚಿಕ್ಕ-ಚಿಕ್ಕ ಗುಂಪುಗಳಿಗೆ

ಸಂಜೆಯ ತರಗತಿ ಏರ್ಪಡಿಸುವುದೂ ಕೂಡ ಲಾಭದಾಯಕ. ಆದರೆ ವಿಶೇಷ ತರಗತಿಗಳು ಅಥವಾ ತರಬೇತಿ ಮಕ್ಕಳಿಗೆ ಶಿಕ್ಷೆ ಎಂದೆನಿಸಬಾರದು.

05. **ಸಮಾನ ವಯಸ್ಕರ ಮಾದರಿ**

ಮಕ್ಕಳು ಹಲವು ವರ್ತನೆಗಳನ್ನು ಅನುಕರಣೆ ಮಾಡುವುದರಿಂದ ಕಲಿಯುತ್ತವೆ. ಅವರಿಗೆ ಪ್ರಮುಖವೆನಿಸಿದ ವರ್ತನೆಗಳನ್ನು ಅನುಕರಣೆ ಮಾಡುತ್ತದೆ. ಅವರ ಇಷ್ಟವಾದ ಶಿಕ್ಷಕರು, ಪೋಷಕರು, ಸಿನಿಮಾ ನಟರು ಅಥವಾ ಸ್ನೇಹಿತರಾಗಿರಬಹುದು. ಅನುಕರಣೆಯು ಪ್ರಾಯೋಗಿಕವಾಗಿ ಮಕ್ಕಳಿಗೆ ಬೋಧಿಸುವ ಒಂದು ಅತ್ಯುತ್ತಮ ಸಲಕರಣೆ. ಮಾದರಿ ಜೊತೆಗಿನ ಹೋಲಿಕೆಯಲ್ಲಿ ಗೊಂದಲಗಳಿರಬಾರದು. ಈ ಹೋಲಿಕೆಗಳು ಅವರ ದೌರ್ಬಲ್ಯವನ್ನು ಕುರಿತು ಆಗಿದ್ದಾಗ ಯಾರೂ ಇತರರೊಡನೆ ತಮ್ಮನ್ನು ಹೋಲಿಸುವುದನ್ನು ಇಷ್ಟಪಡುವುದಿಲ್ಲ. ಹೋಲಿಕೆ ಮಾಡುವುದನ್ನು ಬಿಡಬೇಕು. ಮಗುವಿಗೆ ತಿಳಿಸಬೇಕಾದ ವಿಷಯಗಳನ್ನು ಮಾದರಿಗಳನ್ನು ಉಪಯೋಗಿಸಿ ಅವರಿಗೆ ಸರಿಯಾದ ರೀತಿಯಲ್ಲಿ ವಿವರವಾಗಿ ಅರ್ಥಮಾಡಿಸಬೇಕು. ಮಾದರಿಯು ನಿಮ್ಮ ಮಗುವಿನ ವಯಸ್ಸು ಮತ್ತು ಲಿಂಗಕ್ಕೆ ಅನುಗುಣವಾಗಿರಬೇಕು. ಕಷ್ಟಕರವಾದ ವಿಷಯಗಳನ್ನು ಮಗುವಿಗೆ ಹೇಳಿಕೊಡುವಾಗ ಅಂತಹ ವಿಷಯಗಳನ್ನು ಸಣ್ಣ ಪ್ರಮಾಣಕ್ಕೆ ತಂದು ಒಂದೊಂದು ವಿಷಯವನ್ನು ಬೇರೆಬೇರೆಯಾಗಿ ಹೇಳಿಕೊಡಬೇಕು. ಪ್ರತಿಯೊಂದು ವರ್ತನೆಗಳ ಹಂತ ಅಥವಾ ವರ್ತನಾ ಕ್ರಮಗಳನ್ನು ಮಾದರಿಗಳಿಂದ ಹೇಳಿಕೊಟ್ಟಾಗ ಕೊನೆಯಲ್ಲಿ ಮಗುವಿಗೆ ಮನದಟ್ಟಾಗಿದೆಯೇ ಎಂಬುದನ್ನು ಆತನ ಕಾರ್ಯನಿರ್ವಹಣೆಯಿಂದ ಸ್ಪಷ್ಟಪಡಿಸಿಕೊಳ್ಳಬೇಕು.

ಎಲ್ಲಾ ಮಕ್ಕಳು ಅನುಕರಣೆಯಿಂದ ಮತ್ತು ತಮ್ಮ ವಯಸ್ಸಿನ ಮಕ್ಕಳೊಂದಿಗೆ ವರ್ತನೆಗಳನ್ನು ತುಂಬಾ ಬೇಗ ಕಲಿಯುತ್ತಾರೆ. ಅವರು ಚಪ್ಪಾಳೆ, ನೃತ್ಯಮಾಡುವುದು, ವ್ಯಾಯಾಮ, ಪದ್ಯಗಳನ್ನು ಉಚ್ಚರಿಸುವುದು, ಪೆನ್ಸಿಲ್ ಹಿಡಿಯುವುದು ಮತ್ತು ಲೋಟ, ಗ್ಲಾಸ್‌ಗಳಿಂದ ನೀರು ಕುಡಿಯುವುದು ಇಂತಹ ಕೌಶಲ್ಯವನ್ನು ಕಲಿಯುವುದು ಅನುಕರಣೆಯಿಂದ ಮಾತ್ರ. ಅನುಕರಣೆ ಮಕ್ಕಳಿಗೆ ತರಬೇತಿ ನೀಡುವಲ್ಲಿ ಒಂದು ಶಕ್ತಿಯುತವಾದಂತಹ ಸಲಕರಣೆ, ಇದನ್ನು ಗುಂಪಿನಲ್ಲಿ ವರ್ತನಾ ಕೌಶಲ್ಯಗಳ ಶಿಕ್ಷಣ ನೀಡಲು ಉಪಯೋಗವಾಗುತ್ತದೆ. ಆದಾಗ್ಯೂ ಮಕ್ಕಳಲ್ಲಿ ವರ್ತನಾ ದೋಷಗಳನ್ನು ಕಾಣಬಹುದು.

**06. ಸಣ್ಣ ಗುಂಪಿನ ಶಿಕ್ಷಣ :**

ಶಾಲೆಯಲ್ಲಿ ಚಿಕ್ಕದಾದ ಗುಂಪಿರಬೇಕೆಂದು ಎಲ್ಲಾ ಶಿಕ್ಷಕರ ಕನಸು. ಆದರೆ ಇದು ಯಾವಾಗಲೂ ಸಾಧ್ಯವಾಗುವುದಿಲ್ಲ. ದೊಡ್ಡ ಗುಂಪಿನ ಬೋದನೆಗೆ ಶಿಕ್ಷಕರು ತೃಪ್ತಿ ಪಡಬೇಕು. ಇಂತಹ ಸಂದರ್ಭದಲ್ಲಿ ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ಮಕ್ಕಳನ್ನು ಗುರುತಿಸುವುದು ಉತ್ತಮ. ವೈಯಕ್ತಿಕವಾಗಿ ಗಮನಹರಿಸಲು ವಿಶೇಷ ಸೌಕರ್ಯಗಳು ಕುಳಿತುಕೊಳ್ಳುವ ವ್ಯವಸ್ಥೆ ಅವಶ್ಯ. ಶಿಕ್ಷಕರಿಗೆ ಹತ್ತಿರವಾಗಿರಬೇಕು. ನಿಯತಕಾಲಿಕ ವಿಶ್ವಾಸನೀಯ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಕ್ರಮಬದ್ಧವಾಗಿ ಎಲ್ಲಾ ಶಾಲೆಗಳಲ್ಲಿ ಮತ್ತು ತರಗತಿಯಲ್ಲಿ ಕೆಲವು ಮಕ್ಕಳಿಗೆ ಅವಶ್ಯಕ. ಮನೆಯಲ್ಲಿ ತರಬೇತಿ ವಿಶೇಷ ಅಥವಾ ಹೆಚ್ಚಿನ ಶಿಕ್ಷಣ ಕೆಲವು ಮಕ್ಕಳಿಗೆ ಅವಶ್ಯಕ.

07. **ಕ್ರಿಯಾತ್ಮಕ ಕಾರ್ಯಕ್ರಮಗಳು :**

ಹೆಚ್ಚಿನ ಶೈಕ್ಷಣಿಕ ಸಮಸ್ಯೆಗಳನ್ನು ಹೊಂದಿದ ಶಾಲೆಯ ಸಾಮಾನ್ಯ ಪರಿಕ್ರಮವು ಸಹ ಕಷ್ಟವಾಗಬಹುದು. ಅವರ ವೈಯಕ್ತಿಕ ಅಗತ್ಯಕ್ಕೆ ಅಥವಾ ಕಲಿಕಾ ವೇಗಕ್ಕಕೆ ತಕ್ಕಂತಹ ವಿಷಯ ಸೂಚಿಗಳನ್ನು ಪಠ್ಯಕ್ರಮಗಳಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ. ಆದರೂ ಈ ಪಠ್ಯಕ್ರಮವನ್ನು ಅನುಸರಿಸಿ ಗರಿಷ್ಠ ೩-ಳನೇ ತರಗತಿಯವರಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಆದರೂ ಈ ಪಠ್ಯಕ್ರಮವನ್ನು ಅನುಸರಿಸಿ ಗರಿಷ್ಠ ೩-ಳನೇ ತರಗತಿಯವರಿಗೆ ಶಿಕ್ಷಣವನ್ನು ಸಾಧಿಸಬಲ್ಲರು. ಕ್ರಮಬದ್ಧ ಶಾಲಾ ವಿಷಯಗಳಾದ, ಇತಿಹಾಸ, ಭೂಗೋಳಶಾಸ್ತ್ರ, ಬೀಜಗಣಿತ, ರೇಖಾಗಣಿತ ಇತ್ಯಾದಿ ಇವುಗಳಲ್ಲದೆ ಮಕ್ಕಳ ದೈನಂದಿನ ಚಟುವಟಿಕೆಗಳ ಬಗ್ಗೆಯೂ ಸಹ ಶಿಕ್ಷಕರು ಶಾಲೆಗಳಲ್ಲಿ ಗಮನಹರಿಸಬೇಕು. ಈ ವಿಧವಾದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವುದು ಕ್ರಿಯಾತ್ಮಕ ಅಥವಾ ಕಾರ್ಯಾತ್ಮಕ ಕಾರ್ಯಕ್ರಮ ಎನ್ನಬಹುದು. ಅಂದರೆ ಮಗುವಿನ ಮನೆಯ ಅಥವಾ ಪರಿಸರಕ್ಕೆ ತಕ್ಕಂತೆ ಆತನ ದೈನಂದಿನ ಚಟುವಟಿಕೆಗಳಿಗೆ ನೇರವಾಗಿ ಉಪಯೋಗವಾಗುವಂತಹ ವಿಷಯಗಳನ್ನು ಈ ಕಾರ್ಯಕ್ರಮ ಒಳಗೊಂಡಿರುತ್ತದೆ. ಉದಾ: ಹಣದ ಕಾರ್ಯ ನಿರ್ವಹಣೆ, ಗಡಿಯಾರ ನೋಡಿ ಸಮಯ ಹೇಳುವುದು, ನೆರೆಹೊರೆಯವರ ಸ್ಥಳಗಳ ದಾರಿಯನ್ನು ಹೇಳುವುದು ಇತ್ಯಾದಿ.

**ಸೂಚಿತ ಪ್ರಕ್ರಿಯಾ ಹಂತಗಳು :**

**ಚಟುವಟಿಕೆ - 01.** ಶಿಬಿರಾರ್ಥಿಗಳಿಗೆ ವಿಶೇಷ ಅಗತ್ಯವುಳ್ಳ ಮಕ್ಕಳನ್ನಾಧರಿಸಿ ನನ್ನ ಕನಸಿನ ಶಾಲೆ ಹೇಗಿರಬೇಕೆಂಬುದನ್ನು
ಪರಿಕಲ್ಪನಾ ಯೋಜನೆ ಮಾಡಲು ಹೇಳುವುದು.

**ಚಟುವಟಿಕೆ - 02.** ಗುಂಪು ಚರ್ಚೆ: ಆ ಕನಸಿನ ಶಾಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಯಾವ ತೆರನಾದ ಬೆಂಬಲ
ಕೊಡುವಿರಿ ? ಪ್ರಸ್ತುತಿ ಪಡಿಸಿ.

## ಮೌಲ್ಯಮಾಪನ ಪ್ರಶ್ನೆಗಳು

1. **ಶಾಲಾ ಶಿಕ್ಷಣವು ವಿವಿಧ ವೃತ್ತಿಗಳ ಕುರಿತು ಅನುಭವವನ್ನು ಮಾಡುವ ಉದ್ದೇಶ**

   ಎ) ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದು ಬಿ) ನಿರುದ್ಯೋಗಿಗಳಾಗದೆ ಸ್ವಉದ್ಯೋಗ ಮಾಡುವುದು

   ಸಿ) ಸ್ವತಂತ್ರ ಜೀವನ ನಡೆಸುವಂತಹ ಕೌಶಲ ಬೆಳೆಸುವುದು ಡಿ) ಮೇಲಿನ ಎಲ್ಲವುಗಳು

2. **ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಶಾಲೆಗಳು ಮಾಡಬೇಕಾದ ಕಾರ್ಯಗಳು**

   ಎ) ಶಾಲೆಯಲ್ಲಿ ಸ್ವತಂತ್ರವಾಗಿ ಕಲಿಯಲು ಸಾಧನೋಪಕರಣಗಳನ್ನು ಒದಗಿಸುವುದು

   ಬಿ) ಶೌಚಾಲಯವು ಶಾಲೆಯ ಒಳಗಿದ್ದು ವಿಶೇಷ ಅಗತ್ಯತೆ ಉಳ್ಳ ಮಕ್ಕಳು ಬಳಸುವಂತಿರಬೇಕು

   ಸಿ) ಕುಡಿಯುವ ನೀರು ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸುಲಭವಾಗಿ ದೊರಕುವಂತಿರಬೇಕು

   ಡಿ) ಮೇಲಿನ ಎಲ್ಲವುಗಳು

3. **ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು ನಿರ್ವಹಿಸಬೇಕಾದ ಕಾರ್ಯಗಳು**

   ಎ) ತಾಲೂಕಿನಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸುವುದು

   ಬಿ) ತಾಲೂಕ ಮಟ್ಟದ ವಾರ್ಷಿಕ ಪಂಚಾಂಗವನ್ನು ಸಿದ್ಧಪಡಿಸುವುದು

   ಸಿ) ಗೃಹ ಆಧಾರಿತ ಶಿಕ್ಷಣದಲ್ಲಿ ಪೋಷಕರಿಗೆ ನೀಡಬಹುದಾದ ಸಬಲೀಕರಣ ಯೋಜನೆ ಸಿದ್ಧಪಡಿಸುವುದು

   ಡಿ) ಮೇಲಿನ ಎಲ್ಲವುಗಳು

4. **ಈ ಕೆಳಗಿನ ಹೇಳಿಕೆಗಳಲ್ಲಿ ಸಮಂಜಸ ವಿಲ್ಲದ್ದು**

   ಎ) ಮಗುವಿನಲ್ಲಿ ಇರುವ ಶೈಕ್ಷಣಿಕ ಮಿತಿಯನ್ನು ಸಮರ್ಪಕವಾಗಿ ಅರಿಯುವುದು

   ಬಿ) ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಮಾತನಾಡಲು ಅವಕಾಶ ಇರುವುದು

   ಸಿ) ಒಳ್ಳೆಯ ಉದ್ದೇಶವಿದ್ದರೆ ಮಕ್ಕಳ ನಡುವೆ ಹೋಲಿಕೆ ಮಾಡಬೇಕು

   ಡಿ) ಕಲಿಕೆ ಬೋಧನೆಯಲ್ಲಿ ಒತ್ತಡವಿರಬಾರದು

## ಅಧ್ಯಾಯ – ೪

## ಕಲಿಕೆಯ ಹೊಂದಾಣಿಕೆ ಮತ್ತು ಸಂಪನ್ಮೂಲ ಬೆಂಬಲ

ವಿಶೇಷ ಅಗತ್ಯತೆಯುಳ್ಳ ಮಕ್ಕಳೂ ಸೇರಿದಂತೆ ಇತರ ಎಲ್ಲಾ ಮಕ್ಕಳ ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಸಾಮಾನ್ಯ ಪಠ್ಯಕ್ರಮವನ್ನು ಹೊಂದಿಸಿಕೊಂಡು ಶಾಲೆಯಲ್ಲಿ ನಿಗದಿಪಡಿಸಿರುವ ಎಲ್ಲಾ ವಿಷಯಗಳನ್ನು ಹಂತ ಹಂತವಾಗಿ ಕಲಿಸಬೇಕು. ಸಾಧ್ಯವಿರುವ ಎಲ್ಲಾ ಮಾರ್ಗಗಳನ್ನು ಅಳವಡಿಸಿಕೊಂಡು, ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಗರಿಷ್ಠ ಪ್ರಮಾಣದಲ್ಲಿ ಕಲಿಕೆಗೆ ಅವಕಾಶ ಮಾಡಿಕೊಡುವುದಕ್ಕೆ ಪಠ್ಯಕ್ರಮ ಹೊಂದಾಣಿಕೆ ಎನ್ನುತ್ತೇವೆ.

ಪಠ್ಯಕ್ರಮವನ್ನು ಯೋಜಿಸುವಾಗ ಪ್ರತಿಯೊಂದು ಮಗುವಿನ ಸ್ವಭಾವ, ಕಲಿಕಾ ಸಾಮರ್ಥ್ಯ ಹಾಗೂ ಅವರಲ್ಲಿನ ಮಿತಿಗಳನ್ನು ಗಣನೆಗೆ ತೆಗೆದುಕೊಂಡು ಅವರ ಅಗತ್ಯಗಳಿಗನುಗುಣವಾಗಿ ಕಲಿಸುವ ಕ್ರಮದಲ್ಲಿ ಹೊಂದಾಣಿಕೆ ಮಾಡಬೇಕು. ಈ ರೀತಿ ಹೊಂದಿಸುವಾಗ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕಾಗಿರುತ್ತದೆ. ಇನ್ನು ಕೆಲವು ಸಾರಿ ಒಂದು ಚಟುವಟಿಕೆಯ ಜೊತೆಗೆ ಮತ್ತೊಂದನ್ನು ಜೋಡಿಸಬೇಕಾಗುತ್ತದೆ. ಈ ಚಟುವಟಿಕೆಗಳು ವಿಶೇಷ ಅಗತ್ಯತೆಯುಳ್ಳ ಮಕ್ಕಳಲ್ಲಿನ ಸಮಸ್ಯೆಯ ತೀವ್ರತೆಗೆ ಅನುಗುಣವಾಗಿ ಸಂಘಟಿತಗೊಳ್ಳಬೇಕು. ಪರಿಹಾರ ಬೋಧನೆ ಈ ನೇರದಲ್ಲಿ ಉಪಯೋಗವಾಗುವ ಪ್ರಮುಖ ಚಟುವಟಿಕೆಯಾಗಿದೆ. ಗತ್ಯಂತರವಿಲ್ಲವೆಂದಾಗ ಮಾತ್ರ ಕೆಲವು ಚಟುವಟಿಕೆಗಳನ್ನು ಕೈ ಬಿಡಬಹುದು.


- **ಮಾರ್ಪಡಿಸುವುದು ಅಥವಾ ಹೊಂದಾಣಿಕೆ :** ಕೆಲವೊಮ್ಮೆ ಮಗುವಿನ ನಿರ್ದಿಷ್ಟ ಕಾರ್ಯ ನಿರ್ವಹಣಾ ಮಿತಿಗನುಗುಣವಾಗಿ ಕಲಿಕಾ ಸಾಮಗ್ರಿಗಳನ್ನು ಮಾರ್ಪಡಿಸಬೇಕಾಗುತ್ತದೆ.
  **ಉದಾ:** ಭೂಪಟಗಳನ್ನು ಉಪಯೋಗಿಸಿ ಪಾಠ ಮಾಡುವಾಗ ತರಗತಿಯಲ್ಲಿ ಅಂಧ ವಿದ್ಯಾರ್ಥಿ ಇದ್ದಾಗ ಸ್ಪರ್ಶ ಜ್ಞಾನದಿಂದ ತಿಳಿಯಲು ಅನುಕೂಲವಾಗುವಂತಹ ಉಬ್ಬಿದ ಭೂಪಟಗಳನ್ನು ಉಪಯೋಗಿಸಬೇಕು. ಹಾಗೇ ಉಬ್ಬು ಚಿತ್ರಗಳು, ನೈಜ ವಸ್ತುಗಳು, ಕ್ಷೇತ್ರ ದರ್ಶನ ಇತ್ಯಾದಿಗಳನ್ನು ಉಪಯೋಗಿಸುವುದು ಅತ್ಯವಶ್ಯ.

- **ಬದಲಾಯಿಸುವುದು :** ಮಗುವಿನ ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಸೂಕ್ತ ರೀತಿಯಲ್ಲಿ ಮಾರ್ಪಾಡು ಸಾಧ್ಯವಾಗದೆ ಹೋದಾಗ ಕೆಲವು ಸಾರಿ ಒಂದಕ್ಕೆ ಬದಲಾಗಿ ಮತ್ತೊಂದನ್ನು ಕಲಿಸಬೇಕಾಗುತ್ತದೆ. **ಉದಾ:** ಉನ್ನತ ತರಗತಿಗಳಿಗೆ ಹೋಗುತ್ತಿದ್ದ ಹಾಗೆ ಅಂಧ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯ ಕಲಿಯಲು ಕಷ್ಟವೆನಿಸಿದರೆ ಅದಕ್ಕೆ ಬದಲಾಗಿ ಕಲಾ ವಿಷಯಗಳನ್ನು ತೆಗೆದುಕೊಂಡು ಓದಬಹುದು. (ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ)


- **ಬಿಟ್ಟುಬಿಡುವುದು :** ಕೆಲವು ವಿಶೇಷ ಅಗತ್ಯತೆಯುಳ್ಳ ಮಕ್ಕಳ ನಿರ್ದಿಷ್ಟ ಕಾರ್ಯ ನಿರ್ವಹಣಾ ಮಿತಿಗನುಗುಣವಾಗಿ ಸಾಮಾನ್ಯ ಪಠ್ಯಕ್ರಮದ ಕೆಲ ಭಾಗಗಳನ್ನು ಹಾಗೂ ಕೆಲವು ವಿಷಯಗಳನ್ನು ಏನೂ ಗತ್ಯಂತರವೇ ಇಲ್ಲವೆಂದಾಗ ಮಾತ್ರ ಬಿಟ್ಟುಬಿಡಬಹುದು.
  **ಉದಾ :** ಅಂಧ ಮಕ್ಕಳಿಂದ ಬಣ್ಣಗಳನ್ನು ಗುರುತಿಸುವಂತೆ ಕೇಳಲಾಗದು. ಕೆಲ ಶ್ರವಣದೋಷವುಳ್ಳ ಮಕ್ಕಳಿಗೆ ದ್ವಿತೀಯ ಮತ್ತು ತೃತೀಯ ಭಾಷಾ ವಿಷಯಗಳನ್ನು ಕಡ್ಡಾಯವಾಗಿ ಕಲಿಯುವಂತೆ ಒತ್ತಾಯಿಸಲಾಗದು ಇತ್ಯಾದಿ. (ನೋಡಿ ಲಗತ್ತಿಕೆಗಳು)

- **ಪರಿಹಾರ ನೀಡುವುದು :** ಸಾಮಾನ್ಯ ಪಠ್ಯಕ್ರಮವನ್ನು ಕಲಿಯಲು ಕೆಲವೊಂದು ಮೂಲಭೂತ ಕೌಶಲಗಳ ಅಗತ್ಯವಿದೆ. ಆದ್ದರಿಂದ ಕೆಲವು ತೀವ್ರ ತರಹದ ಇಂದ್ರಿಯ ಅಥವಾ ಬುದ್ಧಿಶಕ್ತಿ ಸಮಸ್ಯೆಯುಳ್ಳ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅಗತ್ಯವಿರುವ ಕೌಶಲಗಳನ್ನು ಕಲಿಸಬೇಕಾಗುತ್ತದೆ. ಇದನ್ನು ಪರಿಹಾರಾತ್ಮಕ ಕೌಶಲಗಳು ಎನ್ನಲಾಗುತ್ತದೆ. ವಿಶೇಷ ಪಠ್ಯಕ್ರಮ ಅಥವಾ ಅಧಿಕ/ಹೆಚ್ಚುವರಿ ಪಠ್ಯಕ್ರಮ ಅಥವಾ ಬುದ್ಧಿ/ಇಂದ್ರಿಯ ದೋಷಗಳಿಂದ ಹೊರಬರುವುದು ಎಂಬ ಪರಿಕಲ್ಪನೆಗಳು ಇಲ್ಲಿ ಸೇರುತ್ತವೆ.


**ಸಮನ್ವಯ / ಅಂತರ್ಗತದ ಪರಿಕಲ್ಪನೆ:**




**ಹೊರಗಿಡುವಿಕೆ (Exclusion) :** ವಿಕಲಾಂಗ ವಿದ್ಯಾರ್ಥಿಗಳಿಗೆ ಯಾವುದೇ ರೂಪದಲ್ಲಿ ಶಿಕ್ಷಣದ ಪ್ರವೇಶವನ್ನು ನಿರಾಕರಿಸಲಾಗುತ್ತದೆ.



**ಏಕೀಕರಣ ( Integration) :** ಅಂಗವಿಕಲ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಯ ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳದೆ ಇರಿಸುವುದು ಮತ್ತು ವಿದ್ಯಾರ್ಥಿಯು ಹೊಂದಿಕೊಳ್ಳಲು ಅಗತ್ಯಪಡಿಸುವುದು.



**ಪ್ರತ್ಯೇಕತೆ ( Segregation):** ವಿಕಲಾಂಗ ವಿದ್ಯಾರ್ಥಿಗಳ ಶಿಕ್ಷಣವು ನಿರ್ದಿಷ್ಟ ವಿಕಲಾಂಗತೆಗಾಗಿ ವಿನ್ಯಾಸಗೊಳಿಸಲಾದ ಪರಿಸರದಲ್ಲಿ ಮತ್ತು ವಿಕಲಾಂಗತೆ ಇಲ್ಲದ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ಒದಗಿಸಲಾದ ಶಿಕ್ಷಣವಾಗಿದೆ.



**ಸಮನ್ವಯ :(inclusive) :** ವಿನ್ಯಾಸ ಮತ್ತು ಭೌತಿಕ ರಚನೆಗಳು, ಬೋಧನಾ ವಿಧಾನಗಳು ಮತ್ತು ಪಠ್ಯಕ್ರಮದ ಜೊತೆಗೆ ಸಂಸ್ಕೃತಿ, ನೀತಿ ಮತ್ತು ಅಭ್ಯಾಸವನ್ನು ಅಳವಡಿಸಿಕೊಳ್ಳುವ ಶೈಕ್ಷಣಿಕ ವಾತಾವರಣವು ತಾರತಮ್ಯವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶಿಸಬಹುದಾಗಿದೆ. ಈ ಅಳವಡಿಕೆಗಳಿಲ್ಲದೆ ಮುಖ್ಯವಾಹಿನಿಯ ತರಗತಿಗಳಲ್ಲಿ ವಿಕಲಾಂಗ ವಿದ್ಯಾರ್ಥಿಗಳನ್ನು ಇರಿಸುವುದು ಸೇರ್ಪಡೆಯಾಗುವುದಿಲ್ಲ.

ಆಧಾರ : Fourth wave foundation Indian social institute Bengaluru. Page no-32,33

| | |
|---|---|
| **ಉದಾ :** ಓದಲು, ಬರೆಯಲು - ಬ್ರೈಲ್ ಲಿಪಿ<br>ಗಣಿತ ಕಲಿಯಲು – ಅಬ್ಯಾಕಸ್ ಮತ್ತು ಟೇಲರ್ ಪ್ರೇಮ್ ಬಳಕೆ<br>ಸ್ವತಂತ್ರವಾಗಿ ಒಡಾಡಲು – ಚಲನವಲನ ಕೌಶಲ | ಅಂಧ ವಿದ್ಯಾರ್ಥಿಗಳಿಗೆ |
| ಪೂರ್ಣ ಸಂವಹನ ಕೌಶಲ<br>ಶ್ರವಣ ತರಬೇತಿ, ಭಾಷಾ ಬೆಳವಣಿಗೆ ಇತ್ಯಾದಿ | ಶ್ರವಣದೋಷವಿರುವ ವಿದ್ಯಾರ್ಥಿಗಳಿಗೆ |
| ದಿನನಿತ್ಯ ಜೀವನಕ್ಕೆ ಅಗತ್ಯವಿರುವ<br>ದಿನನಿತ್ಯ ಚಟುವಟಿಕಾ ಕೌಶಲಗಳು<br>(ಭಾಷೆ, ಗಣಿತ, ಸಾಮಾಜಿಕ ಕೌಶಲಗಳು ಇತ್ಯಾದಿ) | ಬುದ್ಧಿದೋಷವಿರುವ ವಿದ್ಯಾರ್ಥಿಗಳಿಗೆ |
| ಪರಿಹಾರಾತ್ಮಕ ಬೋಧನೆ<br>(ಓದು, ಬರಹ, ಗಣಿತ ಇತ್ಯಾದಿ) | ಕಲಿಕಾದೋಷದ ವಿದ್ಯಾರ್ಥಿಗಳಿಗೆ |
| ಸೂಕ್ತ ಸಾಧನೋಪಕರಣಗಳು ಮತ್ತು ಅಂಗಚಿಕಿತ್ಸೆ<br>(ಫಿಸಿಯೋ ತೆರೆಪಿ) ವ್ಯವಸ್ಥೆ<br>ಮುಂಜಾಗ್ರತಾ ಕ್ರಮ – ವೈದ್ಯಕೀಯ ತಪಾಸಣೆ | ಚಲನಾಂಗ ದೋಷವುಳ್ಳ ಮಕ್ಕಳಿಗೆ |
| ಚಿಕಿತ್ಸೆ ಮತ್ತು ಅನುಸರಣೆ ಮಾಡುವ ಅಗತ್ಯವಿದೆ.<br>ಉದಾ: ಅಪಸ್ಮಾರ, ಅಸ್ತಮಾ, ಮಧುಮೇಹ,<br>(ಕ್ಷಯ ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಗಳು ) | ಆರೋಗ್ಯ ಸಮಸ್ಯೆ ಇರುವ ಮಕ್ಕಳಿಗೆ |

ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅಗತ್ಯವಿರುವ ಈ ಮೇಲಿನ ಪರಿಹಾರಾತ್ಮಕ ಕೌಶಲಗಳನ್ನು ಕಲಿಸಲು ವಿಶೇಷ ಸಂಘ ಸಂಸ್ಥೆಗಳ ಸಹಕಾರ ಮತ್ತು ಸಹಯೋಗದ ಅಗತ್ಯವಿದೆ. ಇಂತಹ ಸೌಲಭ್ಯಗಳನ್ನು ಸಂಪನ್ಮೂಲ ಶಿಕ್ಷಕ ಅಥವಾ ತರಬೇತಿ ಪಡೆದ ಶಿಕ್ಷಕ ವಿಕಲಚೇತನ ಮಕ್ಕಳ ಕಲಿಕೆಗೆ ನೆರವಾಗುವಂತೆ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಅನುಸರಿಸಬೇಕು. ಈ ಕಾರಣದಿಂದ ನಮ್ಮ ಎಲ್ಲಾ ಶಾಲೆಗಳಿಗೂ ಸಂಪನ್ಮೂಲ ಬೆಂಬಲ ವ್ಯವಸ್ಥೆ ಮಾಡಿಕೊಳ್ಳವುದು ಅತ್ಯವಶ್ಯ. ಅಂದರೆ ಸಮನ್ವಯ ಶಿಕ್ಷಣದ ಯಶಸ್ಸಿಗೆ ಸಮಾಜದ ಎಲ್ಲಾ ಸ್ತರಗಳಿಂದ ಬೆಂಬಲ ಪಡೆಯುವ ಅಗತ್ಯವಿದೆ. ಇವರೆಲ್ಲರ ಬೆಂಬಲ ಸಿಕ್ಕಾಗಲೇ ಎಲ್ಲಾ ಮಕ್ಕಳಿಗೂ ಅರ್ಥಪೂರ್ಣ ಶಿಕ್ಷಣವನ್ನು ನೀಡಲು ಸಾಧ್ಯವಾಗುತ್ತದೆ. ವಿಶೇಷ ಅಗತ್ಯತೆಯುಳ್ಳ ಮಕ್ಕಳಿರುವ ತರಗತಿಗಳನ್ನು ನಿರ್ವಹಣೆ ಮಾಡುವುದು ಪಠ್ಯಕ್ರಮ ಹೊಂದಾಣಿಕೆಗೆ ಪೂರಕವಾಗುತ್ತದೆ. ಇದು ಅತ್ಯವಶ್ಯ ಕೂಡಾ.

## ತರಗತಿಯ ನಿರ್ವಹಣೆ

ಮಗು ಅನೇಕ ವಿಷಯಗಳನ್ನು ತಾನಾಗಿಯೇ ಕಲಿಯುತ್ತದೆ. ಅದಕ್ಕೆ ಕಲಿಯುವ ವಾತಾವರಣ ಕಲ್ಪಿಸಿಕೊಡುವುದು ಶಿಕ್ಷಕರ ಜವಾಬ್ದಾರಿ. ವಾತಾವರಣ ನಿರ್ಮಾಣದಲ್ಲಿ ತರಗತಿ ನಿರ್ವಹಣೆ ಬಹುಮುಖ್ಯ ಅಂಶ. ಅದರಲ್ಲೂ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸೇರಿಸಿ ಸಮನ್ವಯ ಕಲಿಕೆ ಅಳವಡಿಸಿಕೊಂಡಾಗ ತರಗತಿ ನಿರ್ವಹಣೆ ಒಂದು ಸವಾಲಾಗುತ್ತದೆ. ಹಾಗಾಗಿ ಶಿಕ್ಷಕ/ಕಿ ತುಂಬಾ ಜಾಗರೂಕರಾಗಿ ಜವಾಬ್ದಾರಿಯಿಂದ ಸಮನ್ವಯ ಶಿಕ್ಷಣ ತರಗತಿ ನಿರ್ವಹಿಸಬೇಕಾಗುತ್ತದೆ. ಉತ್ತಮ ನಿರ್ವಹಣೆಗಾಗಿ ಕೆಲವು ಸಲಹೆಗಳನ್ನು ಮುಂದೆ ನೀಡಿದೆ.

- ಸಂಪೂರ್ಣ ದೃಷ್ಟಿದೋಷವಿರುವ ಮಕ್ಕಳನ್ನು ನಿಮ್ಮ ಹತ್ತಿರ ಕೂರಿಸಿಕೊಳ್ಳಿ. ಇದರಿಂದ ಆ ಮಕ್ಕಳಿಗೆ ನಿಮ್ಮ ಮಾತು ಸ್ಪಷ್ಟವಾಗಿ ಕೇಳಿಸುತ್ತದೆ. ಅವರಿಗೆ ಬರೆದುಕೊಳ್ಳಲು ಅನುಕೂಲವಾಗುತ್ತದೆ.
- ಶ್ರವಣದೋಷವಿರುವ ಮಕ್ಕಳನ್ನು ನಿಮ್ಮ ಮುಖಭಾವ, ತುಟಿ ಚಲನೆ ಕಾಣುವಷ್ಟು ದೂರದಲ್ಲಿ, (ಅಂದರೆ ತುಂಬಾ ಸಮೀಪ) ಕೂಡಿಸಿ.
- ಸಮೀಪ/ದೂರ ದೃಷ್ಟಿ ಇರುವ ಮಕ್ಕಳನ್ನು ಅವರ ಅಗತ್ಯಕ್ಕೆ ತಕ್ಕಂತೆ ಕೂರಿಸಿ.
- ದೈಹಿಕ ನ್ಯೂನ್ಯತೆ ಇರುವವರಿಗೆ ಅವರ ಅನುಕೂಲಕ್ಕೆ ತಕ್ಕಂತೆ ಆರಾಮವಾಗಿ ಕೂರಲು ಅವಕಾಶ ನೀಡಿ.
- ವೃತ್ತಾಕಾರದಲ್ಲಿ ನಿಂತಾಗ ವಿಶೇಷ ಅಗತ್ಯತೆಯುಳ್ಳ ಮಕ್ಕಳೂ ಸೇರಿದಂತೆ ಎಲ್ಲರನ್ನು ವೃತ್ತದಲ್ಲಿ ನಿಲ್ಲಿಸಿ.
- ಈ ಮಕ್ಕಳಿಗೆ ಚಟುವಟಿಕೆ ಮಾಡಲು ಪ್ರಾಮುಖ್ಯತೆ ನೀಡಿ. ನಿಧಾನ ಮಾಡಿದರೂ ತಾಳ್ಮೆಯಿಂದ ಪ್ರೋತ್ಸಾಹಿಸಿ.
- ಪ್ರಶ್ನೆಗಳನ್ನು ವಿಶೇಷ ಅಗತ್ಯವುಳ್ಳವರಿಗೆ ಹೆಚ್ಚು ಪ್ರಶ್ನೆಗಳನ್ನು ಕೇಳಿ. ನಿಧಾನವಾಗಿ ಉತ್ತರಿಸಲು ಅವಕಾಶ ನೀಡಿ. ಸ್ವಲ್ಪಭಾಗ ಉತ್ತರ ನೀಡಿದರೂ ಪ್ರಶಂಸಿಸಿ.
- ವ್ಹೀಲ್‌ಚೇರ್, ಟ್ರೈಸಿಕಲ್, ಕ್ಯಾಲಿಫರ್ಸ್, ಊರುಗೋಲು ಸಹಾಯದಿಂದ ಬರುವ ಮಕ್ಕಳ ಉಪಕರಣವನ್ನೂ ಅವಶ್ಯವಿದ್ದಲ್ಲಿ ತರಗತಿ ಒಳಗೆ ತರಲಿ, ಮಕ್ಕಳಿಗೆ ತೊಂದರೆ ಆಗದಂತೆ ಉಪಕರಣಗಳನ್ನು ಇಡಿಸಿ.
- ಬುದ್ಧಿದೋಷವುಳ್ಳವರಿಗೆ ವೈಯಕ್ತಿಕ ಗಮನ ನೀಡಿ. ನಿಧಾನವಾಗಿ, ಸ್ಪಷ್ಟವಾಗಿ, ಚಿಕ್ಕ ಚಿಕ್ಕ ಪದ ಬಳಸಿ ವಿಷಯವನ್ನು ಪುನರಾವರ್ತನೆ ಮಾಡಿ. ಅವರು ಉತ್ತರಿಸಲು ಹೆಚ್ಚು ಅವಕಾಶ ನೀಡಿ. ಸ್ವಲ್ಪಭಾಗ ಉತ್ತರ ನೀಡಿದರೂ ಪ್ರಶಂಸಿಸಿ.
- ಈ ಮಕ್ಕಳನ್ನು ಕಲಿಕೆಯಲ್ಲಿ ಮುಂದಿರುವ ಮತ್ತು ಸಹಾನುಭೂತಿಯನ್ನು ಹೊಂದಿರುವ ಮಗುವಿನ ಪಕ್ಕದಲ್ಲಿ ಕೂರಿಸಿ, ನೆರವಾಗಲು ಸಲಹೆ ನೀಡಿ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳು ಬಳಸುವ ಸಾಧನೋಪಕರಣಗಳ ಪ್ರಾಮುಖ್ಯತೆಯನ್ನು ತರಗತಿಯ ಇತರೆ ಮಕ್ಕಳಿಗೆ ತಿಳಿಸಿ. ಉದಾ: ಶ್ರವಣೋಪಕರಣ, ಮ್ಯಾಗ್ನಿಫೈಯರ್ ಗ್ಲಾಸ್, ಕ್ಯಾಲಿಫರ್ಸ್, ಇತ್ಯಾದಿ. ಮತ್ತು ಸೌಹಾರ್ದಯುತವಾಗಿ ವರ್ತಿಸಲು ಮಾರ್ಗದರ್ಶನ ನೀಡಿ.
- ಸಾಧ್ಯವಾದಷ್ಟೂ ಸಹಜ ಬೆಳಕನ್ನು ಒದಗಿಸಿ.

**ಉದಾ :**

1. ನೋಡಲು ತೊಂದರೆ ಇರುವ ಮಕ್ಕಳಿದ್ದಾಗ ಪ್ರಖರ ಬೆಳಕು ಮಗುವಿನ ಮುಖದ ಮೇಲೆ, ಕಪ್ಪು ಹಲಗೆಯ ಮೇಲೆ, ಪುಸ್ತಕದ ಮೇಲೆ ಬೀಳದಂತೆ ನೋಡಿಕೊಳ್ಳಿ.
2. ನೋಡಲು ಸ್ವಲ್ಪ ಮಟ್ಟಿನ ತೊಂದರೆ ಇರುವವರನ್ನು ಹೆಚ್ಚು ಬೆಳಕು ಇರುವಲ್ಲಿ ಕೂರಿಸಿ.
3. ಕೇಳಿಸಿಕೊಳ್ಳಲು ತೊಂದರೆ ಇರುವ ಮಕ್ಕಳಿದ್ದಾಗ ಶಿಕ್ಷಕರ ಮುಖಭಾವ, ತುಟಿಯ ಚಲನೆಯನ್ನು ಗಮನಿಸಲು ಸಾಧ್ಯವಾಗುವಂತೆ ಬೆಳಕು ಮುಖದ ಮೇಲೆ ಬೀಳಲಿ.

- ಓದುವಾಗ ಶಿಕ್ಷಕರು ಪುಸ್ತಕವನ್ನು ತಮ್ಮ ಮುಖಕ್ಕೆ ಅಡ್ಡವಾಗಿ ಹಿಡಿಯಬೇಡಿ. ಎಲ್ಲರಿಗೂ ಕಾಣುವಂತಹ ಒಂದೇ ಜಾಗದಲ್ಲಿ ನಿಂತು ಓದುವುದು ಒಳ್ಳೆಯದು. ಇದರಿಂದ ಶ್ರವಣದೋಷವುಳ್ಳ ಮಗು ತುಟಿಚಲನೆಯನ್ನು ಸುಲಭವಾಗಿ ಗುರುತಿಸುತ್ತದೆ.
- ಕಪ್ಪು ಹಲಗೆಯ ಮೇಲೆ ಬರೆದಿದ್ದನ್ನು ತರಗತಿಗೆ ಅಭಿಮುಖವಾಗಿ ವಿವರಿಸಬೇಕು. ಅಧ್ಯಾಪಕ ಒಂದು ಬದಿಯಲ್ಲಿ ನಿಂತು ವಿವರಿಸಬೇಕು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅನುಕೂಲವಾಗುವಂತೆ ಬಣ್ಣದ ಸೀಮೆಸುಣ್ಣಗಳನ್ನು ಬಳಸಿ. ನೋಡಲು ಸ್ವಲ್ಪಮಟ್ಟಿನ ತೊಂದರೆ ಇರುವ ಮಕ್ಕಳಿದ್ದಾಗ ಕಪ್ಪುಹಲಗೆಯ ಮೇಲೆ ಹಳದಿ ಸೀಮೆಸುಣ್ಣ ಬಳಸಿ.
- ಇಂತಹ ವೇಳೆ ಬಳಸುವ ಕಲಿಕೋಪಕರಣಗಳು ಬಣ್ಣಗಳಿಂದ ಕೂಡಿದ್ದು, ಆಕರ್ಷಕವಾಗಿರಲಿ. ಆಕರ್ಷಕ ಕಲಿಕೋಪಕರಣಗಳು ಬುದ್ಧಿಮಾಂದ್ಯ ಮಕ್ಕಳನ್ನು ಸೆಳೆಯುತ್ತವೆ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ತರಗತಿ ಚಟುವಟಿಕೆಯಲ್ಲಿ ಭಾಗವಹಿಸುವ ಸಮಯದಲ್ಲಿ ಹೆಚ್ಚಿನ ಅವಕಾಶ ನೀಡಿ.
- ಮಗುವಿನಲ್ಲಿರುವ ಪ್ರತಿಭೆ ಅಥವಾ ಕೌಶಲಗಳನ್ನು ಗುರುತಿಸಿ, ಉಪಯೋಗಿಸಲು ಅವಕಾಶ ಮಾಡಿಕೊಡಿ. ಈ ಮಕ್ಕಳನ್ನು ಹಿರೇಮಣಿ ಮಾಡಬಹುದು.
- ಶ್ರವಣದೋಷ ಬುದ್ಧಿದೋಷದ ಮಕ್ಕಳಿಗೆ ತುಟಿ ಚಲನೆ, ಆಂಗಿಕ ಅಭಿನಯದೊಂದಿಗೆ ನಿಧಾನವಾಗಿ ಪದೇ ಪದೆ ಹೇಳಿ ಮತ್ತು ನಿಮ್ಮನ್ನು ಗಮನಿಸಲು ಸೂಚನೆ ನೀಡಿ.

## ಅಧ್ಯಾಪಕರ ಮನೋಭಾವ ಮತ್ತು ತರಗತಿಯಲ್ಲಿ ಸಂವಹನ

- ಎಲ್ಲ ಮಕ್ಕಳ ಬಗ್ಗೆ ಗೌರವ ಭಾವನೆ, ಧನಾತ್ಮಕ ಮನೋಭಾವ ಹೊಂದಿರಬೇಕು. ಸೌಹಾರ್ದತೆಯಿಂದ ವರ್ತಿಸಬೇಕು.
- ಮಗುವಿನ ತಪ್ಪನ್ನು ಎತ್ತಿಹಿಡಿಯುವುದಕ್ಕೆ ಬದಲಾಗಿ ಆ ಕಾರ್ಯವನ್ನು ಕಲಿಕೆಯನ್ನು ಹೇಗೆ ಸಾಧಿಸಬಹುದಿತ್ತೆಂಬುದನ್ನು ಮನವರಿಕೆ ಮಾಡಿಸಬೇಕು.
- ತರಗತಿಯಲ್ಲಿ ಕಲಿಕೆಗೆ ಸಂತಸದ ವಾತಾವರಣ ನಿರ್ಮಾಣ ಮಾಡಬೇಕು.
- ಮಕ್ಕಳಿಗೆ ಪ್ರಶ್ನೆ ಕೇಳಿ ಉತ್ತರ ಪಡೆಯಬೇಕು. ಮಕ್ಕಳ ಹಿಂಜರಿಕೆ, ಸಂಕುಚಿತ ಮನೋಭಾವಗಳನ್ನು ಹೋಗಲಾಡಿಸಿ ಅವರು ನಿರ್ಭಿಡೆಯಿಂದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವಂತಹ ಮಧುರವಾದ ಸಂಬಂಧವನ್ನು ಇಟ್ಟುಕೊಳ್ಳಬೇಕು.
- ಮಕ್ಕಳ ಜೊತೆ ಕುಳಿತುಕೊಂಡು ಆತ್ಮೀಯವಾಗಿ ಸಂಭಾಷಿಸಬೇಕು, ಸ್ನೇಹಿತರಂತೆ ವರ್ತಿಸಬೇಕು.

- ಈ ಮೂಲಕ ಅವರ ಅಭಿಪ್ರಾಯ, ಅನಿಸಿಕೆಗಳನ್ನು ಸಹನೆಯಿಂದ ಕೇಳಿ ತಿಳಿದುಕೊಳ್ಳಬೇಕು. ಪ್ರಶ್ನೆ ಕೇಳಲು ಮಗುವನ್ನು ಪ್ರೋತ್ಸಾಹಿಸಬೇಕು.
- ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಸಮಸ್ಯೆ ತಲೆದೋರಿದಾಗ ಮಾರ್ಗದರ್ಶನ ಮಾಡಬೇಕು.
- ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳನ್ನು ಆಗಾಗ್ಗೆ ಏರ್ಪಡಿಸಿ, ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿದರೆ ವಿದ್ಯಾರ್ಥಿಗಳು ಉತ್ಸಾಹದಿಂದ ಕಲಿಕೆಯಲ್ಲಿ ತೊಡಿಗಿಕೊಳ್ಳುತ್ತಾರೆ.
- ವೈಯಕ್ತಿಕ ಗಮನ ನೀಡಿ.
- ನಿಂದಿಸಬೇಡಿ-ಶಿಕ್ಷಿಸಬೇಡಿ-ಅಡ್ಡ ಹೆಸರಿನಿಂದ ಕರೆಯಬೇಡಿ-ತಾರತಮ್ಯ ಮಾಡಬೇಡಿ.
- ನಿಮ್ಮ ವರ್ತನೆ ಮಗುವಿಗೆ-ತನ್ನ ಕಲಿಕೆಯಲ್ಲಿ ಭರವಸೆ ಮೂಡಿಸುವಂತಿರಲಿ.
- ನಿಧಾನವಾಗಿ-ಸ್ಪಷ್ಟವಾಗಿ-ಯುಕ್ತ ಎತ್ತರದ ಧ್ವನಿಯಲ್ಲಿ ಮಾತನಾಡಿ.
- ಕಪ್ಪುಹಲಗೆ ಬರಹವನ್ನು ಬರೆದುಕೊಳ್ಳಲು ಅವಕಾಶ ಮಾಡಿ.
- ಸಾಮಗ್ರಿಗಳನ್ನು ನಿಧಾನವಾಗಿ ನೋಡಲು-ಸ್ಪರ್ಶಿಸಲು ಅವಕಾಶ ಕೊಡಿ.
- ಕೆಂಪುಶಾಯಿ ಬಳಸಬೇಡಿ-ಇತರ ಮಕ್ಕಳೊಂದಿಗೆ ಹೋಲಿಸಬೇಡಿ.

## ಮಕ್ಕಳನ್ನು ಉತ್ತೇಜಿಸುವುದು ಹೇಗೆ?

ಮಗುವಿಗೆ ಉತ್ತೇಜನ, ಪ್ರೋತ್ಸಾಹ ನೀಡಿದಲ್ಲಿ ಅದು ಯಾವುದೇ ಕೆಲಸವನ್ನು ಮಾಡುತ್ತದೆ ಎಂಬುದು ಸಾಮಾನ್ಯ ಸಂಗತಿ. ಉತ್ತೇಜನವು ಮಾನಸಿಕವಾಗಿ ಕೆಲಸ ಮಾಡುವ ಸ್ಥೈರ್ಯವನ್ನು, ಸ್ಫೂರ್ತಿಯನ್ನು, ಛಲ ಮತ್ತು ಹಂಬಲವನ್ನು ತುಂಬುತ್ತದೆ. ಹೊಗಳಿಕೆ ಯುಕ್ತವಾಗಿರಬೇಕು. ಅತಿಯಾಗದಂತೆ ಯಾಂತ್ರಿಕವಾಗದಂತೆ ಎಚ್ಚರವಹಿಸಿ. ದೋಷವುಳ್ಳ ಮಕ್ಕಳು ಮಾಡಿದ ಕೆಲಸವನ್ನು ಗಮನಿಸಿ-ಅದನ್ನು ಅವನ/ಳ ಸಹಪಾಠಿಯ ಮೂಲಕ ಹೇಳಿಸುವ ಕೆಲಸ ಮತ್ತು ಪ್ರಶಂಸಿಸುವ ಕೆಲಸ ಮಾಡುವುದರಿಂದ ಮಗು ನಿಮ್ಮ ಹೊಗಳಿಕೆಯ ಮೇಲೆ ನಂಬಿಕೆ ಇಡುತ್ತದೆ. ಬೆಳಿಗ್ಗೆಯಿಂದ ಸಂಜೆಯವರಿಗೂ ಕಲಿಕೆಯಲ್ಲಿ ಅಥವಾ ಶಾಲಾ ಚಟುವಟಿಕೆಯಲ್ಲಿ ತೊಡಗಿರುವ ಮಗು ಕಲಿಕೆ ನಿರ್ಮಿಸುವ ಏಕತಾನತೆಯಿಂದ ವಿಮುಖಗೊಳ್ಳಲು ಹಾತೊರೆಯುತ್ತಿರುತ್ತದೆ. ಇಂತಹ ಹೊತ್ತಿನಲ್ಲೂ ಮಗುವನ್ನು ಕಲಿಕೆಯೆಡೆಗೆ ಆಕರ್ಷಿಸಲು ಈ ಕೆಳಕಂಡ ಚಟುವಟಿಕೆಗಳು ಉತ್ತೇಜನಕಾರಿಯಾಗಿವೆ.

- ಮಗುವಿಗೆ ಆಕರ್ಷಕವಾದ ಆಟವನ್ನು 5 ನಿಮಿಷಗಳ ಕಾಲ ಅಡಿಸಿ.
  ಉದಾ:ಮಾರ್ಗದರ್ಶನ ಹಿಂದೆ ರೈಲಿನಂತೆ ಓಡುವುದು. ಮನಸ್ಸಿಗೆ ಹಿತ ನೀಡುವ ಆಟಗಳು
- ಓಂಕಾರ ಧ್ವನಿಯನ್ನು ಲಯಬದ್ಧವಾಗಿ 3ಸಾರಿ ಹೇಳಿಸಿ. 3ನಿಮಿಷ ಮೌನವಾಗಿ ನಿಶ್ಚಲವಾಗಿ ಕುಳಿತುಕೊಳ್ಳಲು ತಿಳಿಸಿ ಇದರಿಂಧ ಮಕ್ಕಳಲ್ಲಿ ಹೊಸತನ ಜಾಗೃತವಾಗುತ್ತದೆ.
- ಆಯಾ ದಿನದಲ್ಲಿ ಬೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಕಂಠಪಾಠ ಮಾಡಿಸುವ ಚಟುವಟಿಕೆ ಮಾಡಿಸಿ. ಆಕರ್ಷಕ ಘಟನೆ,ಕಥೆ,ಸಮಸ್ಯೆಯೊಂದನ್ನು ಹೇಳಿ ಪಾಠ ಪ್ರಾರಂಭಿಸಿ. ಅದು ಅಂದಿನ ಪಾಠಕ್ಕೆ ಸಂಬಂಧಿಸಿರುವುದು ಯುಕ್ತ.

## ಮಕ್ಕಳೊಂದಿಗೆ ಹೇಗಿರಬೇಕು?

ಕಲಿಸಬೇಕಾದ ಕಲಿಕೆಯ ಅಂಶ/ಪರಿಕಲ್ಪನೆಗಳನ್ನು ಆದಷ್ಟು ಚಟುವಟಿಕೆಯಿಂದ ಕಲಿಯಲು ವಾತಾವರಣ ನಿರ್ಮಿಸಬೇಕು. ಕಲಿಕೆಯ ಅಂಶಗಳನ್ನು ಆಟಗಳ ಮೂಲಕ ಅದರಲ್ಲೂ ಸ್ಪರ್ಧಾತ್ಮಕ ಆಟಗಳ ಮೂಲಕ ಮಾಡಿಸಬೇಕು. ಉದಾ: ಸಜೀವಿ ನಿರ್ಜೀವಿಗಳನ್ನು ಗುರುತಿಸಿ ಮನದಟ್ಟು ಮಾಡಿಸಲು, ಸಜೀವಿ ಎಂದಾಗ ನಿಲ್ಲುವುದು. ನಿರ್ಜೀವಿ ಎಂದರೆ ಕೂರುವಂತೆ ನಿರ್ದೇಶನ ನೀಡಿ, ಆಟ ಮುಂದುವರಿಸಿ, ಸಜೀವಿ ಪದಕ್ಕೆ ಸಜೀವಿಗಳ ಹೆಸರನ್ನೂ, ನಿರ್ಜೀವಿ ಪದಕ್ಕೆ ನಿರ್ಜೀವಿಗಳು ಹೆಸರನ್ನೂ ಹೇಳಿ, ತಪ್ಪು ಮಾಡಿದವರು ಕುಳಿತುಕೊಳ್ಳಲಿ. ಇಂತಹ ಆಟಗಳಲ್ಲಿ ಮಗು ಸ್ಪರ್ಧಾತ್ಮಕವಾಗಿ ಭಾಗವಹಿಸಿ ಕಲಿಯುತ್ತದೆ.

- ಮಗುವಿನ ತಪ್ಪನ್ನು ಎತ್ತಿ ಹಿಡಿಯುವುದಕ್ಕೆ ಬದಲಾಗಿ ಆ ಕಾರ್ಯವನ್ನು ಆ ಕಲಿಕೆಯನ್ನು ಹೇಗೆ ಸಾಧಿಸಬಹುದಿತ್ತೆಂಬುದನ್ನು ಮನವರಿಕೆ ಮಾಡಿ.
- ಮಕ್ಕಳೊಂದಿಗೆ ಮಗುವಾಗಿ, ಅವರೊಂದಿಗೆ ನೀವೂ ಕಲಿಯಿರಿ.
- ನೀವು ಅಣ್ಣ, ಅಕ್ಕ, ಅಮ್ಮ, ಅಂಕಲ್ ವಿನಃ ಶಿಕ್ಷಕರೆಂಬ ಭ್ರಮೆ ಬೇಡ.
- ಪ್ರತಿ ಅರ್ಧ ಗಂಟೆಯ ನಂತರ ಮಾನಸಿಕ ವಿಶ್ರಾಂತಿ ನೀಡುವ ಚಟುವಟಿಕೆಯನ್ನು ೨ ನಿಮಿಷ ಮಾಡಿಸಿ.
- ಮಗುವನ್ನು ಪ್ರಶ್ನೆ ಕೇಳಲು ಪ್ರೋತ್ಸಾಹಿಸಿ. ಪ್ರಶ್ನೆ ಕೇಳಿ ಕಲಿತಾಗ ಕಲಿಕೆ ಹಸನಾಗುತ್ತದೆ. ಆಕರ್ಷಕವಾಗುತ್ತದೆ.
- ಮಗುವಿನ ಪ್ರಶ್ನೆಗೆ ಉತ್ತರ ಗೊತ್ತಿಲ್ಲದಿದ್ದರೆ, ಮಗುವನ್ನು ನಿರಾಸೆ ಮಾಡಬೇಡಿ ಅಥವಾ ನಿಂದಿಸಬೇಡಿ. ಉತ್ತಮ ಪ್ರಶ್ನೆಗಾಗಿ ಬೆನ್ನುತಟ್ಟಿ ಮುಂದಿನ ಅವಧಿಯಲ್ಲಿ ತಿಳಿಸುವುದಾಗಿ ಹೇಳಿ. ಬೇರೆಯವರಿಂದ ತಾವು ತಿಳಿದು ಮರೆಯದೇ ಉತ್ತರ ನೀಡಿ.
- (ಎಲ್ಲಾ ಪ್ರಶ್ನೆಗಳಿಗೂ ಎಲ್ಲರಿಗೂ ಉತ್ತರ ಗೊತ್ತಿರುವುದಿಲ್ಲ ಕೀಳರಿಮೆ ಬೇಡ)
- ಎಲ್ಲಾ ಮಕ್ಕಳೂ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನಿಸಿ ಮತ್ತು ಪ್ರೇರೇಪಿಸಿ.
- ಉತ್ತಮ ಸಾಧನೆ ಮಾಡಿದ ಮಕ್ಕಳಿಗೆ ಬಹುಮಾನ ನೀಡಿ. ಮಗುವಿಗೆ ಚಪ್ಪಾಳೆ, ಶಹಬ್ಬಾಸ್, ಪ್ರೋತ್ಸಾಹದ ನುಡಿ, ಮೊದಲಾದ ಪ್ರಶಂಸೆಗಳೇ ಬಹುಮಾನವೆಂದು ತಿಳಿಯಿರಿ. ಇಂತಹ ತಂತ್ರಗಳನ್ನು ಬಳಸಿ ಮಗುವಿನಲ್ಲಿ ತನ್ನ ಬಗ್ಗೆ ವಿಶ್ವಾಸ ಮೂಡುವಂತೆ ಮಾಡಿ.
- ಮಗುವನೆಂದೂ ನಿಂದಿಸಬೇಡಿ. ನಿಮಗೆ ಪರಿಚಿತನೆಂದು ಅಡ್ಡ ಹೆಸರಿನಿಂದ ಕರೆಯಬೇಡಿ. ಜಾತಿ ಸೂಚಕ, ಲಿಂಗಸೂಚಕವಾದ ಪದಗಳಿಂದ ಸಂಬೋಧಿಸಬೇಡಿ. ಮಕ್ಕಳ ದೈಹಿಕ ನ್ಯೂನತೆಯ ಆಧಾರದ ಮೇಲೆ ಮಗುವನ್ನು ಕರೆಯಬೇಡಿ.
- ದೈಹಿಕ, ಮಾನಸಿಕವಾಗಿ ಅಶಕ್ತರಾಗಿರುವ ಮಕ್ಕಳನ್ನು ವಿಶೇಷ ಆತ್ಮೀಯತೆಯಿಂದ ಮಾತನಾಡಿಸಿ. ಕುರ್ಚಿಯನ್ನು ಬಳಸದೆ ಮಗುವಿನೊಂದಿಗೆ ಕುಳಿತುಕೊಳ್ಳಿ.

## ತರಗತಿಯಲ್ಲಿ ನೀವು

| ತರಗತಿಯಲ್ಲಿ ಹೀಗಿರಬೇಕು | ತರಗತಿಯಲ್ಲಿ ಹೀಗಿರಬಾರದು |
|---|---|

| | |
|---|---|
| ❖ ಪ್ರೀತಿಯಿಂದ ವರ್ತಿಸಬೇಕು<br>❖ ಮಕ್ಕಳೊಂದಿಗೆ ಮಗುವಾಗಿರಬೇಕು.<br>❖ ಮಗುವನ್ನು ಆಕರ್ಷಿಸುವ ಚಟುವಟಿಕೆ ಹಮ್ಮಿಕೊಳ್ಳಬೇಕು.<br>❖ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ಮಾಡಬೇಕು.<br>❖ ಅರ್ಧ ಗಂಟೆಗೊಮ್ಮೆ ಮಾನಸಿಕ ವಿಶ್ರಾಂತಿಗಾಗಿ ಚಟುವಟಿಕೆ ನೀಡಬೇಕು.<br>❖ ಎಲ್ಲಾ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು.<br>❖ ತರಗತಿಯಲಿ ಮನರಂಜನೆ ಇರುವಂತೆ ನೋಡಿಕೊಳ್ಳಬೇಕು.<br>❖ ಸಹಕಾರ, ಸ್ವಾತಂತ್ರಗಳ ಮನೋಭಾವದ ವಾತಾವರಣವಿರಬೇಕು.<br>❖ ಮಾತಿನ ಧ್ವನಿ, ಏರಿಳಿತ, ವಿಷಯ ಮಂಡನೆ ಪರಿಣಾಮಕಾರಿಯಾಗಿ ಇರಬೇಕು. | ❖ ದಂಡನೆ ವಿಧಿಸಬಾರದು.<br>❖ ಗುರುವಿನಂತೆ ಬೀಗಬಾರದು.<br>❖ ಆಕ್ರೋಶದಿಂದ ವರ್ತಿಸಬಾರದು, ನಿಂದಿಸಬಾರದು.<br>❖ ತಪ್ಪನ್ನು ಎತ್ತಿ ತೋರಿಸಿ ಅವಹೇಳನ ಮಾಡಬಾರದು.<br>❖ ಏಕತಾನತೆಯಿಂದ ಸತತವಾಗಿರುವ ಚಟುವಟಿಕೆ ನೀಡಬಾರದು.<br>❖ ಕೆಲವರನ್ನು ಮಾತ್ರ ಗಮನಿಸಿ ಉಳಿದವರು ಮಂಕಾಗಿ ಕುಳಿತುಕೊಳ್ಳುವ ವಾತಾವರಣ ನಿರ್ಮಾಣ ಮಾಡಬಾರದು.<br>❖ ಉಲ್ಲಾಸದಿಂದ ಚಟುವಟಿಕೆ ನೀಡಿ ಮನ ನೋಯಿಸಬಾರದು.<br>❖ ನಿರ್ಬಂಧ ಹೇರಬಾರದು. ತಪ್ಪಿಗಾಗಿ ಪುನರಾವರ್ತನೆ ಅಭ್ಯಾಸಗಳನ್ನು ನೀಡಬೇಡಿ.<br>❖ ಮಾತು ಕರ್ಕಶವಾಗಿರಬಾರದು. ಅರ್ಥವಾಗುವ ರೀತಿಯಲ್ಲಿ ಗೊಂದಲ ವಾಗುವಂತೆ ಮಂಡನೆ ಮಾಡಬಾರದು. |

**ಮೌಲ್ಯಮಾಪನ:**

**ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಮೌಲ್ಯಮಾಪನದಲ್ಲಿ ಒಳಗೊಳ್ಳುವಂತೆ ಮಾಡುವಾಗ ಈ ಕೆಳಗಿನ ಅಂಶಗಳು ಗಮನಿಸಬೇಕು.**

- ❖ ಮೌಖಿಕ ಪರೀಕ್ಷೆ ಸಮಯದಲ್ಲಿ ಪೂರ್ಣ ವಾಕ್ಯದಲ್ಲಿ ಉತ್ತರವನ್ನು ಹೇಳುವಂತೆ ಒತ್ತಾಯಿಸದೇ, ಪದಮಟ್ಟದ ಉತ್ತರವನ್ನು ಒಪ್ಪಿಕೊಳ್ಳುವುದು.
- ❖ ಉಚ್ಚಾರಣೆಯ ಸ್ಪಷ್ಟತೆಗೆ ಒತ್ತಾಯಿಸಬಾರದು. (ಬುದ್ಧಿಶಕ್ತಿ ಅಥವಾ ಕೇಳಿಸಿಕೊಳ್ಳಲು ತೊಂದರೆ ಇರುವ ಮಕ್ಕಳಿಗೆ)
- ❖ ಬರವಣಿಗೆಯ ಉತ್ತರಕ್ಕೆ ಅವಕಾಶ ನೀಡುವುದು.
- ❖ ವಸ್ತು ನಿಷ್ಠ ಮತ್ತು ಸರಳ ಪ್ರಶ್ನೆಗಳನ್ನು ಕೇಳುವುದು.
- ❖ ಮಗುವಿನ ನ್ಯೂನತೆಯನ್ನು ಗಮನದಲ್ಲಿಟ್ಟುಕೊಂಡು ಬದಲಿ ಪ್ರಶ್ನೆಗಳು ನೀಡುವುದು.(ಬುದ್ಧಿಶಕ್ತಿಯಲ್ಲಿ ತೊಂದರೆ)
- ❖ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳುವುದು.
- ❖ ಲಿಖಿತ ಮೌಲ್ಯಮಾಪನಕ್ಕೆ ಮೌಖಿಕವಾಗಿ ಕೇಳುವುದು.
- ❖ ಅಗತ್ಯವಿದ್ದಲ್ಲಿ ಸಹಾಯಕ ಬರಹಗಾರರನ್ನು ನೀಡುವುದು.
- ❖ ಹೆಚ್ಚಿನ ಕಾಲಾವಕಾಶವನ್ನು ನೀಡುವುದು. ಇತ್ಯಾದಿ.....

**ಸೂಚನೆ: ಮೌಲ್ಯಮಾಪನ ಕುರಿತು ಸರ್ಕಾರದ ಸುತ್ತೋಲೆಗಳನ್ನು ಲಗತ್ತಿಕೆಗಳಲ್ಲಿ ನೀಡಲಾಗಿದೆ. ಗಮನಿಸಿ.**

**ಶ್ರವಣ ದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು :**

- ❖ ಮೌಖಿಕ ಪರೀಕ್ಷೆ ಸಮಯದಲ್ಲಿ ಪದಮಟ್ಟದ ಉತ್ತರವನ್ನು ಗಮನಕ್ಕೆ ತೆಗೆದುಕೊಳ್ಳುವುದು.

❖ ಉಚ್ಚಾರಣೆಯ ಸ್ಪಷ್ಟತೆಗೆ ಹೆಚ್ಚು ಒತ್ತು ನೀಡದಿರುವುದು.

❖ ಬರವಣಿಗೆಯ ಉತ್ತರಕ್ಕೆ ಹೆಚ್ಚು ಅವಕಾಶ ನೀಡುವುದು.

❖ ಭಾಷೆಗಿಂತ ಬರೆದಿರುವ ವಿಷಯಕ್ಕೆ ಗಮನ ನೀಡುವುದು.

❖ ವಸ್ತುನಿಷ್ಠ ಮತ್ತು ಸರಳ ಪ್ರಶ್ನೆಗಳನ್ನು ಕೇಳುವುದು.

❖ ಮಗುವಿನ ನ್ಯೂನ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಬದಲಿ ಪ್ರಶ್ನೆಗಳನ್ನು ನೀಡುವುದು.

## ದೈಹಿಕ ದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು:

❖ ಲಿಖಿತ ಮೌಲ್ಯಮಾಪನಕ್ಕೆ ಬದಲಾಗಿ ಮೌಖಿಕ ಮೌಲ್ಯಮಾಪನ ಮಾಡುವುದು. (ಕೈ ಮತ್ತು ಕಾಲುಗಳಿಂದ ಬರೆಯಲು

ಸಾಧ್ಯವಿಲ್ಲದ ಮಕ್ಕಳಿಗೆ ಹೆಚ್ಚಾಗಿ ಇದು ಅನ್ವಯಿಸುತ್ತದೆ)

❖ ಅಗತ್ಯವಿದ್ದಲ್ಲಿ ಸಹಾಯಕ ಬರಹಗಾರರನ್ನು ನೀಡುವುದು.

## ದೃಷ್ಟಿ ದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು:

❖ ಹೆಚ್ಚಿನ ಕಾಲಾವಕಾಶ ನೀಡುವುದು.

❖ ಒಂದು ಪದ/ವಾಕ್ಯ/ವಸ್ತು ನಿಷ್ಠ ಪ್ರಶ್ನೆಗಳನ್ನು ನೀಡಿ ಮೌಲ್ಯಮಾಪನ ಮಾಡುವುದು.

❖ ಲಿಖಿತ ಮೌಲ್ಯಮಾಪನಕ್ಕೆ ಬದಲಾಗಿ ಮೌಖಿಕ ಮೌಲ್ಯಮಾಪನ ಮಾಡುವುದು.

❖ ಸಹಾಯಕ ಬರಹಗಾರರನ್ನು ನೀಡುವುದು.

## ಬುದ್ಧಿ ದೋಷದ ಮಕ್ಕಳಿಗೆ ಅನುಸರಿಸಬೇಕಾದ ಮೌಲ್ಯಮಾಪನ ಅಂಶಗಳು:

❖ ಚಿಕ್ಕ ಪದಗಳ ಉತ್ತರವನ್ನು ಗಣನೆಗೆ ತೆಗೆದುಕೊಳ್ಳುವುದು.

❖ ನೇರ/ಸರಳ ಪ್ರಶ್ನೆಗಳನ್ನು ಕೇಳುವುದು.

❖ ಮೌಖಿಕ ಪರೀಕ್ಷೆಗೆ ಹೆಚ್ಚು ಆದ್ಯತೆ ನೀಡುವುದು.

❖ ಚಟುವಟಿಕೆ ಆಧಾರಿತ ಮೌಲ್ಯಮಾಪನ ಮಾಡುವುದು.

❖ ವಸ್ತುನಿಷ್ಠ ಪ್ರಶ್ನೆ ನೀಡುವುದು.

## ಸಂಪನ್ಮೂಲ ಬೆಂಬಲ ವ್ಯವಸ್ಥೆ

ಸಂಪನ್ಮೂಲ ಬೆಂಬಲ ವ್ಯವಸ್ಥೆ ಎಂದರೆ ವಿಶೇಷ ಅಗತ್ಯವುಳ್ಳ ಮಗುವಿನ ವಿಶೇಷ ಅಗತ್ಯಗಳನ್ನು ಪೂರೈಸಲು ಶಿಕ್ಷಕರು ನೀಡುವ ಅಥವಾ ಪಡೆಯುವ ವ್ಯವಸ್ಥೆಯಾಗಿದೆ. ಇದರಲ್ಲಿ ಎರಡು ಬಗೆ. ಶಾಲಾ ಸಿಬ್ಬಂದಿ ವರ್ಗ ಹಾಗೂ ಸ್ವಯಂ ಸೇವಕರಿಂದ ಪಡೆಯುವ ಸಹಕಾರ. ಇದು ಒಳಗಿನ ಬೆಂಬಲ. ಹೊರಗಿನ ಬೆಂಬಲವೆಂದರೆ ಸಂಪನ್ಮೂಲ/ವಿಶೇಷ ಶಿಕ್ಷಕರು, ಇತರೆ ಇಲಾಖೆಗಳ ಸಹಕಾರ ಪಡೆಯುವುದಾಗಿದೆ. ಇದರಿಂದ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯವಿರುವ ಶೈಕ್ಷಣಿಕ ಪಠ್ಯಪುಸ್ತಕಗಳು, ಓದುವ ಸಾಮಗ್ರಿಗಳು, ವಿಶೇಷ ಬೋಧನಾ ಕಲಿಕೋಪಕರಣಗಳು, ವಿಶೇಷ ಉಪಕರಣಗಳು ಇತ್ಯಾದಿಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ವಿಶೇಷ ತರಬೇತಿ ಹೊಂದಿದ ಸಂಪನ್ಮೂಲ/ವಿಶೇಷ ಶಿಕ್ಷಕರು, ಆಪ್ತ

ಸಲಹೆಗಾರರು ವಿಶೇಷ ತಜ್ಞರು (ಶ್ರವಣ ತಜ್ಞರು, ವಾಕ್ ತಜ್ಞರು, ಅಂಗಚಿಕಿತ್ಸಕರು ಇತ್ಯಾದಿ) ಸೇವಾ ಸೌಲಭ್ಯಗಳನ್ನು ಒದಗಿಸುತ್ತಾರೆ. ಈ ವ್ಯವಸ್ಥೆಯಿಂದ ವೈದ್ಯಕೀಯ ನೆರವು, ಶೈಕ್ಷಣಿಕ ನೆರವು ಮತ್ತು ಔದ್ಯೋಗಿಕ ತರಬೇತಿ ನೆರವು ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಲಭ್ಯವಾಗುವುದು.

**ಸೂಚನೆ :**

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಧಿಕ ಪಠ್ಯಕ್ರಮ (ಬ್ರೈಲ್ ಕಲಿಕೆ, ವಾಕ್/ಶ್ರವಣ ತರಬೇತಿ ಇತ್ಯಾದಿ) ಕಲಿಸಬೇಕಾದಂತಹ ಸಂದರ್ಭದಲ್ಲಿ ಸಮೀಪದ ವಿಶೇಷ ಸಂಸ್ಥೆ ಸಹಕಾರವನ್ನು ಪಡೆಯುವುದು.
- ಬಿಐಇಆರ್‌ಟಿ/ಡಿಐಇಆರ್‌ಟಿ ಯವರ ಸಹಕಾರವನ್ನು ಪಡೆಯುವುದು.

## ಸಂಪನ್ಮೂಲ ಕೊಠಡಿ

ಪ್ರತಿಯೊಂದು ಶಾಲೆಯಲ್ಲಿ ವಿಕಲಚೇತನ ಮಕ್ಕಳಿಗಾಗಿ ಸಾಧ್ಯವಾದರೆ ಪ್ರತ್ಯೇಕ ಕೊಠಡಿಯಲ್ಲಿ ಕಲಿಕೆ-ಬೋಧನೆ ಸಾಮಾಗ್ರಿಗಳನ್ನು ಸಂಗ್ರಹಿಸಿ ಇಡುವುದು ಆಪೇಕ್ಷಣಿಯ. ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅವರ ಅಗತ್ಯವನ್ನಾಧರಿಸಿ ಸಂಪನ್ಮೂಲ ಕೊಠಡಿಯಲ್ಲಿನ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು, ಹೆಚ್ಚಿನ ಪರಿಹಾರಾತ್ಮಕ ಬೋಧನೆ ಹಾಗೂ ಅಧಿಕ ಪಠ್ಯಕ್ರಮ/ಹೆಚ್ಚುವರಿ ಪಠ್ಯಕ್ರಮವನ್ನು ಕಲಿಸಲು ಈ ಸಂಪನ್ಮೂಲ ಕೊಠಡಿ ನೆರವಾಗುತ್ತದೆ. ಸಾಮಾನ್ಯ ತರಗತಿಯಲ್ಲಿ ಮಾಡುವ ಪಾಠಗಳು/ಸಾಮರ್ಥ್ಯಗಳು ಎಲ್ಲೆಲ್ಲಿ ಅರ್ಥವಾಗುವುದಿಲ್ಲವೋ ಅಂತಹ ಸಂದರ್ಭಗಳಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಸಂಪನ್ಮೂಲ ಕೊಠಡಿಗೆ ಕರೆತಂದು ಪರಿಹಾರಾತ್ಮಕ ಬೋಧನೆಯನ್ನು ನೀಡಬಹುದು.

**ಉದಾ:** ಪೂರ್ಣ ಅಂಧತ್ವವುಳ್ಳ ಮಗುವಿಗೆ ತರಗತಿಯಲ್ಲಿ ಸೂರ್ಯಗ್ರಹಣದ ಬಗ್ಗೆ ಮಾಡಿದ ಪಾಠ ಅರ್ಥವಾಗದಿದ್ದಲ್ಲಿ, ಸಂಪನ್ಮೂಲ ಕೊಠಡಿಗೆ ಕರೆತಂದು ವಿಶೇಷ ಪಾಠೋಪಕರಣಗಳನ್ನು ಬಳಸಿ ಹೇಗೆ ಸೂರ್ಯಗ್ರಹಣ ಉಂಟಾಗುತ್ತದೆ ಎಂದು ತಿಳಿಸಬಹುದು. ಶ್ರವಣ ದೋಷವುಳ್ಳ ಮಕ್ಕಳು ತರಗತಿಯಲ್ಲಿನ ಭಾಷಾ ಬೋಧನೆಯನ್ನು ಗ್ರಹಿಸಿಕೊಳ್ಳಲು ಕಷ್ಟಪಡುತ್ತಾರೆ. ಅಂತಹ ಮಕ್ಕಳನ್ನು ಸಂಪನ್ಮೂಲ ಕೊಠಡಿಗೆ ಕರೆತಂದು ತಿಳುವಳಿಕೆ ನೀಡಬಹುದು.

**ಸಂಪನ್ಮೂಲ ಕೊಠಡಿಯಲ್ಲಿ ಸಂಗ್ರಹಿಸಿಡಬೇಕಾದ ಮೂಲಭೂತ ಉಪಕರಣಗಳು/ಬೋಧನಾ ಕಲಿಕಾ ಸಾಮಗ್ರಿಗಳ ವಿವರ.**

| ನ್ಯೂನ್ಯತೆ | ಉಪಕರಣಗಳು | ಬೋಧನಾ ಕಲಿಕಾ ಸಾಮಗ್ರಿಗಳು |
|---|---|---|
| ಪೂರ್ಣ ಅಂಧತ್ವ | ಬ್ರೈಲ್, ಉದ್ದನೆಯ ಬಿಳಿ ಬೆತ್ತ, ಕಣ್ಣಿನ ಪರೀಕ್ಷೆಗಾಗಿ ಸ್ನೆಲನ್ ಚಾರ್ಟ್, ಮಾರ್ಪಡಿಸಿದ ಕ್ರಿಕೆಟ್ ಉಪಕರಣಗಳು, ಚೆಸ್, ಕೇರಂ, ಮ್ಯೂಸಿಕ್ ಸೆಟ್ ಇತ್ಯಾದಿ | ಬ್ರೈಲ್ ಕಿಟ್; ಬ್ರೈಲ್ ಸ್ಲೇಟ್, ಬ್ರೈಲ್ ಹಾಳೆ, ಸ್ಟೈಲಸ್, ಅಬ್ಯಾಕಸ್ ಮತ್ತು ಟೇಲರ್ ಫ್ರೇಂ, ಬ್ರೈಲ್ ಪುಸ್ತಕಗಳು, ಬ್ರೈಲ್ ಮಿಂಚುಪಟ್ಟಿ, ಬ್ರೈಲ್ ಅಕ್ಷರಮಾಲೆ, ಚಾರ್ಟ್, ಮಾತನಾಡುವ ಪುಸ್ತಕಗಳು (ಪಾಠಗಳನ್ನು ಧ್ವನಿಮುದ್ರಿಸಿದ ಧ್ವನಿ ಸುರುಳಿಗಳು ಮತ್ತು ಟೇಪ್ ರೆಕಾರ್ಡರ್) |

| | | |
|---|---|---|
| **ಮಿತಿಯುಳ್ಳ ದೃಷ್ಟಿದೋಷ** | ಭೂತಗಾಜನ್ನು ಒಳಗೊಂಡಂತೆ ವಿಶೇಷವಾಗಿ ರೂಪಿಸಿದ ಇಳಿಜಾರು ಮಣೆ, ಓದಲನುವಾಗುವಂತಹ ಭಾರವಿಲ್ಲದ ಲ್ಯಾಂಪ್, ಕನ್ನಡಕದೊಂದಿಗೆ ಉಪಯೋಗಿಸ ಬಹುದಾದ ಭೂತಗಾಜು. | ರೇಖಾಗಣಿತದ ಕಿಟ್, ಉಬ್ಬು ತಗ್ಗಿನಿಂದ ಕೂಡಿರುವ ಪಾಠೋಪಕರಣಗಳು, ಭೂಪಟಗಳು, ಗೋಳ, ವಿಜ್ಞಾನಕ್ಕೆ ಸಂಬಂಧಿಸಿದ ಸಾಮಗ್ರಿ ಇತ್ಯಾದಿ. ದಪ್ಪ ಅಕ್ಷರದಿ ಮುದ್ರಣವಾಗಿರುವ ಸಾಮಗ್ರಿಗಳು, ಕಪ್ಪು ಹಲಗೆ ಬದಲಾಗಿ ಬಿಳಿಹಲಗೆ, ಹಳದಿ ಸೀಮೆಸುಣ್ಣ, ಮಾರ್ಕರ್ ಪೆನ್ನುಗಳು. |
| **ಶ್ರವಣ ದೋಷ** | ಶ್ರವಣ ಮಾಪನ ಯಂತ್ರ, ಶ್ರವಣ ತರಬೇತಿ ನೀಡಲು ವಿವಿಧ ರೀತಿಯ ಶಬ್ದಗಳನ್ನು ಉಂಟುಮಾಡುವ ಸಾಮಗ್ರಿಗಳು ವಾಕ್ ತರಬೇತಿ ನೀಡುವ ಯಂತ್ರ, ಕನ್ನಡಿ (3'*6') ವೈಯಕ್ತಿಕ ಶ್ರವಣೋಪಕರಣಗಳಿಗೆ ಉಪಯೋಗಿಸುವ ಸೆಲ್‌ಗಳು | ಮಿಂಚುಪಟ್ಟಿಗಳು, ಚಾರ್ಟ್‌ಗಳು, ಮಾದರಿಗಳು, ವಿವಿಧ ವಿಷಯಗಳನ್ನೊಳಗೊಂಡ ಚಿತ್ರಸಂಪುಟ, ಶಬ್ದಕೋಶ (ಹೊಸ ಪದಗಳ ನಿಘಂಟು) ಇತ್ಯಾದಿ |
| **ದೈಹಿಕ ದೋಷ** | ಹೊಂದಾಣಿಕೆಯಾಗುವಂತಹ ಪೀಠೋಪಕರಣಗಳು, ಸಾಧನೋಪಕರಣಗಳು | ದಪ್ಪ ಹಿಡಿಕೆಯುಳ್ಳ ಸೀಸದ ಕಡ್ಡಿ, ಲೇಖನಿ ಪುಟಗಳನ್ನು ತಿರುಗಿಸುವ ಸಾಧನ ಇತ್ಯಾದಿ. |
| **ಬುದ್ಧಿದೋಷ** | ಇಂದ್ರಿಯಗಳನ್ನು ಪ್ರಚೋದನೆ ಗೊಳಿಸುವ ಸಾಮಗ್ರಿಗಳು ಹಾಗೂ ಮಾಂಟೆಸ್ಸೊರಿ ಕಿಟ್, ಡ್ರಮ್‌ಗಳು, ಗಂಟೆಗಳು, ಟೇಪ್ ರೆಕಾರ್ಡರ್, ಸಂಗೀತದ ಧ್ವನಿ ಸುರುಳಿಗಳು, ಊದುವ ಆಟಿಕೆಗಳು, ವಿವಿಧ ಶಬ್ದ ಮಾಡುವ ಆಟಿಕೆಗಳು, ಕೈಲಾಡಿಸುವ ಬೊಂಬೆಗಳು, ಬಣ್ಣದ ಮರದ ಮಣಿಗಳು (ಎಲ್ಲಾ ಗಾತ್ರಗಳು) ವಿವಿಧ ಆಕಾರಗಳಿರುವ ಪೆಗ್ ಬೋರ್ಡ್, ಚೆಂಡು ವಿವಿಧ ಗಾತ್ರದ್ದು, ಮರದ ಚೌಕಾಕಾರದ ತುಂಡುಗಳು (ಬಣ್ಣದ ಮತ್ತು ಬಣ್ಣವಿಲ್ಲದ ಗಟ್ಟಿ ಮತ್ತು ಟೊಳ್ಳು ತುಂಡುಗಳು) | ಸರಳವಾಗಿ ಆತ್ಯಾಕರ್ಷಕವಾಗಿ ಬರೆದ ಸಾಮಾಗ್ರಿಗಳು, (ದೊಡ್ಡ ಗಾತ್ರದಲ್ಲಿ ಬಣ್ಣಬಣ್ಣವಾಗಿ ಚಿತ್ರಗಳಿಂದ ತುಂಬಿದ) ಚಿತ್ರಪಟಗಳು, ಕಥೆ ಪುಸ್ತಕಗಳು, ಕ್ರೇಯಾನ್ಸ್, ಪೆನ್ಸಿಲ್‌ಗಳು, ಸ್ಕೆಟ್‌ಪೆನ್, ಬಣ್ಣದ ಜೇಡಿಮಣ್ಣು, ಪೇಂಟಿಂಗ್ಸ್ ಇತ್ಯಾದಿ. |

ಸಂಪನ್ಮೂಲ ಕೊಠಡಿಯನ್ನು ಬ್ಲ್ಯಾಕ್/ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳಲ್ಲಿ ಸ್ಥಾಪಿಸಿದರೆ ಸಾಲದು, ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಂಪನ್ಮೂಲ ಕೊಠಡಿಗಳನ್ನು ಸ್ಥಾಪಿಸುವುದು ಸೂಕ್ತ. ಕನಿಷ್ಠ ಪಕ್ಷ ಪ್ರತಿಶಾಲೆಯಲ್ಲೂ ಒಂದು ಸಣ್ಣ ಮೂಲೆಯನ್ನಾದರೂ ಸಂಪನ್ಮೂಲ ಮೂಲೆಯನ್ನಾಗಿ ಬಳಸುವುದು ಅತ್ಯವಶ್ಯ.

ಈ ರೀತಿ ಸಂಪನ್ಮೂಲ ಬೆಂಬಲವನ್ನು ಪರಸ್ಪರ ಸಹಾಯ, ಸಹಕಾರದೊಂದಿಗೆ ಎಲ್ಲಾ ಸ್ತರಗಳಿಂದ ಪಡೆಯುವಂತಹ ವ್ಯವಸ್ಥೆ ನಿರ್ಮಾಣವಾಗಬೇಕು. ಆಗ ಮಾತ್ರ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಹಾಗೂ ಶಿಕ್ಷಕರಿಗೆ ಅಗತ್ಯವಿರುವ ಬೆಂಬಲ ದೊರೆತು. ಸಮನ್ವಯ ಶಾಲೆಗಳು ಸರ್ವತ್ರಿಕ ಕಲಿಕೆಯನ್ನು ಸಾಧಿಸುವಲ್ಲಿ ಯಶಸ್ಸನ್ನು ಕಾಣುತ್ತವೆ.

ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅಗತ್ಯವಿರುವ ಹೆಚ್ಚುವರಿ ಅಥವಾ ಪಠ್ಯಕ್ರಮವನ್ನು ಕಲಿಸಲು ಸಂಪನ್ಮೂಲ ಕೊಠಡಿ ಅತ್ಯವಶ್ಯ. ಸಂಪನ್ಮೂಲ ಕೊಠಡಿಯಲ್ಲಿರುವ ಕಲಿಕೋಪಕರಣಗಳು ಮತ್ತು ಸಾಧನೋಪಕರಣಗಳನ್ನು ಬಳಸಿಕೊಂಡು ಸಮನ್ವಯ ಶಿಕ್ಷಣದಲ್ಲಿ ತರಬೇತಿ ಹೊಂದಿದ ಸಾಮಾನ್ಯ ಶಿಕ್ಷಕರು/ಸಂಪನ್ಮೂಲ ಶಿಕ್ಷಕರು, ವಿಶೇಷ ಶಿಕ್ಷಕರು ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಹೆಚ್ಚುವರಿ ಅಥವಾ ಅಧಿಕ ಪಠ್ಯಕ್ರಮವನ್ನು ಕಲಿಸಲು ಸಂಪನ್ಮೂಲ ಕೊಠಡಿ ನೆರವಾಗುತ್ತದೆ. ಯಾವ ಮಕ್ಕಳಿಗೆ ಸಾಮಾನ್ಯ ತರಗತಿಯಲ್ಲಿ ಮಾಡಿದ ಪಾಠವು ಅರ್ಥವಾಗುವುದಿಲ್ಲವೋ ಅಂತಹ ಮಕ್ಕಳನ್ನು ಸಂಪನ್ಮೂಲ ಕೊಠಡಿಗೆ ಕರೆದುಕೊಂಡು ಹೋಗಿ ವಿಶೇಷ ಕಲಿಕೋಪಕರಣಗಳನ್ನು ಬಳಸಿಕೊಂಡು ವೈಯಕ್ತಿಕವಾಗಿ ಮಗುವಿಗೆ ನಿಧಾನವಾಗಿ ವಿವರಿಸುತ್ತಾ ಅರ್ಥಮಾಡಿಸುವುದು.

1. **ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಕೊಠಡಿಯು ಯಾವ ರೀತಿಯಾಗಿ ಅನುಕೂಲಿಸುತ್ತದೆ ಎಂಬುದನ್ನು ಅರ್ಥೈಸಿ.**
2. **ನಿಮ್ಮ ಕನಸಿನ ಸಂಪನ್ಮೂಲ ಕೊಠಡಿಯ ಬಗ್ಗೆ ವಿವರಿಸಿ.**

## ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಸಂಪನ್ಮೂಲ ಬೆಂಬಲ ಪಡೆಯುವ ಕೆಲವು ಮಾರ್ಗಗಳು:

### 01. ವಿವಿಧ ತಂಡಗಳ ನೆರವು

**ಅ) ಕುಟುಂಬಗಳ ನೆರವು :** ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವೈದ್ಯಕೀಯ ನೆರವನ್ನು ಒದಗಿಸಲು ಕುಟುಂಬಗಳ ನೆರವನ್ನು ಪಡೆಯುವುದು ಅತ್ಯಗತ್ಯ. ಅವರ ಮಕ್ಕಳ ಶಾಲಾ ನಿರ್ವಹಣೆ ಬಗ್ಗೆ ನಿರಂತರವಾಗಿ ಚರ್ಚಿಸಬೇಕು.

**ಆ) ಅಂಗನವಾಡಿಗಳಿಂದ ನೆರವು :** ಶಾಲಾ ಪೂರ್ವ ಸಿದ್ಧತೆಯಲ್ಲಿ ಅಂಗನವಾಡಿಗಳ ಪಾತ್ರ ಅತ್ಯಮೂಲ್ಯವಾದುದ್ದು. ಇಲ್ಲಿ ಮಗುವಿನ ಸಾಮಾಜಿಕ ಕೌಶಲ್ಯಗಳು, ಅಂಗಾಂಗ ಬೆಳವಣಿಗೆ. ಭಾಷಾ ಕೌಶಲ್ಯಗಳು, ಬೌದ್ಧಿಕ ಸಾಮರ್ಥ್ಯ ಹಾಗೂ ಭಾವನಾತ್ಮಕ ಹೊಂದಾಣಿಕೆ ಕ್ಷೇತ್ರಗಳಲ್ಲಿ ವಿಶೇಷ ಅಗತ್ಯವುಳ್ಳ ಮಗುವಿಗೆ ತರಬೇತಿ ನೀಡುವ ಮೂಲಕ ಶಾಲೆಗೆ ಮಗುವನ್ನು ಸಿದ್ಧಪಡಿಸುವುದು. ಈ ನಿಟ್ಟಿನಲ್ಲಿ ಸಂಪನ್ಮೂಲ ಶಾಲಾ ಶಿಕ್ಷಕರುಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಪರಸ್ಪರ ಕಾರ್ಯೋನ್ಮುಖರಾಗಬೇಕು.

**ಇ) ವಿಶೇಷ ತಜ್ಞರ ತಂಡದ ನೆರವು :** ಜಿಲ್ಲಾ ಆಸ್ಪತ್ರೆ, ಜಿಲ್ಲಾ ಪುನರ್ವಸತಿ ಕೇಂದ್ರ/ ರಾಷ್ಟ್ರೀಯ ವಿಶೇಷ ಸಂಸ್ಥೆಗಳಲ್ಲಿ ಲಭ್ಯವಿರುವ ವಿಶೇಷ ತಜ್ಞರ ನೆರವಿನೊಂದಿಗೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವೈದ್ಯಕೀಯ ಮಾಪನ, ಶಸ್ತ್ರಚಿಕಿತ್ಸೆ, ಸಾಧನೋಪಕರಣಗಳನ್ನು ಒದಗಿಸುವುದು ಹಾಗೂ ಅಂಗಚಿಕಿತ್ಸೆ ಸೌಲಭ್ಯಗಳನ್ನು ನೀಡಬಹುದಾಗಿದೆ. ಇವರೆಲ್ಲರನ್ನೊಳಗೊಂಡ ವೈದ್ಯಕೀಯ ಶಿಬಿರವನ್ನು ಬ್ಲಾಕ್ ಹಂತದಲ್ಲಿ ಬ್ಲಾಕ್ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಸಂಯೋಜಕರುಗಳ ನೆರವಿನೊಂದಿಗೆ ಏರ್ಪಡಿಸಬಹುದು.

### 02. . ಸಂಪನ್ಮೂಲ ಶಿಕ್ಷಕರ ನೆರವು

ಎಲ್ಲಾ ರೀತಿಯ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಸಂಪನ್ಮೂಲ ಬೆಂಬಲವನ್ನು ಒದಗಿಸಲು ಕೇಂದ್ರ ಸರ್ಕಾರದಿಂದ ಪ್ರಾಯೋಜಿತಗೊಂಡಂತಹ ಈಗಿರುವ ಸಮನ್ವಯ ಶಿಕ್ಷಣ ಯೋಜನೆಯಡಿ ಈಗಾಗಲೇ

ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲ ಶಿಕ್ಷಕರು, ಡಯಟ್ ತರಬೇತಿ ನೀಡಿದ ಸಂಪನ್ಮೂಲ ಶಿಕ್ಷಕರು ಹಾಗೂ ಜನಶಾಲಾ ಕಾರ್ಯಕ್ರಮದ ಅಡಿಯಲ್ಲಿ ಸಮನ್ವಯ ಶಿಕ್ಷಣ ತರಬೇತಿ ಪಡೆದ ಶಿಕ್ಷಕ ನೆರವು ಪಡೆಯಬಹುದು. ತರಬೇತಿ ಹೊಂದಿದ ಅಂತಹ ಶಿಕ್ಷಕರನ್ನು ಕ್ಲಸ್ಟರ್/ಬ್ಲಾಕ್ ಮಟ್ಟದಲ್ಲಿ ನೇಮಕ ಮಾಡಿಕೊಳ್ಳಬಹುದು.

**ಸೂಚಿತ ಪ್ರಕ್ರಿಯಾ ಹಂತಗಳು :**

ಚಟುವಟಿಕೆ – 01. ಬಿಂಗೋ ಚೀಟಿಗಳನ್ನು ಕೊಡುವದು. ದೃಷ್ಟಿದೋಷ ವಿದ್ಯಾರ್ಥಿಗಳು, ಶ್ರವಣದೋಷವಿರುವ ವಿದ್ಯಾರ್ಥಿಗಳು, ಬುದ್ಧಿದೋಷವುಳ್ಳ ವಿದ್ಯಾರ್ಥಿಗಳು, ಕಲಿಕಾದೋಷವುಳ್ಳ ವಿದ್ಯಾರ್ಥಿಗಳು, ದೈಹಿಕದೋಷವುಳ್ಳ ವಿದ್ಯಾರ್ಥಿಗಳು, ಆರೋಗ್ಯ ಸಮಸ್ಯೆಯುಳ್ಳ ಮಕ್ಕಳು ಎಂದು ಆ ಚೀಟಿಯಲ್ಲಿ ಬರೆದು ಗುಂಪುಗಳನ್ನು ರಚಿಸಿ, ಕುಳಿತುಕೊಳ್ಳಲು ಹೇಳುವುದು.

ಚಟುವಟಿಕೆ – 02. ನಂತರ ಈ ವಿದ್ಯಾರ್ಥಿಗಳಿಗೆ ನೀವು ತರಗತಿ ನಿರ್ವಹಿಸುತ್ತಿರೆಂದು ಚರ್ಚಿಸಿ ಪಟ್ಟಿ ಮಾಡಿಸಿ ಇವರಿಗೆ ಹೇಗೆ ಬೆಂಬಲ ಕೊಡುವಿರೆಂದು ದೊಡ್ಡ ಗುಂಪಿನಲ್ಲಿ ಚರ್ಚಿಸುವುದು.

## ಮೌಲ್ಯಮಾಪನ ಪ್ರಶ್ನೆಗಳು

1. **ಶಿಕ್ಷಕರು ತರಗತಿಯಲ್ಲಿ ಹೀಗಿರಬಾರದು**

   ಎ) ಮಕ್ಕಳೊಂದಿಗೆ ಮಗುವಾಗಿರಬೇಕು

   ಬಿ) ಎಲ್ಲಾ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು

   ಸಿ) ಧ್ವನಿ ಏರಳಿತ ಪರಿಣಾಮಕಾರಿಯಾಗಿರಬೇಕು

   ಡಿ) ಆಕ್ರೋಶದಿಂದ ವರ್ತಿಸಬಾರದು ನಿಂದಿಸಬಾರದು

2. **ಸಂಪನ್ಮೂಲ ಬೆಂಬಲ ವ್ಯವಸ್ಥೆಯ ವಿಧಗಳು**

   ಎ) ಮೂರು ವಿಧಗಳು　　ಬಿ) ಎರಡು ವಿಧಗಳು

   ಸಿ) ನಾಲ್ಕು ವಿಧಗಳು　　ಡಿ) ಐದು ವಿಧಗಳು

3. **ನ್ಯೂನತೆಯ ಮುಖ್ಯವಾದ ವಿಧಗಳ ಸಂಖ್ಯೆ**

   ಎ) ಐದು　　ಬಿ) ನಾಲ್ಕು

   ಸಿ) ಎರಡು　　ಡಿ) ಮೂರು

4. **ಈ ರೀತಿಯ ಮಕ್ಕಳಿಗೆ ಬ್ರೈಲ್ ಕಿಟ್ ಅವಶ್ಯ**

   ಎ) ಪೂರ್ಣ ಅಂದತ್ವ ಮಕ್ಕಳಿಗೆ　　ಬಿ) ಮಿತಿಯುಳ್ಳ ದೃಷ್ಟಿ ದೋಷ ಮಕ್ಕಳಿಗೆ

   ಸಿ) ಶ್ರವಣದೋಷ ಮಕ್ಕಳಿಗೆ　　ಡಿ) ಬುದ್ಧಿ ದೋಷ ಮಕ್ಕಳಿಗೆ

5. **ಕಲಿಕಾ ದೋಷಗಳಿಗೆ ಸಂಬಂಧಿಸಿಲ್ಲ.**

   ಎ) ವಾಚನ ದೌರ್ಬಲ್ಯ　　ಬಿ) ಸಂಖ್ಯಾ ದೌರ್ಬಲ್ಯ

ಸಿ) ಚಲನಾಂಗ ದೌರ್ಬಲ್ಯ ಡಿ) ಬರವಣಿಗೆ ದೌರ್ಬಲ್ಯ

**6. ದೃಷ್ಟಿ ದೋಷದ ಬಗೆಗಳಲ್ಲದಿರುವುದು……**

ಎ) ಪಾರ್ಶ್ವ ದೃಷ್ಟಿ ದೋಷ ಬಿ) ನೀಳದೃಷ್ಟಿದೋಷ

ಸಿ) ಪೂರ್ಣ ದೃಷ್ಟಿ ದೋಷ ಡಿ) ದೃಷ್ಟಿ ವಿಕಲತೆ

# ಅಧ್ಯಾಯ-05

## ವಿಶೇಷ ಅಗತ್ಯವುಳ್ಳ ಮಕ್ಕಳ ಕಾಯ್ದೆಗಳು ಹಾಗೂ ಉಪಕ್ರಮಗಳು

### ಭಾರತೀಯ ಪುನಶ್ಚೇತನ ಪರಿಷತ್ ಕಾಯಿದೆ – 1992

ನ್ಯೂನತೆಯುಳ್ಳ ವ್ಯಕ್ತಿಗಳಿಗೆ ನೀಡುವ ಪುನಶ್ಚೇತನ ಸೌಲಭ್ಯಗಳ ಗುಣಮಟ್ಟವನ್ನು ಕಾಪಾಡುವ ಸಲುವಾಗಿ 1992ರಲ್ಲಿ ಆರ್.ಸಿ.ಐ ಆಕ್ಟ್ ಅನ್ನು ಜಾರಿಗೊಳಿಸಲಾಯಿತು. ಪುನಶ್ಚೇತನಕ್ಕೆ ಸಂಬಂಧಿಸಿದ ತರಬೇತಿ ಕೋರ್ಸುಗಳಿಗೆ ಮಾನ್ಯತೆ ಹಾಗೂ ಪುನಶ್ಚೇತನ ತಂತ್ರಜ್ಞರಿಗೆ ಕಾರ್ಯನಿರ್ವಹಿಸಲು ನೋಂದಣಿ ಸಂಖ್ಯೆ ನೀಡುವ ಮೂಲಕ ಒಂದು ರೀತಿಯ ಪರವಾನಿಗೆಯನ್ನು ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

**ಪ್ರಮುಖ ಕಾರ್ಯಗಳು**

- ಪುನಶ್ಚೇತನ ತರಬೇತಿಗಳಿಗೆ ಮಾನ್ಯತೆ
- ಹೊರದೇಶದ ವಿಶ್ವವಿದ್ಯಾಲಯಗಳಿಂದ ಪಡೆದ ವಿದ್ಯಾರ್ಹತೆಯನ್ನು ಅಂಗೀಕರಿಸುವುದು.
- ಪುನಶ್ಚೇತನಕ್ಕೆ ಸಂಬಂಧಿಸಿದಂತೆ ವಿದ್ಯಾರ್ಹತೆಯನ್ನು ಪಡೆದಿರುವ ವ್ಯಕ್ತಿಗಳಿಗೆ ನೋಂದಣಿ ಸಂಖ್ಯೆ ನೀಡುವುದು. (ವೈದ್ಯರಿಗೆ ವೈದ್ಯಕೀಯ ಪರಿಷತ್ತು ನೀಡುವ ರೀತಿ).
- ವಿವಿಧ ರೀತಿಯ ಕೋರ್ಸ್ಗಳ ಅಧ್ಯಯನ ಮತ್ತು ಪರೀಕ್ಷೆಗಳಿಗೆ ತಪಾಸಣಾಧಿಕಾರಿಗಳ ನೇಮಕ.
- ವಿವಿಧ ರೀತಿಯ ಕೋರ್ಸ್ಗಳಿಗೆ ನೀತಿ ನಿಯಮಗಳನ್ನು ರಚಿಸುವ ಅಧಿಕಾರ.

- ನ್ಯೂನತೆಯುಳ್ಳ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸುವುದು.

**ಅಂಗವಿಕಲ ವ್ಯಕ್ತಿಗಳ ಸಮಾನ ಅವಕಾಶ ಹಕ್ಕುಗಳ ಮತ್ತು ಪೂರ್ಣ ಭಾಗವಹಿಸುವಿಕೆ ಅಧಿನಿಯಮ-1995 ಅಧಿನಿಯಮದ ಪಕ್ಷಿನೋಟ**

(ವಿ.ಸೂ : ಈ ಅಧಿನಿಯಮವು ೧೪ ಅಧ್ಯಾಯಗಳನ್ನು ಹಾಗೂ ೭೩ ಕಾಲಂಗಳನ್ನು ಹೊಂದಿದೆ. ಅವುಗಳನ್ನು ಅನುಬಂಧದಲ್ಲಿ ನೋಡಬಹುದು)

## ರಾಷ್ಟ್ರೀಯ ಟ್ರಸ್ಟ್ ಕಾಯಿದೆ - 1999 (ಬುದ್ಧಿಮಾಂದ್ಯತೆ, ಮೆದುಳುವಾತ ಮುಂತಾದ ಅಂಗವಿಕಲರ ಕಲ್ಯಾಣ ಕಾಯಿದೆ)

ತಮ್ಮ ಹಿತಾಶಕ್ತಿಗಳನ್ನು ಸ್ವತಃ ನೋಡಿಕೊಳ್ಳಲು ಅಸಮರ್ಥವಾಗಿರುವಂತಹ ಗಂಭೀರ ಮತ್ತು ತೀವ್ರವಾದ ಮಾನಸಿಕ ಹಾಗೂ ಶಾರೀರಕ ವಿಕಲತೆಯುಳ್ಳವರ ರಕ್ಷಣೆಗಾಗಿ 1999ರಲ್ಲಿ ಕೇಂದ್ರ ಸರ್ಕಾರ ಒಂದು ರಾಷ್ಟ್ರೀಯ ಟ್ರಸ್ಟ್ (ನ್ಯಾಸ್) ಕಾಯಿದೆಯನ್ನು ಹೊರಡಿಸಿದೆ. ಈ ಕಾಯಿದೆ ಈ ಕೆಳಕಂಡ ರೀತಿಯ ಅಂಗವಿಕಲರಿಗೆ ಅನ್ವಯಿಸುತ್ತದೆ.

**ಮೆದುಳುವಾತ**

ಹುಟ್ಟುವ ಮುನ್ನ, ನಂತರ ಅಥವಾ ಬಾಲ್ಯಾವಸ್ಥೆಯಲ್ಲಿ ಮೆದುಳಿಗೆ ಆದ ಆಘಾತದಿಂದ ಅಂಗಾಗಗಳ ಚಲನೆಯಲ್ಲಿ ಹೊಂದಾಣಿಕೆ ಇಲ್ಲದಿರುವುದು.

**ಆಟಿಸಂ ಅಥವಾ ಅಂತರ್ಮುಖಿ**

ನೈಜಸ್ಥಿತಿ (ಹೊರಜಗತ್ತಿನ)ಯೊಡನೆ ಸಂಪರ್ಕ ಕಡಿದುಕೊಂಡಿರುವ ಇವರ ವರ್ತನೆ, ಮಾತು ಮತ್ತು ವ್ಯವಹಾರಗಳಲ್ಲಿ ನ್ಯೂನ್ನತೆಯಿದ್ದು, ಹೇಳಿದ್ದನ್ನೇ ಮತ್ತೆ ಮತ್ತೆ ಮಾಡುವುದು, ಸಂಬಂಧಗಳಿಂದ ವಿಮುಖವಾಗಿರುವುದು ಇತ್ಯಾದಿ ಇವರ ಲಕ್ಷಣವಾಗಿರುತ್ತದೆ.

**ಬುದ್ಧಿಮಾಂದ್ಯತೆ**

ಬುದ್ಧಿಯ ಬೆಳವಣಿಗೆಯಲ್ಲಿ ಅಡಚಣೆಯಿದ್ದು, ಬುದ್ಧಿ ಕುಂಠಿತವಾಗಿರುವವರು.

**ಬಹುವಿಧ ವಿಕಲತೆ**

1995ರ ಕಾಯಿದೆಯಲ್ಲಿ ಹೊಂದಿರುವ ಅಂಗವಿಕಲತೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಕಲತೆ ಉಳ್ಳವರು.

**ಸೂಚನೆ :** ಈ ಅಧ್ಯಾಯದಲ್ಲಿ ಅಂಗವಿಕಲರು ಎಂದರೆ ಈ ನಾಲ್ಕು ತರಹದ ವಿಕಲತೆಯುಳ್ಳವರು ಎಂದು ಅರ್ಥಮಾಡಿಕೊಳ್ಳಬೇಕು.

**ಮಂಡಳಿಯ ರಚನೆ**

ಈ ರಾಷ್ಟ್ರೀಯ ಟ್ರಸ್ಟಿನ ಮುಖ್ಯ ಕಛೇರಿ ದೆಹಲಿಯಲ್ಲಿದ್ದು, ಕೇಂದ್ರ ಸರ್ಕಾರದ ಅನುಮತಿ ಪಡೆದು ಪಡೆದು ಇತರ ಊರುಗಳಲ್ಲಿ ಉಪಕಛೇರಿಯನ್ನು ಸ್ಥಾಪಿಸಬಹುದು. ಟ್ರಸ್ಟಿಗೆ ಒಬ್ಬ ಅಧ್ಯಕ್ಷರು ಇದ್ದಾರೆ. ಇತರ ಸದಸ್ಯರು ಈ ಕೆಳಕಂಡಂತಿರುತ್ತಾರೆ.

9 ಜನ ಟ್ರಸ್ಟಿನನ್ವಯ ನೊಂದಾಯಿಸಲ್ಪಟ್ಟಿರುವ ಸ್ವಯಂ ಸೇವಾಸಂಸ್ಥೆಗಳ ಪ್ರತಿನಿಧಿಗಳಾಗಿರುತ್ತಾರೆ. ಇವರಲ್ಲಿ ತಲಾ ಮೂವರು ಆಟಿಸಂ, ಮೆದುಳುವಾತ, ಬುದ್ದಿಮಾಂದ್ಯತೆ ಅಥವಾ ಬಹುವಿಧ ವಿಕಲತೆಯುಳ್ಳವರ ಸಂಘ ಅಥವಾ ಅವರ ಪಾಲಕರ ಸಂಘಗಳ ಸದಸ್ಯರಾಗಿರಬೇಕು.

ಸರ್ಕಾರದ ನಾನಾ ಇಲಾಖೆಗಳ ಅಧಿಕಾರಿಗಳು ಎಂಟು ಜನ, ಸಮಾಜ ಸೇವೆಯಲ್ಲಿ ನಿರತರಾಗಿರುವ ಉದ್ದಿಮೆ/ವ್ಯಾಪಾರಸ್ಥರ ಪೈಕಿ ಮೂವರು ಮತ್ತು ಸರ್ಕಾರದ ಜಂಟಿ ಕಾರ್ಯದರ್ಶಿ ಸ್ತರದ ಒಬ್ಬ ಮುಖ್ಯ ಕಾರ್ಯನಿರ್ವಾಹಕರು.

## ಟ್ರಸ್ಟಿನ ಲಕ್ಷಣಗಳು :

- ಅಂಗವಿಕಲರು ಸಾಧ್ಯವಾದಷ್ಟು ಸ್ವತಂತ್ರರಾಗಿ ಮತ್ತು ಸ್ವಾವಲಂಬಿಗಳಾಗಿ ತಮ್ಮ ಸಮುದಾಯದಲ್ಲಿ ತಮ್ಮ ಊರು / ಹಳ್ಳಿಗಳಲ್ಲಿಯೇ ಅಥವಾ ಹತ್ತಿರದಲ್ಲಿಯೇ ನೆಲಸುವಂತೆ ಅನುಕೂಲ ಮಾಡಿಕೊಡುವುದು.
- ಅಂಗವಿಕಲರು ತಮ್ಮ ಕುಟುಂಬದೊಡನೆಯೇ ಇರಲು ಅನುಕೂಲವಾಗುವಂತೆ ಸೌಕರ್ಯಗಳನ್ನು ಒದಗಿಸುವುದು.
- ಈ ಕಾಯಿದೆಯಡಿ ನೋಂದಾಯಿಸಿಕೊAಡಿರುವ ಸಂಸ್ಥೆಗಳು ಅಂಗವಿಕಲರ ಕುಟುಂಬಗಳಿಗೆ ಬಿಕ್ಕಟ್ಟಿನ ಸಮಯದಲ್ಲಿ ಅಗತ್ಯವಾದ ಸಹಾಯ ನೀಡಲು ಅನುವು ಮಾಡಿಕೊಡುವುದು.
- ಕುಟುಂಬ ಅಥವಾ ಪರಿವಾರದ ನೆರವಿಲ್ಲದ ಅಂಗವಿಕಲರ ಸಮಸ್ಯೆಗಳನ್ನು ಪರಿಹರಿಸುವುದು.
- ಅಂಗವಿಕಲರ ವ್ಯಕ್ತಿಯ ತಂದೆ/ತಾಯಿ, ಪಾಲಕರು ತೀರಿಕೊಂಡಾಗ ಅವರ ರಕ್ಷಣೆ ಮತ್ತು ಪಾಲನೆಗೆ ಸೂಕ್ತ ಏರ್ಪಾಟು ಮಾಡುವುದು.
- ರಕ್ಷಣೆ ಮತ್ತು ಪಾಲನೆ ಅಗತ್ಯವಿರುವ ಅಂಗವಿಕಲರಿಗೆ ಪಾಲಕರನ್ನು ನೇಮಿಸುವ ಕ್ರಮವನ್ನು ರೂಢಿಸುವುದು.
- ಅಂಗವಿಕಲರಿಗೆ ಸಮಾನ ಅವಕಾಶಗಳನ್ನು ದೊರಕಿಸಿ ಕೊಡುವುದು. ಅವರ ಹಕ್ಕುಗಳನ್ನು ಕಾಪಾಡಿ ಅವರು ಸಮಾಜದಲ್ಲಿ ಸಂಪೂರ್ಣವಾಗಿ ಭಾಗವಹಿಸುವುದಕ್ಕೆ ಅನವು ಮಾಡಿಕೊಡುವುದು.
- ಈ ಮೇಲೆ ಹೇಳಿದ ಅಂಶಗಳಿಗೆ ಪೂರಕವಾಗಿ ಅಗತ್ಯವಾದ ಕೆಲಸಗಳನ್ನು ಮಾಡುವುದು.

## ಟ್ರಸ್ಟ್ (ನ್ಯಾಸ್) ಮಂಡಳಿಯ ಅಧಿಕಾರ ಮತ್ತು ಬಾಧ್ಯತೆಗಳು

ಮಂಡಳಿ ಕೇಂದ್ರ ಸರ್ಕಾರದಿಂದ ಒಂದು ನೂರುಕೋಟಿ ರೂಪಾಯಿಗಳ ಮೂಲ ಬಂಡವಾಳವನ್ನು ಪಡೆದಿದೆ. ಇದರಿಂದ ಬರುವ ಆದಾಯವನ್ನು ಅಂಗವಿಕಲರಿಗೆ ಸೂಕ್ತವಾದ ಜೀವನಮಟ್ಟವನ್ನು ಕಲ್ಪಿಸುವ ಯೋಜನೆಗಳಿಗೆ ಬಳಸಬೇಕು.

ಟ್ರಸ್ಟ್ ತನ್ನ ಉದ್ದೇಶಿತ ಕಾರ್ಯಕ್ರಮಗಳಿಗೆ ಹಾಗೂ ಅಂಗವಿಕಲರ ಪಾಲನೆ ಪೋಷಣೆಗೆಂದು ಜನರಿಂದ ಚರಾಚರ ಆಸ್ತಿಗಳನ್ನು ದಾನವಾಗಿ ಪಡೆಯಬಹುದು. ಇಂತಹ ಆಸ್ತಿಯನ್ನು ನೀಡುವವರು (ಹಣ ಉಯಿಲಿನ ಮೂಲಕವೂ ನೀಡಬಹುದು) ಆ ಮನೆ ಅಥವಾ ಆಸ್ತಿ ಯಾವುದೇ ನೇಮಿತ ಅಂಗವಿಕಲರಿಗೆ ಉಪಯೋಗಿಸಬೇಕೆಂದು ಷರತ್ತಿನೊಡನೆ ಕೊಟ್ಟಿದ್ದರೆ, ಅಂತಹ ಅಂಗವಿಕಲರಿಗೆ ತಕ್ಕಂತಹ ಜೀವನಮಟ್ಟವನ್ನು ಕಲ್ಪಿಸಿಕೊಡುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಆದರೆ ಕೊಟ್ಟಿರುವ ಎಲ್ಲ ಹಣ/ಆಸ್ತಿಯನ್ನು ಕೇವಲ ಆ ನೇಮಿತ ಅಂಗವಿಕಲರಿಗೆ ಮಾತ್ರವೇ ಖರ್ಚು ಮಾಡಬೇಕೆಂಬ ಬಾಧ್ಯತೆ ಇರುವುದಿಲ್ಲ. ಸರ್ಕಾರ ಸಮ್ಮತಿಸಿರುವ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಅಧಿಕೃತ ಸಂಘ ಸಂಸ್ಥೆಗಳಿಗೆ ಮಂಡಳಿ ಹಣ ನೀಡಬಹುದು.

### ಸರ್ಕಾರ ರೂಪಿಸಿರುವ ಉಪಕ್ರಮಗಳು

- ಅಂಗವಿಕಲರು ಸಮುದಾಯದಲ್ಲಿ ಸ್ವತಂತ್ರ ಬಾಳ್ವೆ ನಡೆಸಲು ಅನುಕೂಲವಾಗುವಂತಹ ವಾತಾವರಣ ಕಲ್ಪಿಸುವ ಕಾರ್ಯಕ್ರಮ.
- ಅಂಗವಿಕಲರು ಕುಟುಂಬದ ಸದಸ್ಯರಿಗೆ ಸಲಹೆ ಮಾರ್ಗದರ್ಶನ ನೀಡುವಂತಹ ಅಥವಾ ಅಂಗವಿಕಲರನ್ನು ನೋಡಿಕೊಳ್ಳಲು ಅಗತ್ಯವಾದ ತರಬೇತಿಯನ್ನು ನೀಡುವ ಕಾರ್ಯಕ್ರಮ.
- ವಯಸ್ಕ ಅಂಗವಿಕಲರು ಉದ್ಯೋಗ ನಿರತರಾಗಲು ತರಬೇತಿ – ಇದು ಒಂದು ಕೇಂದ್ರದಲ್ಲಾಗಬಹುದು ಅಥವಾ ಅವರವರ ಮನೆಗಳಲ್ಲಗಬಹುದು.
- ಅಂಗವಿಕಲರಿಗೆ ತಾತ್ಕಾಲಿಕವಾಗಿ ಪಾಲನೆ ಅಥವಾ ವಸತಿ ಏರ್ಪಾಡು ಮಾಡುವುದು. ಹಗಲು ಹೊತ್ತು ನೋಡಿಕೊಳ್ಳುವುದು.
- ಅಂಗವಿಕಲರಿಗೆ ವಸತಿ ಸೌಕರ್ಯದ ಏರ್ಪಾಡು.
- ಅಂಗವಿಕಲರಿಗೆ ತಮ್ಮ ಹಕ್ಕುಗಳನ್ನು ದೊರಕಿಸಿಕೊಡುವಂತಹ ಸ್ವಸಹಾಯ ಗುಂಪುಗಳ ಸ್ಥಾಪನೆ.
- ಅಂಗವಿಕಲರಿಗೆ ಪೋಷಕರನ್ನು ನೇಮಿಸಿಕೊಳ್ಳುವಂತಹ ಸ್ಥಳೀಯ ಸಾಮುದಾಯಿಕ ಸಮಿತಿಗಲ ಸ್ಥಾಪನೆ.
- ಟ್ರಸ್ಟಿನ ಲಕ್ಷ್ಯಗಳಿಗೆ ಪೂರಕವಾದಂತಹ ಇತರ ಯಾವುದೇ ಕಾರ್ಯಕ್ರಮಗಳು ಹಣ ಸಂದಾಯ ಮಾಡುವಾಗ ಅಂಗವಿಕಲ ಮಹಿಳೆಯರು, ವೃದ್ಧರು (೬೫ ವರ್ಷಕ್ಕೆ ಮೇಲ್ಪಟ್ಟವರು) ಮತ್ತು ತೀವ್ರತರವಾದ ಅಂಗವಿಕಲತೆಯುಳ್ಳವರಿಗೆ ಆದ್ಯತೆ ನೀಡಲಾಗುವುದು

### ಸ್ವಯಂ ಸೇವಾ ಸಂಸ್ಥೆಗಳು ನೋಂದಾವಣೆ :

ಅಂಗವಿಕಲರ ಸಂಘ, ಅಂಗವಿಕಲರ ಮಕ್ಕಳ ಪಾಲಕರ ಸಂಘ ಅಥವಾ ಅಂಗವಿಕಲರ ಏಳಿಗೆಯೇ ಮುಖ್ಯ ಉದ್ದೇಶವಾಗಿರುವ ಯಾವುದೇ ಸ್ವಯಂ ಸೇವಾ ಸಂಸ್ಥೆ. ಈ ಕಾಯಿದೆಯಡಿ ಟ್ರಸ್ಟಿನೊಡನೆ ನೋಂದಾಯಿಸಿಕೊಳ್ಳಬಹುದು. ಇದಕ್ಕೆ ನಿಗದಿತ ಅರ್ಜಿಯಿದೆ.

### ಸ್ಥಳೀಯ ಸಮಿತಿಗಳು :

ಟ್ರಸ್ಟಿನ ಮಂಡಳಿ ಈ ಕಾಯಿದೆಯ ಅನುಷ್ಠಾನಕ್ಕೆ ಅಗತ್ಯವಿದ್ದಲ್ಲಿ ಸ್ಥಳೀಯ ಸಮಿತಿಗಳನ್ನು ರಚಿಸಬಹುದು. ಈ ಸಮಿತಿಯ ಸದಸ್ಯರು ಹೀಗಿರುತ್ತಾರೆ. ಜಿಲ್ಲಾ ದಂಡಾಧಿಕಾರಿ ಅಥವಾ ಆಯುಕ್ತರ ಸ್ತರದ ಸರ್ಕಾರಿ ಅಧಿಕಾರಿಯೊಬ್ಬರು ನೊಂದಾಯಿತ ಸಂಸ್ಥೆಯ ಪ್ರತಿನಿಧಿಯೊಬ್ಬರು ಮತ್ತು ಕಾಯಿದೆ ಪ್ರಕಾರ ಅಂಗವಿಕಲ ಎಂದು ಗುರುತಿಸಲ್ಪಡುವ ಒಬ್ಬ ಸದಸ್ಯರು.

### ಪೋಷಕರ ನೇಮಕಾತಿ :

ಅಂಗವಿಕಲ ವ್ಯಕ್ತಿಯ ಪಾಲಕರು ಅಥವಾ ಸಂಬಂಧಿಕರು ಅಂಗವಿಕಲ ವ್ಯಕ್ತಿಗೆ ವಾರಸುದಾರ ಅಥವಾ ಪೋಷಕರೊಬ್ಬರನ್ನು ನೇಮಿಸಲು ಸ್ಥಳೀಯ ಸಂಸ್ಥೆಗೆ ಅರ್ಜಿ ಹಾಕಬಹುದು. ಇದಕ್ಕೆ ಪೋಷಕರ ಅನುಮತಿಯೂ ಇರಬೇಕು.

ಇಂತಹ ಅರ್ಜಿ ಬಂದಲ್ಲಿ ಸ್ಥಳೀಯ ಸಮಿತಿ ಅಂಗವಿಕಲ ವ್ಯಕ್ತಿಗೆ ಪೋಷಕರ ಅಗತ್ಯವಿದೆಯೇ ಮತ್ತು ಯಾವ ಉದ್ದೇಶಕ್ಕಾಗಿ ಪೋಷಕರನ್ನು ನೇಮಿಸಬೇಕು ಎಂದು ಪರಿಶೀಲಿಸಿ, ಅರ್ಜಿಯನ್ನು ನಿಯಮಗಳಿಗನುಸಾರ ಇತ್ಯರ್ಥ

ಮಾಡಬೇಕು. ಪೋಷಕರನ್ನು ನೇಮಕ ಮಾಡುವಾಗ ಅವರ ಕರ್ತವ್ಯಗಳನ್ನು ನಿಗದಿಪಡಿಸಬೇಕು. ಹೀಗೆ ನೇಮಕಗೊಂಡ ಪೋಷಕರು ಅಂಗವಿಕಲ ವ್ಯಕ್ತಿಯ ಪಾಲನೆ ಮತ್ತು ಆತನ ಆಸ್ತಿಪಾಸ್ತಿಗಳ ನಿರ್ವಹಣೆಯ ಜವಾಬ್ದಾರಿ ಹೊಂದಿದ್ದು ಈ ಬಗ್ಗೆ ನಿಯತವಾಗಿ ಲೆಕ್ಕವರದಿಗಳನ್ನು ಒಪ್ಪಿಸಬೇಕು.

ನೇಮಕವಾದ ಪೋಷಕರು ಅಂಗವಿಕಲ ವ್ಯಕ್ತಿ ಅಥವಾ ಅವರ ಆಸ್ತಿಯನ್ನು ನಿರ್ಲಕ್ಷಿಸುತ್ತಿದ್ದರೆ ಅಥವಾ ದುರುಪಯೋಗಿಸುತ್ತಿದ್ದರೆ, ಆ ಪೋಷಕರನ್ನು ತೆಗೆದುಹಾಕಬಹುದು.

**ಶಿಕ್ಷಣ / ವಿದ್ಯಾಭ್ಯಾಸ ಮತ್ತಿತರ ಕ್ಷೇತ್ರದಲ್ಲಿ ಸೌಲಭ್ಯಗಳು :**

*** ಸರಕಾರ ಈ ಕೆಳಕಂಡ ಆದೇಶಗಳನ್ನು ನೀಡಿದೆ.**

- ❖ ಅಂಗವಿಕಲರ ವಿದ್ಯಾಭ್ಯಾಸ/ಶಿಕ್ಷಣಕ್ಕೆಂದು ಸರಕಾರ ಸಂಸ್ಥೆಗಳಿಗೆ ಹಣ ಸಹಾಯ ನೀಡುತ್ತದೆ. ವಿದ್ಯಾರ್ಥಿ ಭತ್ಯೆ ಸಿಬ್ಬಂದಿ ಹಾಗೂ ಶಿಕ್ಷಕರ ವೇತನಗಳು, ಕಟ್ಟಡ ಮತ್ತು ಉಪಕರಣಗಳ ಖರ್ಚುಗಳಿಗೆ ಈ ಅನುದಾನ ಲಭ್ಯವಿದೆ.
- ❖ ಅಂಗವಿಕಲ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿದ್ದುಕೊಂಡು ಶಾಲೆಗೆ ಹೋಗುತ್ತಿದ್ದರೂ ಅಥವಾ ವಸತಿ ಶಾಲೆಯಲ್ಲಿ (ಹಾಸ್ಟೆಲ್‌ನಲ್ಲಿ) ಇದ್ದರೂ, ಅವರಿಗೆ ವಿದ್ಯಾರ್ಥಿ ಭತ್ಯೆ ದೊರೆಯುವುದು.
- ❖ ಪ್ರತಿಭಾವಂತ ವಿದ್ಯಾರ್ಥಿಗಳಿಗೆ (ಶೇ. 60% ಅಥವಾ ಮೇಲ್ಪಟ್ಟು ಅಂಕಪಡೆದ) ಪ್ರೋತ್ಸಾಹ ಧನ ನೀಡಲಾಗುವುದು.
- ❖ ಸರಕಾರೀ ಅಥವಾ ಸರಕಾರೀ ಅನುದಾನ ಪಡೆಯುತ್ತಿರುವ ಶಾಲಾ ಕಾಲೇಜುಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ 3% ಸೀಟು ಮೀಸಲಾತಿ ಇದೆ. (ಇಡಿ:39:ಯೋಸಕಾ 2000 ದಿನಾಂಕ: 19-02-2000)
- ❖ ವಿದ್ಯಾರ್ಥಿ ವೇತನ ಮತ್ತು ಉಚಿತ ಬಸ್‌ಪಾಸ್ ಪಡೆಯಲು ಪೋಷಕರ ಆದಾಯ ಮಿತಿಯ ನಿರ್ಬಂಧವಿಲ್ಲ.
- ❖ ನರ್ಸರಿಯಿಂದ ಪದವಿ ಪೂರ್ವದವರೆಗಿನ ಶಾಲಾ ಕಾಲೇಜುಗಳಲ್ಲಿ ಅಂಗವಿಕಲರಿಗೆ ತರಗತಿ ಮತ್ತು ಶೌಚಾಲಯಗಳು ನೆಲಮಹಡಿಯಲ್ಲಿರಬೇಕು.
- ❖ ಶಾಲಾ/ಕಾಲೇಜುಗಳಲ್ಲಿ ಅಂಗವಿಕಲರಿಗೆ ಪ್ರವೇಶ ನಿರಾಕರಿಸುವಂತಿಲ್ಲ. (ಶೂನ್ಯ ನಿರಾಕರಣೆ ನೀತಿ, ಇಡಿ:132:ಯೋ ಯೋ ಕ 2000 ದಿನಾಂಕ: 30-05-2000)
- ❖ ಜಿಲ್ಲಾ ಪಂಚಾಯಿತಿ/ ಆಶ್ರಯ/ ಅಂಬೇಡ್ಕರ್/ ಇಂದಿರಾ ಆವಾಸ್ ಇತ್ಯಾದಿ ವಸತಿ ಯೋಜನೆಗಳಲ್ಲಿ 3% ನಿವೇಶನಗಳನ್ನು ಅಂಗವಿಕಲರಿಗೆ ಕೊಡಬೇಕು (ಮಮ ಇ 515 ಪಿಹೆಚ್ಚಿ 2001 ದಿನಾಂಕ: 22-11-2001)

*** ಈ ಕೆಳಕಂಡ ಸೌಲಭ್ಯಗಳಿಗೆ ಆದಾಯ ಮಿತಿ ಪ್ರಮಾಣ ಪತ್ರವನ್ನು ಕೊಡಬೇಕಾಗಿಲ್ಲ.**

1. ಅಂಗವಿಕಲರಿಗೆ ವಿದ್ಯಾರ್ಥಿ ವೇತನ
2. ಉಚಿತ ಬಸ್ ಪಾಸ್
3. ಸಾಧನೆ ಸಲಕರಣೆಗಳ ಯೋಜನೆ (ಕ್ಯಾಲಿಪರ್ಸ್ ಮತ್ತು ಕ್ರಚಸ್‌ಗೆ)
4. ವಿಕಲಾಂಗವನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆ ಅಥವಾ ಕರೆಕ್ಟಿವ್ ಸರ್ಜರಿ (WCD473PHD2001.dt.28-06-2002)

   ❖ ಗುರುತಿನ ಚೀಟಿ ಇದ್ದರೆ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕಿಲ್ಲ. (ಮಮಾಅ:284(PHP 2002, DT. 14-06-2002)

- ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಆದೇಶದ ಪ್ರಕಾರ ಕುರುಡು ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಒಂದು ಗಂಟೆ ಹೆಚ್ಚು ಕಾಲಾವಕಾಶ ನೀಡಬೇಕು. (ನಿ ಆಶಾ ಎಸ್.ಎಸ್.ಎಲ್.ಸಿ./2002/ಅಂಧ ಹೆ.ರಾ.ತಾರೀಖು 07-03-2000) ಹೆಚ್ಚು ಕಾಲಾವಕಾಶ ಇದೆ.

**ಅಂಗವಿಕಲರಿಗೆ ಕರ್ನಾಟಕ ಸರ್ಕಾರದ ಯೋಜನೆಗಳು**

ಕರ್ನಾಟಕ ಸರ್ಕಾರದಲ್ಲಿ ಅಂಗವಿಕಲರ ಕಲ್ಯಾಣಕ್ಕೆಂದೇ ಪ್ರತ್ಯೇಕ ಇಲಾಖೆ ಇದೆ. ಈ ಇಲಾಖೆ ಅಂಗವಿಕಲರಿಗಾಗಿ ಆರೋಗ್ಯ, ಶಿಕ್ಷಣ, ತರಬೇತಿ, ಉದ್ಯೋಗ ಮೊದಲಾದ ಕ್ಷೇತ್ರಗಳಲ್ಲಿ ಈ ಕೆಳಕಂಡ ಸೌಕರ್ಯಗಳನ್ನು ಒದಗಿಸುತ್ತಿದೆ.

**ಶೈಕ್ಷಣಿಕ ಸೌಲಭ್ಯಗಳು :**

- ಅಂಧ ಮಕ್ಕಳಿಗೆ ವಸತಿ ಸಹಿತ 10 ನೇ ವರ್ಗದವರೆಗೆ ಉಚಿತ ಶಾಲೆ: ಮೈಸೂರು, ದಾವಣಗೆರೆ, ಹುಬ್ಬಳ್ಳಿ ಮತ್ತು ಕಲ್ಬುರ್ಗಿ.
- ಅಂಧ ಬಾಲಕಿಯರಿಗೆ ವಸತಿ ಸಹಿತ ಹತ್ತನೇ ತರಗತಿಯವರೆಗೆ ಉಚಿತ ಶಾಲೆ: ದಾವಣಗೆರೆಯಲ್ಲಿ ಕಿವುಡ ಮಕ್ಕಳಿಗೆ ಹತ್ತನೇ ತರಗತಿಯವರೆಗೆ ಶಾಲೆ: ಮೈಸೂರು, ಬೆಳಗಾವಿ, ಬಳ್ಳಾರಿ ಮತ್ತು ಗುಲ್ಬರ್ಗಾದಲ್ಲಿ.
- ವಿಶೇಷ ಶಾಲೆಗಳನ್ನು ನಡೆಸುವುದಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಧನ ಸಹಾಯ ನೀಡುತ್ತಿದೆ. ಅಂಧ ಮಕ್ಕಳಿಗೆ ವಿದ್ಯಾರ್ಥಿ ಭತ್ಯೆಯೂ ಇದೆ.

**ಪರೀಕ್ಷೆಗಳಲ್ಲಿ ಶೇಕಡಾ ೬೦ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ**

**ಗಣಕಯಂತ್ರ ತರಬೇತಿ**

ಅಂಗವಿಕಲರಿಗೆ ಮಾಹಿತಿ ತಂತ್ರಜ್ಞಾನದಲ್ಲಿ ತರಬೇತಿ ನೀಡಲು ಗಣಕ ತರಬೇತಿ ಕಾರ್ಯಕ್ರಮವೂ ಜಾರಿಯಲ್ಲಿದೆ.

**ಬ್ರೈಲ್ ಮುದ್ರಣಾಲಯ**

ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯವು ಅಂಧ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಮುದ್ರಿಸಿ ಉಚಿತವಾಗಿ ಒದಗಿಸುತ್ತಿದೆ.

**ಶ್ರವ್ಯ ಗ್ರಂಥಾಲಯ**

ಪಿ.ಯು.ಸಿ. ಮತ್ತು ಪದವಿ ಪಡೆಯುತ್ತಿರುವ ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳಿಗಾಗಿ ಪಾಠಗಳನ್ನು ಧ್ವನಿ ಮುದ್ರಿಸಿ ವಿತರಿಸುವ ಉದ್ದೇಶದಿಂದ ಇಲಾಖೆಯಲ್ಲಿ ಶ್ರವ್ಯ ಗ್ರಂಥಾಲಯವೊಂದನ್ನು ಸ್ಥಾಪಿಸಲಾಗಿದೆ.

**ಉದ್ಯೋಗ ಮತ್ತು ತರಬೇತಿ**

ಅಂಗವಿಕಲರಿಗೆ ರಾಜ್ಯ ಸರ್ಕಾರದ (ಸಿ) ಮತ್ತು (ಡಿ) ದರ್ಜೆಯ ಹುದ್ದೆಗಳಲ್ಲಿ ಶೇಕಡಾ 5 ರಷ್ಟು ಮೀಸಲಾತಿ ಇದೆ. ಸರ್ಕಾರಿ ಶಾಲೆಗಳಲ್ಲಿ ಅಂಧ ಅಭ್ಯರ್ಥಿಗಳಿಗೆ ಸಂಗೀತ ಶಿಕ್ಷಕರ ಹುದ್ದೆಗಳನ್ನು ಮೀಸಲಿಡಲಾಗಿದೆ. ಇದಕ್ಕೆ ವಯೋಮಿತಿಯಲ್ಲಿ ಹತ್ತು ವರ್ಷಗಳ ವಿನಾಯಿತಿಯೂ ಇದೆ.

**ಸ್ವಯಂ ಉದ್ಯೋಗ**

ಸ್ವಯಂ ಉದ್ಯೋಗ ಆರಂಭಿಸಲು ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ರೂ. 50,000 ವರೆಗೆ ಸಾಲ ಸೌಲಭ್ಯ ಹಾಗೂ ಇಲಾಖೆಯಿಂದ ಈ ಸಾಲದಲ್ಲಿ ಶೇ. ೨೫ರಷ್ಟು ಅಥವಾ ಗರಿಷ್ಟ ರೂ.6,250ಗಳ ಸಹಾಯಧನ ಲಭ್ಯವಿರುತ್ತದೆ.

**ದೂರವಾಣಿ ಬೂತ್‌ಗಳು**

ಅರ್ಹ ಅಂಗವಿಕಲರಿಗೆ ದೂರವಾಣಿ ಬೂತ್‌ಗಳನ್ನು ಉಚಿತವಾಗಿ ಇಲಾಖೆ ವಿತರಿಸುತ್ತದೆ.

**ಆಧಾರ ಯೋಜನೆ**

ರಸ್ತೆ ಬದಿಗಳಲ್ಲಿ ಅಂಗಡಿಯಿಟ್ಟು, ಸಣ್ಣ ಪ್ರಮಾಣದಲ್ಲಿ, ವ್ಯಾಪಾರ ನಡೆಸಲು ಉಚಿತವಾಗಿ ಪೆಟ್ಟಿಗೆ ಅಂಗಡಿ ಹಾಗೂ ಬಂಡವಾಳಕ್ಕಾಗಿ 6,000 ರೂ.ಗಳ ಸಾಲವನ್ನು ಒದಗಿಸಲಾಗುತ್ತಿದೆ.

**ಅಂಗವಿಕಲ ಉದ್ಯೋಗಿಗಳಿಗೆ ವಸತಿ ನಿಲಯ**

ಉದ್ಯೋಗದಲ್ಲಿರುವ ಹಾಗೂ ತರಬೇತಿ ಪಡೆಯುತ್ತಿರುವ ಅಂಗವಿಕಲ ಮಹಿಳೆಯರಿಗೆ ಹಾಗೂ ಪುರುಷರಿಗೆ ವಸತಿ ನಿಲಯಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

**ಹೊಸಹೆಜ್ಜೆ :**

ಅಂಗವಿಕಲರ ಆರ್ಥಿಕ ಪುನರ್ವಸತಿಗಾಗಿ ಸ್ವಯಂ ಸೇವಾ ಸಂಸ್ಥೆಗಳು ಕನಿಷ್ಠ 20 ಜನರಿಗೆ ಯಾವುದೇ ವೃತ್ತಿಯಲ್ಲಿ ತರಬೇತಿ ನೀಡಲು ಮತ್ತು ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಆರ್ಥಿಕ ನೆರವನ್ನು ನೀಡುತ್ತದೆ.

**ಅಂಗವಿಕಲರಿಗೆ ಕಾರ್ಯ ತರಬೇತಿ :**

ಅಂಗವಿಕಲ ಯುವಕ ಯುವತಿಯರಿಗೆ ವಿವಿಧ ವೃತ್ತಿಗಳಲ್ಲಿ ಕಾರ್ಯ ತರಬೇತಿ ನೀಡಿ ಸ್ವಯಂ ಉದ್ಯೋಗದಲ್ಲಿ ತೊಡಗಿಸುವ ಸಲುವಾಗಿ ತರಬೇತಿ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಸಂಪನ್ಮೂಲ ಶಿಕ್ಷಕರಿಗೆ ತರಬೇತಿ :**

ಸಾಮಾನ್ಯ ಶಾಲೆಗಳ ಹಾಗೂ ವಿಶೇಷ ಶಾಲೆಗಳ ಶಿಕ್ಷಕರಿಗೆ ಅಂಗವಿಕಲ ವಿದ್ಯಾರ್ಥಿಗಳಿಗೆ ಕಲಿಸುವ ಕ್ರಮದಲ್ಲಿ ಮತ್ತು ಸಮನ್ವಯ ಶಿಕ್ಷಣದಲ್ಲಿ ತರಬೇತಿ ನೀಡುವ ಕಾರ್ಯಕ್ರಮವನ್ನು ಇಲಾಖೆ ನಡೆಸುತ್ತಿದೆ.

**ಕೇಂದ್ರ ಸರ್ಕಾರದ ಸೌಲಭ್ಯಗಳು :**

1. ಬುದ್ಧಿ ದೋಷವುಳ್ಳ ಮಕ್ಕಳ ಶಿಕ್ಷಣಕ್ಕೆ ವಿಶೇಷ ನೆರವು.
2. ಅಂಧರು ರೈಲಿನಲ್ಲಿ ಪ್ರಯಾಣಿಸಲು ಶೇ. 75ರಷ್ಟು ರಿಯಾಯಿತಿ ನೀಡಿದೆ. ಅಂಧರ ಜೊತೆಯಲ್ಲಿ ಸಹಾಯಕರಾಗಿ ಪ್ರಮಾಣ ಮಾಡುವವರಿಗೆ ಕೂಡಾ ಈ ಸೌಲಭ್ಯ ಲಭ್ಯವಿದೆ. ಬುದ್ಧಿ ದೋಷ, ದೈಹಿಕ ದೋಷವುಳ್ಳವರಿಗೂ ರೈಲು ಪ್ರಯಾಣದಲ್ಲಿ ಶೇ. 75ರಷ್ಟು ರಿಯಾಯಿತಿ ಇದೆ. ಶ್ರವಣ ದೋಷವುಳ್ಳವರಿಗೆ ಶೇ.50 ರಷ್ಟು ರೈಲು ಪ್ರಯಾಣದಲ್ಲಿ ರಿಯಾಯಿತಿ ಇದೆ. ಅಂಧರಿಗೆ ವಿಮಾನ ಪ್ರಯಾಣದಲ್ಲಿ ಶೇ. 50ರಷ್ಟು ರಿಯಾಯಿತಿ ಇದೆ. ಆದರೆ ಇವರ ಸಹಾಯಕರಾಗಿ ಪ್ರಯಾಣ ಮಾಡುವವರಿಗೆ ಯಾವುದೇ ರಿಯಾಯಿತಿ ಇರುವುದಿಲ್ಲ.
3. ಅಂಧರಿಗೆ ಅಂಚೆ ಶುಲ್ಕದಲ್ಲಿ ವಿನಾಯಿತಿ ಇದೆ.
4. ಅಂಗವಿಕಲ ಮಕ್ಕಳಿಗೆ ಸಮನ್ವಯ ಶಿಕ್ಷಣ ಯೋಜನೆ ಸೌಲಭ್ಯ.
5. 9ನೇ ತರಗತಿ ಹಾಗೂ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ.

6. ಅಂಗವಿಕಲರಿಗೆ (ಬುದ್ಧಿದೋಷವುಳ್ಳವರನ್ನು ಹೊರತುಪಡಿಸಿ) ಉದ್ಯೋಗದಲ್ಲಿ ಶೇ.3ರಷ್ಟು ಹುದ್ದೆಗಳನ್ನು ಮೀಸಲಾಗಿಡಲಾಗಿದೆ. ಹಾಗೂ ನೇಮಕಾತಿಯಲ್ಲಿ ಅಂಗವಿಕಲರಿಗೆ ಗರಿಷ್ಠ ವಯೋಮಿತಿಯಲ್ಲಿ 10 ವರ್ಷಗಳ ಸಡಿಲಿಕೆ ನೀಡಲಾಗಿದೆ.
7. ಸಾಧನ ಸಲಕರಣೆಗಳ ಯೋಜನೆ.
8. ವೃತ್ತಿಪರ ಪುನರ್ವಸತಿ ಕೇಂದ್ರಗಳಲ್ಲಿ ಅಂಗವಿಕಲರ ವ್ಯಕ್ತಿಗಳಿಗೆ ಆದ್ಯತೆ ನೀಡುವ ಸೌಲಭ್ಯವಿದೆ.
9. ಜಿಲ್ಲಾ ಪುನರ್ವಸತಿ ಕೇಂದ್ರ.
10. ಇಂಧನ ಕಂಪನಿಗಳಿಂದ ಅಂಗವಿಕಲರಿಗೆ ಆದ್ಯತೆಯ ಮೇರೆ ಡೀಲರ್‌ಶಿಪ್ ನೀಡುವುದು.

## ಕರ್ನಾಟಕದಲ್ಲಿರುವ ವಿಕಲಚೇತನ ವಿದ್ಯಾಸಂಸ್ಥೆಗಳು

**ಹೆಚ್ಚಿನ ಮಾಹಿತಿಗಾಗಿ ಗಮನಿಸಿ.**

ಕರ್ನಾಟಕದಲ್ಲಿರುವ ವಿಕಲಚೇತನ ವಿದ್ಯಾಸಂಸ್ಥೆಗಳ ಕುರಿತು ಸರ್ವ ಶಿಕ್ಷಣ ಅಭಿಯಾನ ಮಿಶನ್ ಕರ್ನಾಟಕ ಪ್ರಕಟಿಸಿರುವ "ಸಮನ್ವಯ ಶಿಕ್ಷಣ ಬೋಧಕರ ಕೈಪಿಡಿ"ಯ ಪುಟ ಸಂಖ್ಯೆ 86 ರಿಂದ 89 ರವರೆಗೆ.

## ಉಪಸಂಹಾರ

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೆಂಬಲ( ಸಮನ್ವಯ ಶಿಕ್ಷಣ ) ಈ ಮೊಡ್ಯೂಲ್ ಕೇವಲ ಭಾಗಿದಾರರಿಗೆ ಮತ್ತು ಅನುಪಾಲನಾಧಿಕಾರಿಗಳಿಗೆ ಸಮನ್ವಯ ಶಿಕ್ಷಣದ ಜ್ಞಾನವನ್ನು ಕಟ್ಟಿಕೊಡುವ ಕೆಲಸವನ್ನು ಮಾತ್ರ ಮಾಡಿರದೆ; ತರಬೇತಿಯನ್ನು ಪಡೆದುಕೊಂಡ ಎಲ್ಲರೂ ಕ್ಷೇತ್ರಕ್ಕೆ ಹೋದ ನಂತರ ತಮ್ಮದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡುವಂತೆ ಅಭಿಪ್ರೇರಣೆಯನ್ನು ಪಡೆಯುವಷ್ಟರ ಮಟ್ಟಿಗೆ ಸಾಹಿತ್ಯವು ಅತ್ಯಂತ ವಿಶೇಷವಾದ ನಾವಿಣ್ಯಯುತ ಚಟುವಟಿಕೆಗಳನ್ನು ಒಳಗೊಂಡಿದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದ ಯಶೋಗಾಥೆಗಳನ್ನು ಸಾಂದರ್ಭಿಕವಾಗಿ ಪ್ರಸ್ತುತಪಡಿಸಲಾಗಿದೆ. ವಿಶೇಷ ಅಗತ್ಯವುಳ್ಳ ಮಕ್ಕಳ ಬಗ್ಗೆ ನಡೆಸಿದ ಅಧ್ಯಯನಗಳ ಜಾಲ ಗೋಷ್ಠಿಗಳ ಲಿಂಕ್ ಗಳನ್ನು ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಹೆಚ್ಚುವರಿ ಓದಿನ ಪುಸ್ತಕಗಳನ್ನು ಅಥವಾ ಪರಾಮರ್ಶನ ಗ್ರಂಥಗಳನ್ನು ಸಾಹಿತ್ಯದಲ್ಲಿ ನೀಡಲಾಗಿದೆ.

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಅವರ ವಿಕಾಸದ ಭಾಗವಾಗಿರುವ ಅನುಪಾಲನಾಧಿಕಾರಿಗಳು ತಮ್ಮ ಕ್ಷೇತ್ರ ಭೇಟಿಯ ಸಮಯದಲ್ಲಿ ಈ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಅವರಿಗೆ ಬೆಂಬಲ ನೀಡುವ ಅಗತ್ಯವಿದೆ ಎಂದು ಈ ಸಾಹಿತ್ಯ ಪ್ರತಿಪಾದಿಸುತ್ತದೆ. ಯಾವುದೇ ಕಾರ್ಯಗಳು ಯಶಸ್ವಿ ಯಾಗಬೇಕಾದರೆ ಆ ವಿಷಯದ ಜ್ಞಾನವನ್ನು ಅರಿತರೆ ಮಾತ್ರ ಸಾಕಾಗುವುದಿಲ್ಲ; ಅದರ ಬದಲಾಗಿ ಭಾಗಿದಾರರ ಮನೋಧೋರಣೆಗಳು ಬದಲಾದಾಗ ಮಾತ್ರ ಸಂಬಂಧಿಸಿದ ಯೋಜನೆಗಳ ಅನುಷ್ಠಾನ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದು ಈ ಸಾಹಿತ್ಯದಲ್ಲಿಯ ಯಶೋಗಾಥೆಗಳು ತಿಳಿಸುತ್ತವೆ.

## ಪರಾಮರ್ಶನ ಗ್ರಂಥಗಳು


01. Dayana Vincent : ಸಂಪೂರ್ಣ ಸೇರ್ಪಡೆ - 2022 fourth wave foundation Bengaluru

02. DSERT: ಸಮನ್ವಿತಾ (ಪುಟ ಸಂಖ್ಯೆ 26, 27, 49, 50 ನೋಡಿ

03. ಕೆ.ಎಸ್.ಒ.ಯು – ಸಮನ್ವಯ ಶಿಕ್ಷಣ ಕೋರ್ಸ -11. 2019

04. ಸರ್ವ ಶಿಕ್ಷಣ ಅಭಿಯಾನ ಮಿಷನ್ ಕರ್ನಾಟಕ : ಸಮನ್ವಯ ಶಿಕ್ಷಣ -2009

05. Families with Special Needs Children and Stress: Research Review

06. Children with Special Needs and the Effect on the Family

# ಸಂಪನ್ಮೂಲ ಜಾಲ ಕೊಂಡಿಗಳು


**ಅಧ್ಯಯನ ವರದಿಗಳು**

1. https://www.helpguide.org/articles/autism-learning-disabilities/learning-disabilities-and-disorders.htm
2. https://www.verywellmind.com/learning-disabilities-types-causes-symptoms-and-treatment-6386232
3. http://weeklyad.toysrus.com/ToysRUs/BrowseByPage/Index/?StoreID=2561953&PromotionID=104616&PromotionViewMode=2

**ಯಶೋಗಾಥೆಗಳು**

1. https://www.boredpanda.com/special-children-there-are-success-stories-as-well/
2. https://www.sadhanawelfare.org/index.php/success-stories/
3. https://www.mindshealer.com/uncategorized/top-10-success-stories-for-special-needs-children/
4. https://youtu.be/3KYrsvcuOQA?si=htHLAT7GZ6qqTMuN

## ಅನುಬಂಧಗಳು

| | |
|---|---|
| ಕಲಮು 2 | ಕಾನೂನು ಮಸೂದೆಯಲ್ಲಿ ಉಪಯೋಗಿಸಲ್ಪಡುವಂತಹ ಹಲವು ಶಬ್ದ ಪ್ರಯೋಗಗಳಿಗೆ ಅಂದರೆ ಸಮುಚಿತ ಸರ್ಕಾರ, ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯನಿರ್ವಾಹಕ ಸಮಿತಿ, ವಿಶೇಷ ಉದ್ಯೋಗ ವಿನಿಮಯ ಕೇಂದ್ರ ರಾಜ ಸಮನ್ವಯ ಸಮಿತಿ ಇತ್ಯಾದಿಗಳಿಗೆ ವ್ಯಾಖ್ಯಾನಗಳನ್ನು ಕೊಡುವ ಅವಕಾಶವನ್ನು ಕಲ್ಪಿಸುತ್ತದೆ. |
| ಕಲಮು 3 | ಕೇಂದ್ರ ಸಮನ್ವಯ ಸಮಿತಿ ಸ್ಥಾಪನೆಯ ವಿವರಣೆ. |
| ಕಲಮು 4 | ಸಮಿತಿಯ ಸದಸ್ಯರ ಕಾಲ ಹಾಗೂ ಸೇವೆಯ ನಿಬಂಧನೆಗಳ ವಿವರಣೆ. |
| ಕಲಮು 5 | ಸದಸ್ಯರ, ಸಮಿತಿಯ ಸದಸ್ಯತ್ವಕ್ಕೆ ಅನರ್ಹರಾಗುವ ಬಗೆಗಿನ ವಿವರಣೆ. |
| ಕಲಮು 6 | ಸದಸ್ಯರ ಅನರ್ಹತೆಯ ಪರಿಣಾಮ. |
| ಕಲಮು 7 | ಕೇಂದ್ರ ಸಮನ್ವಯ ಸಮಿತಿಯ ಕಾರ್ಯವಿಧಾನ ಇತ್ಯಾದಿ. |
| ಕಲಮು 8 | ಕೇಂದ್ರ ಸಮನ್ವಯ ಸಮಿತಿ ರಾಷ್ಟ್ರೀಯ ಮಟ್ಟದಲ್ಲಿ ಅಂಗವಿಕಲರ ಸಮಸ್ಯೆ ಮತ್ತು ಪರಿಹಾರಗಳಿಗೆ ವ್ಯಾಪಕವಾದ ನೀತಿಯನ್ನು ರಚಿಸಲು ಇರುವ ಅವಕಾಶಗಳ ವಿವರಣೆ. |
| ಕಲಮು 9 | ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸ್ಥಾಪನೆಯ ವಿವರಣೆ. |
| ಕಲಮು 10 | ಕೇಂದ್ರ ಕಾರ್ಯನಿರ್ವಾಹಕ ಮಿತಿಗೆ ಕೇಂದ್ರ ಸಮನ್ವಯ ಸಮಿತಿಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯ ಕಲ್ಪನೆ. |
| ಕಲಮು 11 | ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಕಾರ್ಯವಿಧಾನವನ್ನು ಕಲ್ಪಿಸುತ್ತದೆ. |
| ಕಲಮು 12 | ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ತನ್ನ ಕಾರ್ಯ ನಿರ್ವಾಹಣೆಗಾಗಿ ವ್ಯಕ್ತಿಗಳನ್ನು ಸಂಯೋಜಿಸಲು ಅವಕಾಶ ಕಲ್ಪಿಸುತ್ತದೆ. |
| ಕಲಮು 13 | ರಾಜ್ಯ ಸಮನ್ವಯ ಸಮಿತಿಯ ಸ್ಥಾಪನೆಗೆ ಅವಕಾಶ ಕಲ್ಪಿಸುತ್ತದೆ. |
| ಕಲಮು 14 | ರಾಜ್ಯ ಸಮನ್ವಯ ಸಮಿತಿಯ ಸದಸ್ಯರ ಕಾಲ ಮತ್ತು ಸೇವೆಯ ನಿಬಂಧನೆಗಳನ್ನು ಒಳಗೊಂಡಿರುತ್ತದೆ. |
| ಕಲಮು 15 | ರಾಜ್ಯ ಸಮನ್ವಯ ಸಮಿತಿಯ ಸದಸ್ಯರ ಅನರ್ಹತೆಯ ವಿವರಣೆ. |
| ಕಲಮು 16 | ರಾಜ್ಯ ಸಮನ್ವಯ ಸಮಿತಿಯ ಸದಸ್ಯರ ಅನರ್ಹತೆಯ ಪರಿಣಾಮವನ್ನು ವಿವರಿಸುತ್ತದೆ. |
| ಕಲಮು 17 | ರಾಜ್ಯ ಸಮನ್ವಯ ಸಮಿತಿ ಸಭೆಗಳ ಕಾರ್ಯವಿಧಾನ. |

| | |
|---|---|
| ಕಲಮು 18 | ರಾಜ್ಯ ಸಮನ್ವಯ ಸಮಿತಿ ಅಂಗವಿಕಲಾಂಗ ವ್ಯಕ್ತಿಗಳ ರಾಜ್ಯದ ಕೇಂದ್ರ ಬಿಂದುವಾಗಿ ಕಾರ್ಯನಿರ್ವಹಿಸಲು ಮತ್ತು ಅನುಕೂಲಗಳನ್ನು ಮಾಡಿಕೊಡುವ ಅಥವಾ ತೊಂದರೆಯನ್ನು ನಿವಾರಿಸಲು ನೀತಿಯನ್ನು ರಚಿಸುವ ಅವಕಾಶ. |
| ಕಲಮು 19 | ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸ್ಥಾಪನೆಯ ರಾಜ್ಯ ಸಮನ್ವಯ ಸಮಿತಿಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಕಲ್ಪಿಸುತ್ತದೆ. |
| ಕಲಮು 20 | ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ರಾಜ್ಯ ಸಮನ್ವಯ ಸಮಿತಿಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಕಲ್ಪಿಸುತ್ತದೆ. |
| ಕಲಮು 21 | ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಗಳಿಗೆ ಕಾರ್ಯವಿಧಾನಗಳನ್ನು ಕಲ್ಪಿಸುತ್ತದೆ. |
| ಕಲಮು 22 | ರಾಜ್ಯ ಕಾರ್ಯನಿರ್ವಾಹಕ ಸಮಿತಿ ತನ್ನ ಕಾರ್ಯನಿರ್ವಹಣೆಗಾಗಿ ವ್ಯಕ್ತಿಗಳನ್ನು ಸಂಯೋಜಿಸಲು ಅವಕಾಶ ಕಲ್ಪಿಸುತ್ತದೆ. |
| ಕಲಮು 23 | ಕೇಂದ್ರ ಸಮನ್ವಯ ಸಮಿತಿಗೆ ಕೇಂದ್ರ ಸರ್ಕಾರವು ಆದೇಶ ನೀಡಲು ಅಧಿಕಾರ ಕೊಡುತ್ತದೆ. ಹಾಗೂ ರಾಜ್ಯ ಸರ್ಕಾರವು ರಾಜ್ಯ ಸಮನ್ವಯ ಸಮಿತಿಗೆ ಆದೇಶಿಸಲು ಅಧಿಕಾರ ಕೊಡುತ್ತದೆ. |
| ಕಲಮು 24 | ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯನಿರ್ವಾಹಕ ಸಮಿತಿ, ರಾಜ್ಯ ಸಮನ್ವಯ ಸಮಿತಿ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಯಲ್ಲಿ ಖಾಲಿ ಇರುವ ಸ್ಥಾನಗಳಿಂದ ಸಭಾ ಕಾರ್ಯಗಳನ್ನು ರದ್ದಾಗದಂತೆ ಅನುವು ಮಾಡಿಕೊಡುತ್ತದೆ. |
| ಕಲಮು 25 | ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಿಗಳು, ಅಂಗವಿಕಲತೆಯ ತಡೆಗಟ್ಟುವಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 26 | ಅಂಗವಿಕಲ ವ್ಯಕ್ತಿಗಳಿಗೆ ಸಮುಚಿತ ಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರಗಳಿಂದ 18 (ಹದಿನೆಂಟು) ವರ್ಷ ತುಂಬುವವರೆಗೂ ಉಚಿತ ಶಿಕ್ಷಣದ ಭರವಸೆ ಕೊಡಲು ಅನವು ಮಾಡಿಕೊಡುತ್ತದೆ. |
| ಕಲಮು 27 | ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಕಾರ್ಯಕಾರಿ ಹಾಗೂ ಔಪಚಾರಿಕವಲ್ಲದ ಶಿಕ್ಷಣವನ್ನು ಒದಗಿಸಲು ವಿಧಾನ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಅಧಿಕಾರ ಕೊಡುತ್ತದೆ. |
| ಕಲಮು 28 | ಅಂಗವಿಕಲ ಮಕ್ಕಳ ಪಾಠೋಪಕರಣಗಳ ತಂತ್ರಜ್ಞಾನಗಳನ್ನು ಮತ್ತು ಕಲಿಕೆಯ ಮಾರ್ಗದರ್ಶನದ ಸಂಶೋಧನೆಗೆ ಸರ್ಕಾರದಿಂದ ಅಥವಾ ಅಧಿಕಾರೇತರ ಸಂಸ್ಥೆಗಳ ಮೂಲಕ ವೃದ್ಧಿಗೊಳಿಸಲು ಅವಕಾಶ ಕಲ್ಪಿಸುತ್ತದೆ. |
| ಕಲಮು 29 | ಅಂಗವಿಕಲ ವ್ಯಕ್ತಿಗಳಿಗೆ ಬೋಧಿಸಲು ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲು ಶಿಕ್ಷಕರ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಅಧಿಕಾರ ಸಮುಚಿತ ಸರ್ಕಾರಗಳಿಗೆ ಕೊಡುತ್ತದೆ. |
| ಕಲಮು 30 | ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಂಗವಿಕಲ ಮಕ್ಕಳಿಗಾಗಿ ಸಾರಿಗೆ ಸೌಲಭ್ಯ, ಪುಸ್ತಕ ಹಾಗೂ ಸಮವಸ್ತ್ರಗಳನ್ನು ಸರಬರಾಜು ಮಾಡಲು ಪೂರ್ವ ಸಿದ್ಧತೆಗೆ ಅನುವು ಮಾಡಿಕೊಡುತ್ತದೆ ಹಾಗೂ ಅಂತಹ ಮಕ್ಕಳಿಗಾಗಿ ವಿಶೇಷ ಪರೀಕ್ಷೆಗಳಲ್ಲಿ ಸೂಕ್ತ ಮಾರ್ಪಾಡು ಮಾಡಲು ಅವಕಾಶ ಕಲ್ಪಿಸುತ್ತದೆ. |
| ಕಲಮು 31 | ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಅಂಧ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವದಕ್ಕೆ ಪ್ರೇರೇಪಿಸುತ್ತದೆ. |
| ಕಲಮು 32 | ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಾಗಿಡುವಂತಹ ಉದ್ಯೋಗಗಳನ್ನು ಗುರುತಿಸುವುದಕ್ಕೆ ಅನವು ಮಾಡಿಕೊಡುತ್ತದೆ. |

| | |
|---|---|
| ಕಲಮು 33 | ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಶೇ ೨ರಷ್ಟು ಉದ್ಯೋಗಗಳನ್ನು ಗುರುತಿಸುವುದಕ್ಕೆ ಅನವು ಮಾಡಿಕೊಡುತ್ತದೆ. |
| ಕಲಮು 34 | ಸಮುಚಿತ ಸರ್ಕಾರಗಳು ಸಾರ್ವಜನಿಕ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳ ಉದ್ಯೋಗದ ನೇಮಕಾತಿಗಾಗಿ ಒದಗಿಸುವ ಬಗ್ಗೆ ಮಾಹಿತಿ ನೀಡುತ್ತದೆ. |
| ಕಲಮು 35 | ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಯಾವುದೇ ವ್ಯಕ್ತಿಯನ್ನು, ಸಾರ್ವಜನಿಕ ಸಂಸ್ಥೆಯ ಅಧೀನದಲ್ಲಿರುವ ಯಾವುದೇ ದಾಖಲೆಯನ್ನು ಪರೀಕ್ಷಿಸಲು ನೇಮಿಸುವುದಕ್ಕೆ ಅಧಿಕಾರ ಕೊಡುತ್ತದೆ. |
| ಕಲಮು 36 | ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಾಗಿರುವ ಉದ್ಯೋಗವಕಾಶಗಳನ್ನು ಮುಂಬರುವ ವರ್ಷಗಳಲ್ಲಿ ನೇಮಕಾತಿಗಾಗಿ ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಡುತ್ತದೆ. |
| ಕಲಮು 37 | ಸಮುಚಿತ ಸರ್ಕಾರಗಳಿಗೆ ಸಾರ್ವಜನಿಕ ಸಂಸ್ಥೆಯ ಮಾಲೀಕರು ತಮ್ಮ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳ ನೇಮಕಾತಿ ಕುರಿತು ದಾಖಲೆಗಳ ಸಂರಕ್ಷಣೆ ಮಾಡುವಂತೆ ನಿಯಮಗಳನ್ನು ತರಲು ಅನವು ಮಾಡಿಕೊಡುತ್ತದೆ. |
| ಕಲಮು 38 | ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳಿಗೆ ಅಂಗವಿಕಲ ವ್ಯಕ್ತಿಗಳಿಗಾಗಿ ನೇಮಕಾತಿಯನ್ನು ನಿಶ್ಚಿತಗೊಳಿಸಿರುವ ವ್ಯವಸ್ಥೆಗಳನ್ನು ಸೂತ್ರರೂಪದಲ್ಲಿ ವ್ಯಕ್ತಗೊಳಿಸಲು ಅಧಿಕಾರ ಕೊಡುತ್ತದೆ. |
| ಕಲಮು 39 | ಎಲ್ಲಾ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಹಾಗೂ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇತರೆ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಕನಿಷ್ಠ ಪಕ್ಷ ಶೇ.೩ರಷ್ಟು ಮೀಸಲಾತಿ ಇಡಲು ಅನುವು ಮಾಡಿಕೊಡುತ್ತದೆ. |
| ಕಲಮು 40 | ಸಮುಚಿತ ಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರ ಅಂಗವಿಕಲರಿಗೆ ಬಡತನ ನಿರ್ಮೂಲನಾ ಯೋಜನೆಗಳ ಕೆಳಗೆ ಕನಿಷ್ಠ ಪಕ್ಷ ಶೇ.೩ರಷ್ಟು ಸ್ಥಾನಗಳನ್ನು ಮೀಸಲಾತಿಯ ಅವಕಾಶವನ್ನು ಕಲ್ಪಿಸುತ್ತದೆ. |
| ಕಲಮು 41 | ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿನ ನಿಯೋಜಕರು ಕನಿಷ್ಠ ಶೇ. ೫ರಷ್ಟು ಮೀಸಲಾತಿಯನ್ನು ಅಂಗವಿಕಲ ವ್ಯಕ್ತಿಗಳಿಗೆ ನೀಡಿದ್ದ ಪಕ್ಷದಲ್ಲಿ ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾಗಳು ತಮ್ಮ ಹಣಕಾಸಿನ ಪರಿಮಿತಿಗಳ ನಡುವೆ ಅಂತಹ ನಿಯೋಜಕರಿಗೆ ನೀಡಬಹುದಾದ ಪ್ರೋತ್ಸಾಹಗಳ ವಿವರಣೆ. |
| ಕಲಮು 42 | ಸಮುಚಿತ ಸರ್ಕಾರಗಳಿಗೆ, ಅಂಗವಿಕಲ ವ್ಯಕ್ತಿಗಳಿಗಾಗಿ ಉಪಯುಕ್ತ ಸಹಾಯ ಹಾಗೂ ಸಲಕರಣೆ ಒದಗಿಸುವ ವ್ಯವಸ್ಥೆಯನ್ನು ಮಾಡಲು ಆದೇಶ ಕೊಡುತ್ತದೆ. |
| ಕಲಮು 43 | ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಮನೆ, ಮನರಂಜನೆ ಕೇಂದ್ರ ವಿಶೇಷ ಶಾಲೆ, ಸಂಶೋಧನಾ ಕೇಂದ್ರ ಇತ್ಯಾದಿಗಳ ನಿರ್ಮಾಣಕ್ಕಾಗಿ ನಿವೇಶನ ಸೌಕರ್ಯ ಒದಗಿಸಲು ಅವಕಾಶವನ್ನು ಕಲ್ಪಿಸುತ್ತದೆ. |
| ಕಲಮು 44 | ಸಾರಿಗೆ ಕ್ಷೇತ್ರದಲ್ಲಿರುವ ಸಾರ್ವಜನಿಕ ಸಂಸ್ಥೆಗಳು, ಅಂಗವಿಕಲ ವ್ಯಕ್ತಿಗಳು ಸುಲಭವಾಗಿ ಪ್ರಯಾಣಿಸಲು ರೈಲು ಭೋಗಿಗಳಲ್ಲಿ, ಬಸ್ಸುಗಳಲ್ಲಿ, ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಒಳಬರಲು ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 45 | ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರಿಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸುಲಭ ಚಾಲನೆಗೆ ರೈಲ್ವೇ ಪ್ಲಾಟ್ ಫಾರಂಗಳಲ್ಲಿ ಮತ್ತು ಜೀಬ್ರಾ ಕ್ರಾಸಿಂಗ್‌ನಲ್ಲಿ ಗಾಲಿಕುರ್ಚಿಗಳ ಸುಲಭ ಚಾಲನೆಯು ಸೇರಿದಂತೆ ಇನ್ನಿತರ ಅನುಕೂಲಗಳನ್ನು ಕಲ್ಪಿಸಲು ಅನುವು ಮಾಡಿಕೊಡುತ್ತದೆ. |

| | |
|---|---|
| ಕಲಮು 46 | ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಶೌಚಾಲಯಗಳಲ್ಲಿ ಸುಲಭ ಚಲನೆ ಹಾಗೂ ಲಿಫ್ಟ್ ಳಲ್ಲಿ ಶಬ್ದ ಸಂಕೇತಗಳನ್ನು ಅಳವಡಿಸಿ ಅಂಗವಿಕಲರಿಗೆ ಅನುಕೂಲವಾಗುವಂತೆ ಮಾಡಲು ಅನುವು ಮಾಡಿಕೊಡುತ್ತದೆ. |
| ಕಲಮು 47 | ಯಾವುದೇ ನೌಕರ ತನ್ನ ಸೇವೆ ಕಾಲದಲ್ಲಿ ವಿಕಲಾಂಗನಾದರೆ ಅವನ ಉದ್ಯೋಗ ಖಾತ್ರಿಯ ವಿಷಯದಲ್ಲಿ ವಿವರಣೆ ಪ್ರೇರೇಪಿಸುತ್ತದೆ. |
| ಕಲಮು 48 | ಸಮುಚಿತ ಸರ್ಕಾರಗಳ ಹಾಗೂ ಸ್ಥಳೀಯ ಪ್ರಾಧಿಕಾರಗಳ ಅಂಗವಿಕಲತೆಯನ್ನು ತಡೆಗಟ್ಟುವ ಅಂಗವಿಕಲ ವ್ಯಕ್ತಿಯ ಪುನರ್ವಸತಿ ಹಾಗೂ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆಯಲ್ಲಿ ಪ್ರೋತ್ಸಾಹಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 49 | ಸಮುಚಿತ ಸರ್ಕಾರಗಳು, ವಿಶ್ವವಿದ್ಯಾಲಯ ಹಾಗೂ ಇತರ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ವಿಶೇಷ ಶಿಕ್ಷಣದ ಪುನರ್ ಸ್ಥಾಪನೆ ಹಾಗೂ ಮಾನವರ ಶಕ್ತಿಯನ್ನು ವಿಕಾಸಗೊಳಿಸುವುದಕ್ಕಾಗಿ ಸಂಶೋಧನೆ ಮಾಡಲು ಹಣಕಾಸಿನ ನೆರವನ್ನು ಒದಗಿಸುತ್ತದೆ. |
| ಕಲಮು 50 | ಕಾಯ್ದೆಯ ಉದ್ದೇಶಕ್ಕಾಗಿ ಯೋಗ್ಯ ಅಧಿಕಾರಿಯನ್ನು ನೇಮಿಸಲು ರಾಜ್ಯ ಸರ್ಕಾರವು ಅನುವು ಮಾಡಿಕೊಡುತ್ತದೆ. |
| ಕಲಮು 51 | ಸೂಕ್ತ ಅಧಿಕಾರಿಯಿಂದ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳಿಗೆ ಪಂಜೀಕರಿಸಲು (ನೋಂದಣಿ) ಅನುವು ಮಾಡಿಕೊಡುತ್ತದೆ. |
| ಕಲಮು 52 | ಸೂಕ್ತ ಅಧಿಕಾರಿಗಳಿಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳ ಪ್ರಮಾಣ ಪತ್ರಕ್ಕೆ ಪಂಜೀಕರಿಸಲು (ನೋಂದಣಿ) ಅನುಮತಿ ಕೊಡಲು ಅನುವು ಮಾಡಿಕೊಡುತ್ತದೆ. |
| ಕಲಮು 53 | ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವ ಅಧಿಕಾರವನ್ನು ಸೂಕ್ತ ಅಧಿಕಾರಿಗಳಿಗೆ ನೀಡುತ್ತದೆ. |
| ಕಲಮು 54 | ಸೂಕ್ತ ಅಧಿಕಾರಿಯ ನೋಂದಣಿ ಪ್ರಮಾಣ ಪತ್ರಕ್ಕೆ ಅನುಮತಿ ಕೊಡಲು ಅಥವಾ ಅದನ್ನು ರದ್ದುಪಡಿಸಲು ನಿರಾಕರಿಸಿದರೆ ಅದರ ವಿರುದ್ಧ ರಾಜ್ಯ ಸರ್ಕಾರದಲ್ಲಿ ಅಪೀಲನ್ನು ಸಲ್ಲಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 55 | ಅಂಗವಿಕಲ ಮಕ್ಕಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟಿರುವ ಹಾಗೂ ಸಂರಕ್ಷಣೆಗೆ ಒಳಪಟ್ಟಿರುವ ವ್ಯಾಪ್ತಿಯನ್ನು ಈ ಅಧ್ಯಾಯ ನಿರೂಪಿಸುತ್ತದೆ. |
| ಕಲಮು 56 | ಸಮುಚಿತ ಸರ್ಕಾರವು ತೀವ್ರ ಅಂಗವಿಕಲರೆಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗಾಗಿ ಸಂಸ್ಥೆಯನ್ನು ಸ್ಥಾಪಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 57 | ಕೇಂದ್ರ ಸಮನ್ವಯ ಸಮಿತಿಗೆ ಮುಖ್ಯ ಆಯುಕ್ತರನ್ನು ನೇಮಿಸುವ ಹಾಗೂ ಅವರ ಸಂಬಳ, ಭತ್ಯೆ, ಸೇವಾ ನಿಯಮಗಳನ್ನು ನಿಗಧಿಗೊಳಿಸಲು ಅವಕಾಶ ಕಲ್ಪಿಸುತ್ತದೆ. |
| ಕಲಮು 58 | ಮುಖ್ಯ ಆಯುಕ್ತರ ಕರ್ತವ್ಯಗಳನ್ನು ತಿಳಿಸುತ್ತದೆ. |
| ಕಲಮು 59 | ಸಂಯುಕ್ತ ಸರ್ಕಾರಗಳು ಹಾಗೂ ಸ್ಥಳೀಯ ಅಧಿಕಾರಿಗಳು ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಹೊರಡಿಸಿರುವ ಕಾನೂನು ನಿಯಮ, ನಿಬಂಧನೆ ಹಾಗೂ ಆಜ್ಞೆಗಳನ್ನು ಜಾರಿಗೊಳಿಸದೆ ಇದ್ದ ಪಕ್ಷದಲ್ಲಿ ಅಥವಾ ಅವರ ಹಕ್ಕುಗಳಿಗೆ ಧಕ್ಕೆಯುಂಟಾದಲ್ಲಿ ಅಂಗವಿಕಲ ವ್ಯಕ್ತಿಗಳ ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಲು ಮುಖ್ಯ ಆಯುಕ್ತರಿಗೆ ಅಧಿಕಾರ ವಹಿಸುತ್ತದೆ. |

| | |
|---|---|
| ಕಲಮು 60 | ಅಂಗವಿಕಲತೆಯುಳ್ಳ ವ್ಯಕ್ತಿಗಳ ಕಾಯ್ದೆಯ ಉದ್ದೇಶಕ್ಕಾಗಿ ಆಯುಕ್ತರನ್ನು ನೇಮಿಸಲು ರಾಜ್ಯ ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆ. ಈ ನಿಯಮ ಮುಖ್ಯ ಆಯುಕ್ತರಿಗೆ ಒದಗಿಸಿರುವ ನೌಕರರ ಹಾಗೂ ಅಧಿಕಾರಿಗಳ ಸಂಬಳ, ಭತ್ಯೆ ಹಾಗೂ ಇತರ ನಿಯಮಗಳನ್ನು ವಿವರಿಸುತ್ತದೆ. |
| ಕಲಮು 61 | ಆಯುಕ್ತರ ಅಧಿಕಾರಗಳನ್ನು ವಿವರಿಸುತ್ತದೆ. |
| ಕಲಮು 62 | ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಹೊರಡಿಸುವ ಕಾನೂನು, ನಿಯಮ ಹಾಗೂ ಆಜ್ಞೆಗಳನ್ನು ಜಾರಿಗೊಳಿಸದೆ ಇದ್ದ ಪಕ್ಷದಲ್ಲಿ ಅಥವಾ ಅವರ ಹಕ್ಕುಗಳಿಗೆ ಧಕ್ಕೆಯುಂಟಾದಲ್ಲಿ ಇವರು ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಲು ಮುಖ್ಯ ಆಯುಕ್ತರಿಗೆ ಅಧಿಕಾರ ವಹಿಸುತ್ತದೆ. |
| ಕಲಮು 63 | ಮುಖ್ಯ ಆಯುಕ್ತರಿಗೆ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ತರಿಸಿಕೊಳ್ಳುವುದು, ಸಾಕ್ಷಿಗಳನ್ನು ವಿಚಾರಿಸುವುದು ಮುಂತಾದ ಕಾರ್ಯಗಳಿಗೆ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಕಲ್ಪಿಸುತ್ತದೆ. |
| ಕಲಮು 64 | ಮುಖ್ಯ ಆಯುಕ್ತರು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದಕ್ಕಾಗಿ ಹಿಂದಿನ ಹಣಕಾಸಿನ ವರ್ಷದ ಕಾರ್ಯಕ್ರಮದ ವಿವರಗಳನ್ನು ಕೊಟ್ಟು ವಾರ್ಷಿಕ ವರದಿಯನ್ನು ತಯಾರಿಸಲು ಅನುವು ಮಾಡಿಕೊಡುತ್ತದೆ. ಈ ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸಲು ಅವಕಾಶ ಕಲ್ಪಿಸಿಕೊಡುತ್ತದೆ. |
| ಕಲಮು 65 | ವಾರ್ಷಿಕ ವರದಿ ಮತ್ತು ಲೆಕ್ಕಪತ್ರವನ್ನು ತಯಾರಿಸಲು ರಾಜ್ಯದ ಆಯುಕ್ತರಿಗೆ ಹಿಂದಿನ ವರ್ಷದ ವರದಿಯನ್ನು ತಯಾರಿಸಲು, ಅದನ್ನು ಶಾಸನ ಸಭೆಗಳ ಮುಂದೆ ಮಂಡಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 66 | ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳಿಗಾಗಿ ಪುನರ್ ವಸತಿಯನ್ನು ಕಲ್ಪಿಸುವ ಹೊಣೆಯನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 67 | ಸಂಯುಕ್ತ ಸರ್ಕಾರದಿಂದ ಅದರ ಅಂಗವಿಕಲ ನೌಕರರ ಒಳಿತಿಗಾಗಿ ವಿಮೆ ವ್ಯವಸ್ಥೆಯನ್ನು ರೂಪಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 68 | ಸಂಯುಕ್ತ ಸರ್ಕಾರದಿಂದ ಅಂಗವಿಕಲ ವ್ಯಕ್ತಿಗಳಿಗಾಗಿ ನಿರುದ್ಯೋಗ ಭತ್ಯೆಯನ್ನು ನೀಡುವ ಸಲುವಾಗಿ ವಿಧಾನವನ್ನು ರೂಪಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 69 | ವಂಚನೆಯಿಂದ ಅಂಗವಿಕಲ ವ್ಯಕ್ತಿಗಳಿಗಾಗಿರುವ ಸೌಲಭ್ಯಗಳನ್ನು ಪಡೆಯಲು ಯಾವುದೇ ವ್ಯಕ್ತಿ ಯತ್ನಿಸಿದರೆ ಅಂತಹ ವ್ಯಕ್ತಿಗಳಿಗೆ ಎರಡು ವರ್ಷಗಳ ಸೆರಮನೆ ಶಿಕ್ಷೆಯನ್ನು ಮತ್ತು ದಂಡವನ್ನು ವಿಧಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 70 | ಮುಖ್ಯ ಆಯಕ್ತರ ಸಿಬ್ಬಂದಿ ಭಾರತ ದಂಡ ಸಂಹಿತೆ ೨೧ರ ಪ್ರಕಾರ ಸರ್ಕಾರಿ ನೌಕರರೆಂದು ಪರಿಗಣಿಸಲು ಅವಕಾಶ ಕಲ್ಪಿಸುತ್ತದೆ. |
| ಕಲಮು 71 | ಈ ಕಾಯ್ದೆಯನ್ನು ಕಾರ್ಯಗತಗೊಳಿಸುವ ದೆಸೆಯಲ್ಲಿ, ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಿಗಳ ಪ್ರಾಮಾಣಿಕ ಪ್ರಯತ್ನವನ್ನು ರಕ್ಷಿಸಲು ಅನುವು ಮಾಡಿಕೊಡುತ್ತದೆ. |
| ಕಲಮು 72 | ಈ ಕಾಯ್ದೆಯ ಅನ್ವಯ ಹೊಂದಿರುವ ಅವಕಾಶಗಳು ನಿತ್ಯದಲ್ಲಿ ಬದಲಾವಣೆಯಲ್ಲಿರುವ ಹಾಗೂ ಅಂಗವಿಕಲ ಮಕ್ಕಳಿಗೆ ಪ್ರಯೋಜನವಾಗಿರುವ ಬೇರಾವುದೇ ಕಾನೂನಿಗೆ ಪೂರಕವಾಗಿದೆ ಮತ್ತು ವಿರುದ್ಧವಾಗಿರುವುದಿಲ್ಲವೆಂಬುದನ್ನು ಕಲ್ಪಿಸುತ್ತದೆ. |

| | |
|---|---|
| ಕಲಮು 73 | ಸಂಯುಕ್ತ ಸರ್ಕಾರಕ್ಕೆ ಈ ಕಾಯ್ದೆಯನ್ನು ಕಾರ್ಯರೂಪಗೊಳಿಸಲು ನಿಯಮವನ್ನು ಮಾಡುವ ಅಧಿಕಾರ ಕೊಡುತ್ತದೆ. ಕೇಂದ್ರ ಸರ್ಕಾರಕ್ಕೆ ಹೊರಡಿಸಿರುವ ಪ್ರಕಟಣೆಗಳು ನಿಯಮಗಳು ಹಾಗೂ ವ್ಯವಸ್ಥೆಯನ್ನು ಸಂಸತ್ತಿನ ೨ ಸಭೆಗಳ ಮುಂದೆ ಮಂಡಿಸಲು ಮತ್ತು ರಾಜ್ಯ ಸರ್ಕಾರವು ಹೊರಡಿಸಿರುವ ನಿಯಮಗಳ ಮತ್ತು ವ್ಯವಸ್ಥೆಗಳನ್ನು ರಾಜ್ಯ ಶಾಸನ ಸಭೆಯ ೨ ಸದನಗಳಲ್ಲಿ ಮಂಡಿಸಲು ಅನುವು ಮಾಡಿಕೊಡುತ್ತದೆ. |

**1987ರ ಅಧಿನಿಯಮ 39ರ ತಿದ್ದುಪಡಿ.** ಷರಾ : ಕಾನೂನಿಗೆ ಸಂಬಂಧಿಸಿದಂತೆ ವಿಷಯಗಳಿಗೆ ಹಾಗೂ ಇತರ ವಿವರಗಳಿಗೆ ಅಂಗವಿಕಲರ ಅಧಿನಿಯಮ 1995ರ ಮೂಲಪ್ರತಿಯನ್ನು ನೋಡಬಹುದು.

## ನನ್ನ ಕಲಿಕೆ- ನನ್ನ ಯೋಜನೆ

ತರಗತಿಯಲ್ಲಿ ಪಡೆದ ಅನುಭವಗಳನ್ನು ಕಾರ್ಯಾಗಾರದ ಕಲಿಕೆ ಮತ್ತು ಒಳನೋಟಗಳ ಅನುಷ್ಠಾನ ಕಾರ್ಯಾಗಾರದಲ್ಲಿ ಪಡೆದ ಅನುಭವಗಳನ್ನು ನನ್ನ ಶಾಲೆ / ತರಗತಿಯಲ್ಲಿ ಅನುಷ್ಠಾನಗೊಳಿಸಲು ನಾನು ರೂಪಿಸಿಕೊಂಡ ಯೋಜನೆ

ಶಿಭಿರಾರ್ಥಿಯ ಹೆಸರು ಮತ್ತು ವಿಳಾಸ : ____________________________________________

ಮಾಡ್ಯೂಲ್ ನ ಹೆಸರು : ____________________________________________________

ಕಾರ್ಯಾಗಾರದ ದಿನಾಂಕ : __________________________________________________

**ಈ ಕಾರ್ಯಾಗಾರದಲ್ಲಿ ನನ್ನ ಕಲಿಕೆ ಮತ್ತು ಒಳನೋಟಗಳು**

| ಕಲಿಕೆ | ಒಳನೋಟ |
|---|---|
| **01.** | |
| **02.** | |

| | |
|---|---|
| **03.** | |
| **04.** | |
| **05.** | |
| **06.** | |
| **07.** | |
| **08.** | |

1. ಈ ಕಾರ್ಯಾಗಾರದಿಂದ ನನ್ನಲ್ಲಾದ ಬದಲಾವಣೆಗಳು

2. [illegible]
ಯೋಜನೆ ರೂಪಿಸಿಕೊಂಡಿರುತ್ತೇನೆ.

| ಕ್ರ.ಸಂ. | ಕಾರ್ಯಾಗಾರದಲ್ಲಿ ಪಡೆದ ಒಳನೋಟ | ಈ ಕಲಿಕೆ /ಒಳನೋಟಗಳ ಅನುಷ್ಠಾನಕ್ಕೆ ರೂಪಿಸಿಕೊಂಡ ಯೋಜನೆ | ಒಳನೋಟಗಳನ್ನು ಬಳಸಬಹುದಾದ ಸಂದರ್ಭಗಳು /ಅವಧಿ/ ತಿಂಗಳು | ಅನುಷ್ಠಾನಗೊಳಿಸಿದ ಬಗೆ |
|---|---|---|---|---|
| | | | | |

3. ವಿಶೇಷ ಅಗತ್ಯವುಳ್ಳ ಮಕ್ಕಳ ನೈಜ ಪರಿಸ್ಥಿತಿ, ಸಮಸ್ಯೆ ಅಥವಾ ಸವಾಲುಗಳನ್ನು ಅರ್ಥೈಸಿಕೊಳ್ಳುವುದು. ಹಾಗೂ ಸೂಕ್ತ ಪರಿಹಾರ ಕಂಡುಕೊಳ್ಳುವುದು.

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129

ಇ–ಮೇಲ್ : sislepdirector.dwd@gmail.com